# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಜುಲೈ, ೨೦೨೦ ಸಂಪಾದಕ : ಡಿ.ಎಸ್. ನಾಗಭೂಷಣ ಸಂಪುಟ: ೯ ಸಂಚಿಕೆ: ೬

ಚಂದಾ ರೂ. ೩೫೦/- (೨೦೨೦ರ ಮಾರ್ಚ್‌ನಿಂದ ೨೦೨೧ರ ಸೆಪ್ಟಂಬರ್‌ವರೆಗೆ) ಪುಟ: ೨೦ ಬೆಲೆ: ರೂ. ೨೫/-

ವಿಳಾಸ: ಎಚ್.ಐ.ಜಿ.-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

ದೂ: ೦೮೧೮೨-೨೪೮೫೭೪ ಸಂಚಾರಿ: ೯೪೪೯೨ ೪೨೨೮೪ *ಈ ಮೇಲ್:* dsnagabhushana@gmail.com

## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ

ದೇಶದಲ್ಲಿ ಈಗ ಇದ್ದಕ್ಕಿದ್ದಂತೆ ಸಾರ್ವಜನಿಕ ಚರ್ಚೆಯ ವಿಷಯ ವಸ್ತು ಕೊರೋನಾ ಉಪಟಳದಿಂದ ಭಾರತ-ಚೀನಾ ಸಂಘರ್ಷದತ್ತ ಬದಲಾಗಿದೆ. ಪತ್ರಿಕೆ-ಟಿವಿ-ಸಾಮಾಜಿಕ ಜಾಲತಾಣಗಳ ಎಲ್ಲ ವೇದಿಕೆಗಳಲ್ಲಿ ಈ ಸಂಘರ್ಷದ ಬಗೆಗೇ ವರದಿಗಳು, ವ್ಯಾಖ್ಯಾನಗಳು, ವಾಗ್ಯುದ್ಧಗಳು. ಹಾಗೆಂದು ಕೊರಾನಾದ ಕರಿ ನೆರಳಿನ ತೀವ್ರತೆಯೇನೂ ಕಡಿಮೆಯಾಗಿಲ್ಲ. ಬದಲಾಗಿ ಜಾಸ್ತಿಯೇ ಆಗಿದೆ. ಸರ್ಕಾರ ಈ ಉಪಟಳವನ್ನು ತಡೆಯುವಲ್ಲಿ ಬೇರೆ ದೇಶಗಳಿಗೆ ಹೋಲಿಸಿದರೆ ನಮ್ಮ ಸಾಧನೆ ಗಮನಾರ್ಹವಾಗಿದೆ ಎಂದು ಹೇಳಿಕೊಳ್ಳುತ್ತಿರುವ ಸಂದರ್ಭದಲ್ಲೇ ಕೊರೋನಾ ಸೋಂಕಿತರ ಸಂಖ್ಯೆಯಲ್ಲಿ ಭಾರತ ಜಗತ್ತಿನಲ್ಲಿ ಅಮೆರಿಕಾ ಮತ್ತು ಬ್ರೆಜಿಲ್‌ಗಳ ನಂತರ ಮೂರನೇ ಸ್ಥಾನದಲ್ಲಿದೆ. ವಿಶೇಷವಾಗಿ, ದೆಹಲಿ, ಮುಂಬೈ ಮತ್ತು ಚೆನ್ನೈ ನಗರಗಳಲ್ಲಿ ಸೋಂಕು ತೀವ್ರ ಗತಿಯಲ್ಲಿ ಹರಡುತ್ತಿದ್ದು, ಸ್ಥಿತಿ ಭಯಾನಕವಾಗಿದೆ; ಚಿಕಿತ್ಸೆಯ ಸೌಲಭ್ಯಗಳ ಕೊರತೆ ಎದುರಾಗಿದೆ.

.ಇಂತಹ ಕಷ್ಟದ ಸಂದರ್ಭದಲ್ಲಿ ಚೀನಾ ಆರಂಭಿಸಿರುವ ಗಡಿ ತಂಟೆ ದೇಶದ ಜನರ ಚಿಂತೆಗೆ ಕಾರಣವಾಗಿರುವುದು ಸಹಜವೇ. ಆದರೆ ಸರ್ಕಾರ ಈ ಹೊಸ ಉಪಟಳವನ್ನು ಹೇಗೆ ಎದುರಿಸುತ್ತಿದೆ? ಈ ವಿಷಯದಲ್ಲಿ ಅದು ಯಾವ ಧೋರಣೆಯನ್ನು ಅನುಸರಿಸುತ್ತಿದೆ ಹಾಗೂ ಅದು ಎಷ್ಟು ಸಾಧು ಮತ್ತು ಪರಿಣಾಮಕಾರಿಯಾಗಿದೆ ಎಂಬ ಪ್ರಶ್ನೆಗಳನ್ನು ಕೇಳುವುದೇ ದೇಶದ್ರೋಹಿ, ಚೀನೀ ಏಜೆಂಟರೆಂಬ ಪಟ್ಟಕ್ಕೆ ಆಹ್ವಾನ ಎಂಬಂತೆ ಈ ಚರ್ಚೆಗಳ ದಿಕ್ಕನ್ನೇ ಸರ್ಕಾರದ ಕಡೆಯ ಜನ ಬದಲಿಸಹೊರಟಿರುವಂತೆ ಕಾಣುತ್ತಿರುವುದು ಈ ವಿಷಯದಲ್ಲಿ ಸರ್ಕಾರದ ಧೋರಣೆ ಅನುಮಾನಾಸ್ಪದವಾಗಿದೆ ಎಂಬ ಶಂಕೆ ಹುಟ್ಟಿಸುವಂತಿದೆ. ಚೀನಾದೊಡನೆಯ ಗಡಿ ಸಂಬಂಧವಾದ ಘರ್ಷಣೆ ನಮ್ಮ ದೇಶಕ್ಕೆ ಹೊಸದೇನಲ್ಲ. ೧೯೬೨ರಲ್ಲಿ ಒಂದು ಯುದ್ಧವೇ ನಡೆದುಹೋಗಿತ್ತು. ಆಗ ಈಗಿನ ಭಾಜಪದ ಮೂಲಾವತಾರವಾದ ಭಾರತೀಯ ಜನಸಂಘದ ನಾಯಕರೂ ಸೇರಿದಂತೆ ವಿರೋಧ ಪಕ್ಷಗಳು ಆಗಿನ ಕಾಂಗ್ರೆಸ್ ಸರ್ಕಾರದ ಮೇಲೆ, ನಿರ್ದಿಷ್ಟವಾಗಿ ಪ್ರಧಾನಿ ನೆಹ್ರೂ ಅವರ ಮೇಲೆ ಮುಗಿಬಿದ್ದಿದ್ದ ರೀತಿಗೆ ಹೋಲಿಸಿದರೆ ವಿರೋಧ ಪಕ್ಷಗಳು ಇಂದು ಕೇಳುತ್ತಿರುವ ಪ್ರಶ್ನೆಗಳು ತೀರಾ ಸಾಮಾನ್ಯವಾದವು. ಚೀನಾ ಏನಾದರೂ ನಮ್ಮ ಪ್ರದೇಶವನ್ನು ಅತಿಕ್ರಮಿಸಿದೆಯಾ? ಇಲ್ಲದಿದ್ದರೆ ಜೂನ್ ೧೫ರ ರಾತ್ರಿ ನಮ್ಮ ಸೇನೆಯ ಇಪ್ಪತ್ತು ಯೋಧರನ್ನು ಬಲಿ ತೆಗೆದುಕೊಂಡು, ಇನ್ನಷ್ಟು ಜನರನ್ನು ಗಾಯಗೊಳಿಸಿದ್ದಲ್ಲದೆ ನಮ್ಮ ಹತ್ತು ಯೋಧರನ್ನು ಒತ್ತೆ ತೆಗೆದುಕೊಳ್ಳಲು ಕಾರಣವಾದ ಗಾಲ್ವಾನ್ ಕಣಿವೆಯಲ್ಲಿ ನಡೆದ ಘರ್ಷಣೆಗೆ ಕಾರಣವೇನು? ಪ್ರಧಾನ ಮಂತ್ರಿಗಳೇನೋ ಸರ್ವ ಪಕ್ಷಗಳ ಸಭೆಯಲ್ಲಿ ನಮ್ಮ ಪ್ರದೇಶದಲ್ಲಿ ಯಾವ ಅತಿಕ್ರಮಣವೂ ಆಗಿಲ್ಲ ಎಂಬ ಸಗಟು ಉತ್ತರ ನೀಡಿರುವರಾದರೂ, ಈ ಘಟನೆಯ ನಂತರವೂ ಗಡಿಯಲ್ಲಿ ಚೀನಾ ನಡೆಸಿರುವ ಭಾರಿ ಪ್ರಮಾಣದ ಸೇನಾ ಜಮಾವಣೆಯ ಕಾರಣದಿಂದಾಗಿ ಅಲ್ಲಿ ಮುಂದುವರೆದಿರುವ ಪ್ರಕ್ಷುಬ್ಧ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಈ ಉತ್ತರ ವಿರೋಧ ಪಕ್ಷಗಳು, ನಿರ್ದಿಷ್ಟವಾಗಿ ಕಾಂಗ್ರೆಂಸ್ ಪಕ್ಷ ಕೇಳುತ್ತಿರುವ ಪ್ರಶ್ನೆಗಳಿಗೆ ಸಾಲದೆನಿಸುತ್ತದೆ. ಇದು, ಚೀನಾ ಕುರಿತ ಈ ಸರ್ಕಾರದ ಧೋರಣೆ ಮೃದುವಾಗಿದೆ, ಹಾಗಿದ್ದಲ್ಲಿ ಅದಕ್ಕೇನು ಕಾರಣ ಎಂಬ ಪ್ರಶ್ನೆಗಳನ್ನು ಹುಟ್ಟಿಸುತ್ತದೆ.

ರಾಜೀವ್ ಗಾಂಧಿಯವರು ಪ್ರಧಾನಮಂತ್ರಿಯಾಗಿದ್ದಾಗ ಅವರು ೧೯೮೮ರಲ್ಲಿ ಬೀಜ್ಹಿಂಗ್‌ಗೆ ಭೇಟಿ ನೀಡಿ ಎರಡೂ ದೇಶಗಳ ಪರಸ್ಪರ ಸಂಬಂಧದಲ್ಲಿ ಸುಧಾರಣೆಗೆ ನಾಂದಿ ಹಾಡಿದ ನಂತರ ಮೋದಿಯವರು ಪ್ರಧಾನಿಯಾದ ಮೇಲೆ ಆ ದೇಶದೊಂದಿಗೆ ನಮ್ಮ ಸಂಬಂಧ ಹೊಸ ಶಕೆಯನ್ನು ಆರಂಭಿಸಿದ್ದು ಎಂದು ಹೇಳಬಹುದು. ಚೀನಾದ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರೊಂದಿಗೆ ವೈಯಕ್ತಿಕ ನೆಲೆಯ ಸಂಬಂಧವನ್ನು ರೂಢಿಸಿಕೊಂಡು ಅವರನ್ನು ಅಹಮದಾಬಾದ್‌ಬಾದ್‌ಗೆ ಆಹ್ವಾನಿಸಿ ಅವರನ್ನು ಬೆಳ್ಳಿಯ ಉಯ್ಯಾಲೆಯಲ್ಲಿ ಕೂರಿಸಿ ಮಹಾ ಸತ್ಕಾರ ನೀಡಿ ನಂತರ ಮಹಾಬಲಿಪುರಂನಲ್ಲಿ ರತ್ನಗಂಬಳಿ ಹಾಸಿ ಅವರನ್ನು ಆಹ್ವಾನಿಸಿ ಆ ದೇಶದಿಂದ ವಿವಿಧ ಕ್ಷೇತ್ರಗಳಲ್ಲಿ, ವಿಶೇಷವಾಗಿ ನಮ್ಮ ಸೇನಾ ವಲಯಕ್ಕೂ ಅನ್ವಯವಾಗುವಂತೆ ವಿದ್ಯುನ್ಮಾನ ಸಂವಹನಾ ಬಿಡಿಭಾಗಗಳಿಗೆ ಸಂಬಂಧಿಸಿದಂತೆ ಭಾರಿ ಹೂಡಿಕೆಗಳನ್ನು ಪಡೆಯುವಲ್ಲಿ ಯಶಸ್ವಿಯಾಗಿ ಅದು ತಮ್ಮ ವಿದೇಶಾಂಗ ನೀತಿಯ ಮಹತ್ಸಾಧನೆ ಎಂದು ಬೀಗಿ ಅದರ ಕೀರ್ತಿಯನ್ನು ತಮ್ಮದಾಗಿಸಿಕೊಂಡ ಮೋದಿಯವರು ಈಗ ಆ ದೇಶದ ಮಿಲಿಟರಿ ನೀತಿಯನ್ನು ಕಂಡು ಪೆಚ್ಚಾಗಿದ್ದರೆ ಆಶ್ಚರ್ಯವಿಲ್ಲ. ಇಂದು ದೇಶದಲ್ಲಿ ಚೀನಾದ ಉದ್ಯಮಗಳ ಪಾಲುದಾರಿಕೆ ಎಷ್ಟು ವ್ಯಾಪಕವಾಗಿದೆ ಎಂದರೆ ಮೋದಿ ಭಕ್ತರು ಈಗ ದೇಶಕ್ಕೆ ಕೊಡುತ್ತಿರುವ ಚೀನಾ ಉತ್ಪನ್ನಗಳನ್ನು ನಿಷೇಧಿಸಿ ಎಂಬ ಕರೆಯೂ, ಸರ್ಕಾರದ ಕಡೆಯಿಂದ ಚೀನೀಯರಿಗೆ ನೀಡಿರುವ ಕೆಲ ಯೋಜನೆಗಳ ಗುತ್ತಿಗೆಗಳ ರದ್ದತಿ ನಿರ್ಧಾರಗಳೂ ನಾವು ತುಂಬ ತಡವಾಗಿ ಎಚ್ಚೆತ್ತುಕೊಂಡಿದ್ದರ ಫಲಗಳಂತೆ ಮಾತ್ರ ಕಾಣುತ್ತಿದೆ. ಚೀನಾದಂತಹ ಅಂತಾರಾಷ್ಟ್ರೀಯ ರಾಜಕಾರಣದಲ್ಲಿ ಪಳಗಿದ ರಾಷ್ಟ್ರದೊಡನೆಯ ನೀತಿ ಬದಲಾವಣೆ ದೇಶದ ಕಣ್ಸೆಳೆಯುವ ಸಾಧನೆಗಾಗಿ ಮಾಡುವಂಥದಲ್ಲ; ಅದಕ್ಕೆ ಅಂತಾರಾಷ್ಟ್ರೀಯ ಸಂಬಂಧಗಳನ್ನು ದೀರ್ಘ ಕಾಲ ನಿರ್ವಹಿಸಿದ ಅನುಭವದ ಪ್ರಬುದ್ಧತೆಯೂ ಬೇಕೆಂದು ಕಾಣುತ್ತದೆ.

ಅಂದ ಮಾತ್ರಕ್ಕೆ ನಾವು ಚೀನಾ ಎದುರು ದುರ್ಬಲ ಸ್ಥಾನದಲಿದ್ದೇವೆ ಎಂದಲ್ಲ. ವಿದೇಶಾಂಗ ನೀತಿಯನ್ನು ಟಿವಿ ಪರದೆಗಳ ಮೇಲಿನ ಮತ್ತು ಸಾಮಾಜಿಕ ಜಾಲತಾಣಗಳಲ್ಲಿನ 'ಚೀನಾದ ಸೈನ್ಯ ಉಡೀಸ್!' 'ಚೀನಾದ ಸೈನಿಕರನ್ನು ಅಟ್ಟಾಡಿಸಿಕೊಂಡು ಹೊಡೆದ ಭಾರತೀಯ ಸೇನೆ', 'ಭಾರತೀಯ ಸೇನೆಯ ರಣಕೇಕೆ' ಇತ್ಯಾದಿ ಅಗ್ಗದ ದೇಶಪ್ರೇಮದ ವರಸೆಗಳನ್ನು ಬಿಟ್ಟು ಚೀನಾದ ಈ ಅನಿರೀಕ್ಷಿತ ವರ್ತನೆಗೆ ಕಾರಣಗಳೇನು ಎಂದು ತಣ್ಣನೆಯ ಮನಸ್ಸಿನೊಂದಿಗೆ ವಿಮರ್ಶಿಸಿ ಅದಕ್ಕೆ ತಕ್ಕ ಪರಿಹಾರಗಳನ್ನು ರೂಪಿಸಬೇಕಿದೆ. ಆ ತನ್ನ ದೇಶದಲ್ಲಿನ ಕರೋನ ಉಪಟಳದಿಂದ ಕಂಗಾಲಾಗಿರುವ ಚೀನಾದ ಅಧ್ಯಕ್ಷ ಪಿಂಗ್ ಆಂತರಿಕವಾಗಿ ರಾಜಕೀಯ ಅಭದ್ರತೆಗೆ ಸಿಕ್ಕಿರುವುದರಿಂದ ನಮ್ಮ ಗಡಿಯಲ್ಲಿ ಮಾತ್ರವಲ್ಲ, ದ.ಚೀನ ಸಮುದ್ರ ಮತ್ತು ತೈವಾನ್ ಖಾರಿಯಲ್ಲೂ ತನ್ನ ಮಿಲಿಟರಿ ತೋಳ್ಬಲದ ಪ್ರದರ್ಶನದ ಮೂಲಕ ಅವರು ತಮ್ಮ ಪ್ರಭಾವವನ್ನು ಉಳಿಸಿಕೊಳ್ಳಲು ಮಾಡುತ್ತಿರುವ ಪ್ರಯತ್ನವಿದು ಎಂಬುದು ಈ ಬಿಕ್ಕಟ್ಟಿನ ಒಂದು ವಿಶ್ಲೇಷಣೆಯಾದರೆ, ಭಾರತ ಜಮ್ಮು ಮತ್ತು ಕಾಶ್ಮೀರದ ವಿಷಯದಲ್ಲಿ ಮಾಡಿರುವ ಸಾಂವಿಧಾನಿಕ ಬದಲಾವಣೆ ಮತ್ತು ಚೀನಾ ತನ್ನದೆಂದು ಹೇಳಿಕೊಳ್ಳುತ್ತಿರುವ ಅಕ್ಸಾಯ್ ಚಿನ್‌ಗೆ ತಾಗಿಕೊಂಡಿರುವ ಆಕ್ರಮಿತ ಕಾಶ್ಮೀರವನ್ನು ಮರಳಿ ಪಡೆಯುವುದಾಗಿ ಮಾಡಿರುವ ಘೋಷಣೆ ಕಾರಣವಾಗಿರಬಹುದು ಎಂಬುದು ಇನ್ನೊಂದು ವಿಶ್ಲೇಷಣೆ. ಅದೇನೇ ಆಗಿರಲಿ, ಮೋದಿ ಸರ್ಕಾರ ಈ ಸನ್ನಿವೇಶವನ್ನು ಉಲ್ಬಣಗೊಳ್ಳದಂತೆ ನೋಡಿಕೊಂಡು ಈ ಬಿಕ್ಕಟ್ಟು ಪರಿಹರಿಸುವ ಮಾರ್ಗವನ್ನು ಸರ್ವಪಕ್ಷಗಳ ಸಹಕಾರದೊಡನೆ, ವಿಶೇಷವಾಗಿ ಈ ಕೇತ್ರದಲ್ಲಿ ಅನುಭವವಿರುವ ರಾಜತಾಂತ್ರಿಕರೊಡನೆಯ ಸಮಾಲೋಚನೆಗಳ ಮೂಲಕ ರೂಪಿಸುವ ಮುತ್ಸದ್ದಿತನನವನ್ನು ತೋರಬೇಕಿದೆ.

ಇನ್ನು, ಕೊರೋನಾದ ಹಿನ್ನೆಲೆಯಲ್ಲಿ ಜನಾಭಿಪ್ರಾಯ ಸಂಘಟನೆಯ ಕೆಲಸ ಕಷ್ಟವಾಗಿರುವ ಈ ಸಂದರ್ಭವನ್ನು ಬಳಸಿಕೊಂಡು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಭೂಮಿ, ಕೃಷಿ ಮಾರಾಟ, ಕಾರ್ಮಿಕ ವಲಯಗಳಿಗೆ ಸಂಬಂಧಿಸಿದಂತೆ ದೀರ್ಘಕಾಲಿಕ ಪರಿಣಾಮ ಬೀರಬಹುದಾದ ಮತ್ತು ವ್ಯಾಪಕ ಚರ್ಚೆಗಳನ್ನು ಬೇಡುವ ಕಾನೂನು ತಿದ್ದುಪಡಿಗಳಿಗೆ ಸಂಬಂಧಿಸಿದಂತೆ ಸುಗ್ರೀವಾಜ್ಞೆಗಳಿಗೆ ಮೊರೆ ಹೋಗುತ್ತಿರುವುದು ಮತ್ತು ಸಿಎಎ ಸಂಬಂಧಿತವಾಗಿ ಕೆಲ ಬಿಜೆಪಿ ನಾಯಕರ ಪ್ರಚೋದನದಾತ್ಮಕ ಘೋಷಣೆ/ಭಾಷಣಗಳಿಂದಾಗಿ ಉಂಟಾದ ದೆಹಲಿಯ ಕೋಮು ಗಲಭೆಗಳಿಗೆ ಸಂಬಂಧಿಸಿದಂತೆ, ಸದರಿ ಆರೋಪಿಗಳನ್ನು ಬಿಟ್ಟು ಯೋಗೇಂದ್ರ ಯಾದವ್, ಹರ್ಷ ಮಂದರ್ ಮುಂತಾದ ಸಾಮಾಜಿಕ ಕಾರ್ಯಕರ್ತರ ಮೇಲೆ ಕೊಲೆ ಮೊಕದ್ದಮೆಗಳನ್ನು ದಾಖಲಿಸುತ್ತಿರುವುದು ಅತ್ಯಂತ ನಾಚಿಕೆಗೇಡಿನ ಸಂಗತಿಯಾಗಿದೆ.

**-ಸಂಪಾದಕ**

# ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

'ಹೊಸ ಮನುಷ್ಯ' ಆಗಲೇ ಒಂಬತ್ತನೇ ವರ್ಷದಲ್ಲಿದ್ದು ೧೧೧ನೇ ಸಂಚಿಕೆಗೆ ದಟ್ಟ, ನಿಶ್ಚಲ ಅಡಿ ಇಟ್ಟಿದ್ದಾನೆ. ಇನ್ನೇನು ಹತ್ತು ವರುಷದ ಸಮಾರಂಭಕ್ಕೆ ಸಿದ್ಧವಾಗಬೇಕಿದೆ! ಈ ಬಾರಿಯ ಸಂಚಿಕೆಯ (ಜೂನ್, ೨೦೨೦) ಸಂಪಾದಕ ಟಿಪ್ಪಣಿಯು ದೇಶದ ಆಡಳಿತ ಚುಕ್ಕಾಣಿ ಹಿಡಿದವರ ಪೊಳ್ಳು ಆಶ್ವಾಸನೆಗಳು ಮತ್ತು ಸುಳ್ಳು ಭರವಸೆಗಳನ್ನು ಸಾರ್ವಜನಿಕರ ಗಮನಕ್ಕೆ ತರುವ ಗಂಭೀರ ಪ್ರಯತ್ನ. ಹಿರಿಯ ಕವಯತ್ರಿ ಸವಿತಾನಾಗಭೂಷಣರ ಕಥೆಗಾರ್ತಿ ದಿವಂಗತ ಶಾಂತಾದೇವಿ ಕಣವಿ ಅವರನ್ನು ಕುರಿತು ಬರೆದ ಸವಿನೆನಪಿನ ಟಿಪ್ಪಣಿ ಸಂದರ್ಭೋಚಿತವಾದ ಬರೆಹ.

**–ಕಮಲಾ ಹಂಪನಾ,** ಬೆಂಗಳೂರು

'ಹೊಸ ಮನುಷ್ಯ'ದಂತಹ ಸಣ್ಣ ಪತ್ರಿಕೆ ನೂರು ಸಂಚಿಕೆಗಳನ್ನು ದಾಟಿ ಮುನ್ನಡೆದಿರುವುದು ನಿಜವಾಗಿಯೂ ಕುತೂಹಲದ ಸಂಗತಿಯೇ. ನಿಸರ್ಗದತ್ತ ಅವಧೂತರನ್ನು ಪರಿಚಯಿಸುವ ಓಎಲ್ಎನ್‌ರ ಲೇಖನ, ಅವರ ಸಾಧನೆಯನ್ನು ಏಳು ಆಂಶಗಳಿಂದ ಹಿಡಿದಿರಿಸಿದ್ದು–'ಹೊಸ ಮನುಷ್ಯ'ನ ವ್ಯಾಖ್ಯೆ ಇದೇ ಆಗಿದೆಯಲ್ಲ ಎಂದು ಬೆರಗಾಯಿತು. ಇದನ್ನೇ ಸ್ಪಷ್ಟಪಡಿಸುವ ಲೇಖನ, ಪ್ರಚಲಿತ–೧ರ ಸುಧೀಂದ್ರ ಕುಲಕರ್ಣಿ ಅವರದ್ದಾಗಿದ್ದು ಆಕಸ್ಮಿಕವೇನಲ್ಲ. ಸಮಾಜವಾದದ ಪುನರ್ಜನ್ಮ ನಾವಿಂದು ಕಲಿಯಬೇಕಾದ ಅತೀ ಮಹತ್ವದ ಪಾಠವೆಂದು ಅವರು ನೆನಪಿಸಿದ್ದಾರೆ. ಅಪೂರ್ವಾನಂದರ ಪ್ರಚಲಿತ–೨ರ ಲೇಖನ ಕೂಡ 'ನ್ಯಾಯ' ಎಂಬ ಮೌಲ್ಯ ಪ್ರಚಾರ ತಂತ್ರದ ಜೀವಾಳಾವಾಗಿರುವುದನ್ನು ಅರಿವಿಗೆ ತಂದುಕೊಟ್ಟಿದೆ.

**–ಶ್ಯಾಮಸುಂದರ ಬಿದರಕುಂದಿ,** ಹುಬ್ಬಳ್ಳಿ

ಜೂನ್ ಸಂಚಿಕೆಯಲ್ಲಿನ 'ಯುವಲಹರಿ'ಯಲ್ಲಿ ಪ್ರಕಟವಾಗಿರುವ ಯಕ್ಷಗಾನ–ತಾಳಮದ್ದಲೆಗಳಲ್ಲಿ ಹೆಣ್ಣು ಧ್ವನಿ ಕುರಿತ ಆರ್. ಕೃತಿಯವರ ಲೇಖನ ಕುತೂಹಲದಿಂದ ಓದಿಸಿಕೊಂಡು ಹೋಗುತ್ತದೆ. ಅದರಲ್ಲಿ ಎತ್ತಿರುವ ಸಮಸ್ಯೆಗಳೆಲ್ಲವೂ ಈ ಕಲೆಗಳಲ್ಲಿ ಹೆಣ್ಣಿನ ಭಾಗವಹಿಸುವಿಕೆ ಹೆಚ್ಚುತ್ತಾ ಹೋದಂತೆ ತಂತಾನೇ ಪರಿಹಾರವಾಗಲಿವೆ.

**–ಮಹಾಂತೇಶ, ಕೈಗಾ**

'ಹೊಸ ಮನುಷ್ಯ' ನಿಜವಾಗಲೂ ನಮ್ಮ ನಡುವಣ ಒಂದು ಅಪರೂಪದ ಪರಿಪೂರ್ಣ ಪತ್ರಿಕೆ. ರಾಜಕಾರಣವೂ ಸೇರಿದಂತೆ ಸಮಕಾಲೀನ ಸಾರ್ವಜನಿಕ ಜೀವನದ ಜ್ವಲಂತ ಸಮಸ್ಯೆಗಳ ಬಗ್ಗೆ ಬರುವ ಲೇಖನಗಳಲ್ಲಿನ ವಿಶ್ಲೇಷಣೆಗಳು ನಮ್ಮ ಮನಸ್ಸಿನ ಒಂದು ಭಾಗವನ್ನು ತಟ್ಟಿದರೆ ನಂತರದ ಅರ್ಧ ಭಾಗದ ಸಾಂಸ್ಕೃತಿಕ ಬರಹಗಳು ಮೊದಲ ಭಾಗಕ್ಕೆ ಪೂರಕವಾಗಿಯೇ ನಮ್ಮ ಮನಸ್ಸಿನ ಇನ್ನೊಂದು ಭಾಗವನ್ನು ಸ್ಪರ್ಶಿಸುತ್ತಿರುವಂತಿವೆ. ಇದಕ್ಕೆ ಇತ್ತೀಚಿನ ಎಲ್ಲ ಸಂಚಿಕೆಗಳೂ ಸಾಕ್ಷಿಯಾಗಿವೆ.

ಕಳೆದ ಮೂರು ಸಂಚಿಕೆಗಳಲ್ಲಿ ಕೊರೊನಾ ವಿದ್ಯಮಾನದ ಸರ್ವ ಸಕಲ ಆಯಾಮಗಳನ್ನೂ ಪತ್ರಿಕೆ ನಮಗೆ ಪರಿಚಯ ಮಾಡಿದೆ. ಹಾಗೇ ಕಳೆದೆರಡು ಸಂಚಿಕೆಗಳಲ್ಲಿನ ನಮ್ಮ ಬೇಸಾಯ ಬದುಕಿಗೆ ಸಂಬಂಧಿಸಿದ ಕಥೆ, ಪ್ರಬಂಧ ಮತ್ತು ಲೇಖನಗಳು ಕೊರೋನಾಗೆ ಕಶರಣವಾದ ನಮ್ಮ ಬದುಕಿನ ಅಡ್ಡದಾರಿಗಳ ಮೇಲೆ ಬೆಳಕು ಚೆಲ್ಲುವಂತಿವೆ. ಇನ್ನು ಧರ್ಮ ಪುಟ, ನಿಮ್ಮ ಸಾಹಿತ್ಯಿಕ–ಸಾಂಸ್ಕೃತಿಕ ಟಿಪ್ಪಣಿಗಳಲ್ಲಿ ಕಾಣುವ ವಸ್ತುನಿಷ್ಠತೆ ಮತ್ತು ಬಿಚ್ಚು ಮನಸ್ಸು ಹಾಗೂ ಪುಸ್ತಕಾವಲೋಕನಗಳ ಹರಹು ಓದನ್ನು ಸಾರ್ಥಕಗೊಳಿಸುತ್ತದೆ. ಕಳೆದ ಸಂಚಿಕೆಯಲ್ಲಿ ಅಗಲಿದ ಕವಿ ಕೆ.ಎಸ್. ನಿಸಾರ್ ಅಹಮದ್ ಅವರ ಬಗ್ಗೆ ಬರೆದ ಟಿಪ್ಪಣಿಯನ್ನು ನೀವು ಮಾತ್ರ ಬರೆಯಬಲ್ಲಿರಿ! ಇಪ್ಪತ್ತೇ ಪುಟಗಳಾದರೂ ತಿಂಗಳ ಕಾಲ ಮೆಲುಕು ಹಾಕುವಷ್ಟು ಹೂರಣ ಒದಗಿಸುವ ಈ ಪತ್ರಿಕೆಯ ಅಸ್ತಿತ್ವ ನನಗೆ ತಿಳಿದದ್ದು ಇತ್ತೀಚೆಗಷ್ಟೇ ಎಂಬ ಸಂಗತಿ ನನಗೆ ನಾಚಿಕೆಯನ್ನುಂಟು ಮಾಡಿದೆ.

**–ಎಂ. ನಾಗರಾಜಮೂರ್ತಿ,** ದಾವಣಗೆರೆ

ಕರೋನಾ ಸಮಯದಲ್ಲಿ ಎಲ್ಲ ವರ್ಗಗಳ ಜನರೂ ಒಂದಿಲ್ಲೊಂದು ಸಮಸ್ಯೆಗಳ ಸುಳಿಯಲ್ಲಿ ಸಿಲುಕಿದ್ದಾರೆ. ಇಂಥ ಸಂದರ್ಭದಲ್ಲಿ, ಸಮಸ್ಯೆಯ ಮೂಲ ಅರಿಯಲೆತ್ನಿಸದೆ, ಪ್ರಭುತ್ವ ಪ್ರಕಟಿಸಿರುವ ೨೦ ಲಕ್ಷ ಕೋಟಿ ರೂಪಾಯಿ ಪರಿಹಾರವೆಂಬ ಕ್ರೂರ ವ್ಯಂಗ್ಯದ ಕುರಿತು ಸಂಪಾದಕೀಯ ಔಚಿತ್ಯಪೂರ್ಣವಾಗಿದೆ. ಉಲ್ಬಣಗೊಳ್ಳುತ್ತಿರುವ ಕರೋನಾ ಜೊತೆ ಬಾಳಬೇಕಾದ ಅನಿವಾರ್ಯತೆಯನ್ನು ಜನರಿಗೆ ಮನಗಾಣಿಸಲೆಂದೇ ಸರ್ಕಾರ ಬೀಗಮುದ್ರೆಯನ್ನು ಬಳಸಿಕೊಂಡಿತೆ ಎಂಬ ಅನುಮಾನ ನನ್ನನ್ನು ಕಾಡುತ್ತಿದೆ. ಅನಾರೋಗ್ಯದ ಚಿಕಿತ್ಸೆ, ಮದುವೆ ಮುಂತಾದ ಭಾರಿ ಪ್ರಮಾಣದ ಖರ್ಚುಗಳಿಗೆ ಹಣ ಹೊಂದಿಸಲು ವಲಸೆ ಕಾರ್ಮಿಕರು ತಮ್ಮೂರನ್ನು ತೊರೆದು ದೂರದ ನಗರಗಳಲ್ಲಿ ದುಡಿಯಲು ಮುಂದಾಗುತ್ತಾರೆ ಎಂಬುದು ಜನಜನಿತ., ಅಪೂರ್ವಾನಂದ ಅವರು ವಿವರಿಸಿರುವಂತೆ ಸರ್ಕಾರವಷ್ಟೆ ಅಲ್ಲದೇ ನ್ಯಾಯಾಲಯ ಕೂಡ ತನ್ನ ಅಸಹಾಯಕತೆ ವ್ಯಕ್ತಪಡಿಸುತ್ತಾ, ಸಂಕಟದ ಗಳಿಗೆಯಲ್ಲಿ ಜನರ ಕೈ ಬಿಟ್ಟಿರುವುದು ವಿಷಾದನೀಯ.

ಮಲ್ಲಿಕಾರ್ಜುನ ಹೊಸಪಾಳ್ಯ ಅವರು ಕೃಷಿ ಬಿಕ್ಕಟ್ಟು ಕುರಿತ ತಮ್ಮ ಲೇಖನದಲ್ಲಿ ರೈತರ ಸಮಸ್ಯೆಗಳನ್ನು ಸಮಗ್ರವಾಗಿ ಚರ್ಚಿಸಿ, ರೈತರು ಕಡಿಮೆ ಖರ್ಚಿನ ರೋಗ / ಕೀಟ ನಿರೋಧಕ ಗುಣವಿರುವ ದೇಸಿ ತಳಿ ಬಳಸಿ, ಬೆಳೆ ವೈವಿಧ್ಯ ಉಳಿಸಿಕೊಂಡು ಖರ್ಚು ಕಡಿಮೆ ಮಾಡಿಕೊಳ್ಳುವತ್ತ ಗಮನ ಹರಿಸಬೇಕು ಎಂದು ಉಪಯುಕ್ತ ಸಲಹೆ ನೀಡಿದ್ದಾರೆ. ಅನವಶ್ಯಕ ಖರ್ಚಿಗೆ ಕಡಿವಾಣ ಹಾಕಬೇಕಾದ ಸಮಯದಲ್ಲಿ ರಾಜಪಥದಲ್ಲಿ ಪ್ರಧಾನಮಂತ್ರಿಗಳಿಗೆಂದೇ ಹೊಸ ಭವ್ಯ ಬಂಗಲೆ ನಿರ್ಮಿಸಲು ೨೦ಸಾವಿರ ಕೋಟಿ ರೂಪಾಯಿಗಳ ದುಬಾರಿ ವೆಚ್ಚದಲ್ಲಿ ರೂಪಿಸಲಾಗಿರುವ ಆಡಂಬರದ 'ದೆಹಲಿ ಮರುವಿನ್ಯಾಸ' ಯೋಜನೆಯನ್ನು ಕುರಿತ ರಾಮಚಂದ್ರ ಗುಹಾ ಅವರ ಲೇಖನ ಯೋಜನೆಯಲ್ಲಿನ ಸ್ವಜನ ಪಕ್ಷಪಾತ ಮತ್ತು ಅಸೂಕ್ಷ್ಮತೆಗಳನ್ನು ವಿವರಿಸುತ್ತಾ ಆಕ್ರೋಶ ಉಕ್ಕಿಸುತ್ತದೆ. ಹೀಗೆ ಹಲವಾರು ಪ್ರಮುಖ ಸಂಗತಿಗಳ ಕುರಿತು ಲೇಖನಗಳನ್ನು ಒದಗಿಸಿ, 'ಹೊಸ ಮನುಷ್ಯ' ಪತ್ರಿಕೆ ಓದುಗರ ಅರಿವಿನ ಒಳಗಣ್ಣನ್ನು ತೆರೆಸುವ ಮಹತ್ಕಾರ್ಯ ಮಾಡುತ್ತಿದೆ.

**–ಸೋಮು,** ಹುಬ್ಬಳ್ಳಿ

ಜೂನ್ ಸಂಚಿಕೆಯಲ್ಲಿ 'ಆಕಾಶವಾಣಿಯ ಅಮೂಲ್ಯ ರತ್ನಗಳು' ಶೀರ್ಷಿಕೆಯಡಿ ನೀವು ಬರೆದಿರುವ ಟಿಪ್ಪಣಿಗಳನ್ನು ಓದುತ್ತಾ ನನ್ನ ಮನಸ್ಸು ಎಂಬತ್ತರ ದಶಕದ ಆ ರೇಡಿಯೋ ದಿನಗಳ ಸಂಭ್ರಮದತ್ತ ಹಾರಿತು. ಆಗ ಈ ಮಾಧ್ಯಮದಲ್ಲಿ ಎಂತಹ ಘಟಾನುಘಟಿಗಳಿದ್ದರು ಮತ್ತು ಮನೆಮಂದಿಯೆಲ್ಲ ಕೂತು ಕೇಳಬಹುದಾಗಿದ್ದ ಎಂತಹ ಅದ್ಭುತ ಕಾರ್ಯಕ್ರಮಗಳು! ನೀವು ಮಂಗಳೂರು ಆಕಾಶವಾಣಿಯ ನಾಟಕ ವಿಭಾಗದ ಮುಖ್ಯಸ್ಥರಾಗಿದ್ದಾಗ ನಿರ್ಮಿಸಿದ ಅತ್ಯುತ್ಕೃಷ್ಟ ನಾಟಕಗಳ ನಿಮ್ಮ ಪಟ್ಟಿಯಿಂದ ಕಿ.ರಂ. ನಾಗರಾಜರ 'ನೀಗಿಕೊಂಡ ಸಂಸ' ಮತ್ತು ಟಿ.ಎನ್ ಸೀತಾರಾಂ ಅವರ 'ಬದುಕ ಮನ್ನಿಸೊ ಪ್ರಭುವೇ' ಬಿಟ್ಟುಹೋಗಿರುವುದು ಆಶ್ಚರ್ಯಕರ! ಹಾಗೇ ಭಾಸನ 'ಬಾಲಚರಿತಂ' ನಾಟಕವನ್ನು ಅದರಲ್ಲಿ ಹಾಡುಗಳು ವಿಪರೀತವಾಗಿವೆಯೆಂದು ಅದನ್ನು ಯಕ್ಷಗಾನ ವಿದ್ವಾಂಸ ಪ್ರಭಾಕರ ಜೋಷಿಯವರಿಂದ ಯಕ್ಷಗಾನ ರೂಪಕ್ಕೆ ಅಳವಡಿಸಿ ನಿರ್ಮಿಸಿದ್ದೂ ನನಗೆ ಚೆನ್ನಾಗಿ ನೆನಪಿದೆ. ಕಾರಣ, ಅದರಲ್ಲಿ ನಾನೂ ಸಣ್ಣ ಪಾತ್ರವೊಂದನ್ನು ನಿರ್ವಹಿಸಿದ್ದೆ. ಇನ್ನು ಪ್ರಸನ್ನರನ್ನು ಆಹ್ವಾನಿಸಿ ಏರ್ಪಡಿಸಿದ ಕುವೆಂಪು ಅವರ 'ಕಲ್ಕಿ' ಕವನವನ್ನು ಆಧರಿಸಿ ಅವರಿಂದ ನಿರ್ದೇಶಿಸಿ ಪ್ರದರ್ಶಿಸಿದ ರೂಪಕ ಅಷ್ಟೇನೂ ಯಶಸ್ವಿಯಾಗಲಿಲ್ಲವಾದರೂ ಒಂದು ಗಮನಾರ್ಹ ಪ್ರಯತ್ನವೇ ಆಗಿತ್ತು.

ಆಗ ಉಡುಪಿಯ ರಾಮದಾಸ್, ಕಾಸರಗೋಡು ಚಿನ್ನಾ, ಸರೋಜಿನಿ ಶೆಟ್ಟಿ, ವಿನಯಾ (ಪ್ರಸಾದ್), ವೀಣಾ ಬನ್ನಂಜೆ, ನರಸಿಂಹಮೂರ್ತಿ, ಗೀತಾ ಸುರತ್ಕಲ್ ಮುಂತಾದ ಪ್ರತಿಭಾವಂತರಿಂದ ಕೂಡಿದ ಕಲಾವಿದರ ತಂಡವನ್ನು ನೀವು ಆಗ ಸಮರ್ಥವಾಗಿ ದುಡಿಸಿಕೊಂಡ ರೀತಿಯ ಬಗ್ಗೆ ನಾನು ನನ್ನೂರಿಗೆ ಬಂದಾಗಲೆಲ್ಲ ಆ ಕಾಲದ ಗೆಳೆಯರೊಂದಿಗೆ ಮಾತಾಡುತ್ತಿರುತ್ತೇನೆ.

**–ಸದಾಶಿವ ಬೈಕಂಪಾಡಿ,** ಮೈಸೂರು

ನಾನು ಎಂಬತ್ತರ ದಶಕದಲ್ಲಿ ಬಿ.ಆರ್. ಪ್ರಾಜೆಕ್ಟ್‌ನಲ್ಲಿ ವಿದ್ಯಾರ್ಥಿಯಾಗಿದ್ದಾಗಿನಿಂದಲೂ ಭದ್ರಾವತಿ ಆಕಾಶವಾಣಿಯಿಂದ ನಿಮ್ಮ ಕಾರ್ಯಕ್ರಮಗಳನ್ನು ಕೇಳುತ್ತಿದ್ದೆ. ವಿಶೇಷತಃ ಪ್ರತಿದಿನದ ರಶ್ಮಿ ಕಾರ್ಯಕ್ರಮ. ಬೆಂಗಳೂರಿನಿಂದ ಮರುಪ್ರಸಾರವಾಗುತ್ತಿದ್ದ, ಹೆಚ್ಚಾಗಿ ಆಧ್ಯಾತ್ಮಿಕ ನಿರೂಪಣೆಯಿರುತ್ತಿದ್ದ 'ಚಿಂತನ'ಕ್ಕೆ ಸಂವಾದಿಯಾಗಿ ಇದು ಸಮಕಾಲೀನ ಜ್ವಲಂತ ವಿಷಯಗಳನ್ನು ಕುರಿತಾಗಿದ್ದು ನಮ್ಮಂಥ ಯುವ ಜ್ಞಾನದಾಹಿಗಳ ಗಮನ ಸೆಳೆಯುತ್ತಿತ್ತು. ಭಾನುವಾರದ ಹಾಸ್ಯ ರಶ್ಮಿಗಂತೂ ನಾವು ಕುತೂಹಲದಿಂದ ಕಾದು ಕೇಳುತ್ತಿದ್ದೆವು. ಡಾ. ಆಶೋಕ ಪೈ, ಎಂ.ಬಿ. ನಟರಾಜ್, ತಿರುಮಲೇಶ್, ತಿಮ್ಮರಸಯ್ಯ ಮುಂತಾದವರ ಹಾಸ್ಯ ರಸಾಯನದ ಕೆಲವು ತುಣುಕುಗಳು ಇನ್ನೂ ನನ್ನ ನೆನಪಿನಲ್ಲಿವೆ. ಉದಾಹರಣೆಗೆ ಅಶೋಕ ಪೈ ಬಳಸಿದ 'ಹಾಸಿಗೆ ಪಥ್ಯ' ಎಂಬ ಪ್ರಯೋಗ!

ಉಪನ್ಯಾಸಕನಾಗಿ ನಾನು ಬೆಂಗಳೂರು ಸೇರಿದ ನಂತರದಲ್ಲೂ ನೀವು ಬೆಂಗಳೂರು ಕೇಂದ್ರದಲ್ಲಿ ನಿರ್ಮಿಸಿ ಪ್ರಸಾರಿಸುತ್ತಿದ್ದ 'ಕನ್ನಡ ಭಾರತಿ' ನಮ್ಮ ಸಾಹಿತ್ಯ ಸಂವೇದನೆಯನ್ನು ನಿಜವಾಗಿ ವಿಸ್ತರಿಸುತ್ತಿದ್ದವು. ನನಗೆ ಇನ್ನೂ ನೆನಪಿನಲ್ಲಿರುವ ಎರಡು ಕಾರ್ಯಕ್ರಮಗಳೆಂದರೆ, ಕಿ.ರಂ. ಮತ್ತು ರಾಘವೇಂದ್ರ ಖಾಸನೀಸರನ್ನು ಒಟ್ಟಿಗೆ ಕೂರಿಸಿಕೊಂಡು ಮಾತಾಡಿಸುತ್ತಾ ನಡೆಸಿಕೊಟ್ಟ ಕಥಾ ಕಮ್ಮಟ ಹಾಗೂ ಕಾದಂಬರಿಕಾರ ಶ್ರೀಕೃಷ್ಣ ಆಲನಹಳ್ಳಿ ನಿಧನರಾದ ಸಂದರ್ಭದಲ್ಲಿ ಅವರನ್ನು ಕುರಿತ ಮತಿನ, ಅಡಿಗ, ಲಂಕೇಶ್, ನಾಡಿಗ ಮುಂತಾದವರ ನೆನಪಿನ ಮಾತುಗಳನ್ನಾದರಿಸಿ ನೀವು ನಿರೂಪಿಸಿದ 'ಕಾಡಿನ ಹುಡುಗ ಕೃಷ್ಣ' ಎಂಬ ನುಡಿಚಿತ್ರ. ನಿಮ್ಮಂಥವರು ಆಕಾಶವಾಣಿಯಲ್ಲಿ ಇನ್ನಷ್ಟು ಕಾಲ ಇರಬೇಕಿತ್ತು.

**–ಡಾ. ಕೆ.ಬಿ.ನಾರಾಯಣ,** ಬೆಂಗಳೂರು

ಯುವ ಲಹರಿ

# ಗ್ರಾಮಾಭಿವೃದ್ಧಿಯ ದಿಕ್ಕು ದೆಸೆಗಳನ್ನು ಕುರಿತು ಯೋಚಿಸುತ್ತಾ...

–ಸಂಜಯಕುಮಾರ್

ನಾವು ಪ್ರತಿನಿತ್ಯ ಗಾಳಿ, ನೀರು, ನೆಲ ಎಲ್ಲವನ್ನೂ ಮಲಿನಗೊಳಿಸಿ ಪ್ರಕೃತಿಯ ಸಂಪತ್ತನ್ನು ಎಗ್ಗಿಲ್ಲದೆ ಲೂಟಿ ಮಾಡುತ್ತಾ ಅಭಿವೃದ್ಧಿ ಎಂಬ ನಾಗಾಲೋಟದಲ್ಲಿ ಓಡುತ್ತಿದ್ದೇವೆ. ತಾಯಿಯಂತೆ ಪೊರೆಯುವ ಪ್ರಕೃತಿಯನ್ನು ಕಡೆಗಣಿಸಿ ನಾವು ಅಭಿವೃದ್ಧಿಯ ಹೆಸರಿನಲ್ಲಿ ಅದನ್ನು ವಂಚಿಸುತ್ತಾ ಹೋದರೆ ಅದು ನಮ್ಮ ಮತ್ತು ಇಡೀ ಜೀವ ಸಂಕುಲಗಳ ಮೇಲೆ ಮುನಿದು ತನ್ನನ್ನು ಸಮತೋಲನಗೊಳಿಸಿಕೊಳ್ಳುತ್ತಾ ಹೋಗುತ್ತದೆ. ಅದು ಭೂಕಂಪನ, ಜಲ ಪ್ರಳಯ, ಜ್ವಾಲಾಮುಖಿ, ಕಾಳ್ಗಿಚ್ಚು, ಇನ್ನೂ ಮುಂದುವರೆದು ಸಾರ್ಸ್, ಎಬೋಲೋ, ಹನಾಟ, ಈಗ ಕರೋನದಂತ ಮಹಾ ಮಾರಿಯನ್ನು ಹರಡಿಸುತ್ತಾ ಮಾನವ ಕುಲವನ್ನೇ ಬಲಿತೆಗೆದುಕೊಳ್ಳುತ್ತಿದೆ. ಕರೋನ ನಂತರದ ದಿನಗಳಲ್ಲಿ ಮಾನವ ತನ್ನ ಬದುಕಿನ ಕ್ರಮವನ್ನು ಬದಲಾಯಿಸಿಕೊಳ್ಳದಿದ್ದರೆ ಮಾನವ ಸಂಕುಲವೇ ನಾಶವಾಗಿಬಿಡುತ್ತದೆ ಅಂತ ಕೆಲ ತಜ್ಞರು ಹೇಳುತ್ತಿದ್ದಾರೆ. ಆದರೂ ಮನುಷ್ಯ ಬದಲಾಗುತ್ತಿಲ್ಲ ಸುಖಭೋಗ ಜೀವನಕ್ಕೆ ಹೊಂದಿಕೊಂಡು ತನ್ನ ಅಪರಿಮಿತ ಆಸೆಗಳನ್ನು ಈಡೇರಿಸಿಕೊಳ್ಳುತ್ತಾ ಸಾಗುತ್ತಿದ್ದಾನೆ. ಇವತ್ತು ದೊಡ್ಡ ಕೈಗಾರಿಕೆಗಳಿಂದ ಹಿಡಿದು ನಮ್ಮ ರಾಸಾಯನಿಕ ಕೃಷಿಪದ್ಧತಿಗಳವರೆಗೂ ಪರಿಸರ ಮಾಲಿನ್ಯದಂತಹ ದುಷ್ಕೃತ್ಯಗಳು ನಡೆಯುತ್ತಿವೆ. ಇದರಿಂದ ಜೀವ ವೈವಿದ್ಯತೆಯೇ ನಾಶವಾಗಿಬಿಡುವ ಹಂತಕ್ಕೆ ತಲುಪುತ್ತಿದೆಯಂತೆ. ಈ ಕಾರಣಕ್ಕಾಗಿಯೇ ದಾರ್ಶನಿಕ ವಿಜ್ಞಾನಿ ಫುಕೋಕ ಪ್ರಕೃತಿಯ ವಿಸ್ಮಯಗಳನ್ನು ಅರಿಯುತ್ತಾ ತಾನು ಅದರಲ್ಲಿ ಒಂದು ಭಾಗವಾಗಿ ರಾಸಾಯನಿಕ ಮುಕ್ತವಾದ ಕೃಷಿಯಿಂದಲೆ ಪ್ರಕೃತಿಯ ಮಹತ್ವವನ್ನು ನಮಗೆ ತೋರಿಸಿಕೊಟ್ಟರು. ಇವತ್ತು ನಾವು ಲಾಭದ ಲೆಕ್ಕಾಚಾರದಲ್ಲಿ ಭೂಮಿಗೂ ವಿಷ ಉಣಿಸುತ್ತಾ ನಾವು ವಿಷ ಉಣ್ಣುತ್ತಿದ್ದೇವೆ. ಇದನ್ನು ಯಾಕೆ ಹೇಳುತ್ತಿದ್ದೇನೆಂದರೆ, ನಾವು ಸಿಂಪಡಿಸುವ ಕೀಟ ನಾಶಕಗಳಿಂದ ಮತ್ತು ರಾಸಾಯನಿಕ ಗೊಬ್ಬರಗಳಿಂದ ಎಷ್ಟೋ ಪಕ್ಷಿಗಳು, ಕೀಟಗಳು ಸಾಯುತ್ತಿವೆ.. ಇನ್ನು ಕೈಗಾರಿಕೆಗಳ ವಿಷವರ್ತುಲವನ್ನು ಹೇಳಬೇಕೆ, ಕೈಗಾರಿಕೆಗಳಿಂದ ಬಿಡುಗಡೆಯಾದ ತ್ಯಾಜ್ಯ ನದಿ, ಸಮುದ್ರಗಳನ್ನು ಸೇರುತ್ತಿವೆ.

ಇಂತಹ ವ್ಯವಸ್ಥೆಯಿಂದ ನಾವು ಮುಕ್ತವಾಗುವುದು ಹೇಗೆ? ಇದಕ್ಕೆ ಪರ್ಯಾಯ ವ್ಯವಸ್ಥೆಗಳಾದರೂ ಯಾವುವು? ಇಷ್ಟಾದರೂ ನಮ್ಮ ಸರ್ಕಾರಗಳು ಪರಿಸರ ಕಾಳಜಿಯ ಅರ್ಥವ್ಯವಸ್ಥೆಯನ್ನು ಜಾರಿಗೆ ತರುತ್ತಿಲ್ಲವೇಕೆ? ಇವತ್ತು ಬೇಡಿಕೆ, ಪೂರೈಕೆ, ಉತ್ಪಾದನೆ ಎಂಬ ಬಂಡವಾಳಶಾಹಿಯ ಬೆನ್ನತ್ತಿ ಮಾನವ ಕೇಂದ್ರಿತ ಆರ್ಥಿಕತೆಗೆ ಒತ್ತುಕೊಟ್ಟು ಗಣಿಗಾರಿಕೆ, ಕೈಗಾರಿಕೋದ್ಯಮ, ವಿಮಾನಯಾನದಂತ ಪರಿಸರ ವಿರೋಧಿ ಚಟುವಟಿಕೆಗಳಿಗೆ ರಹದಾರಿ ನಿರ್ಮಿಸಿಕೊಟ್ಟು ಅದಕ್ಕಾಗಿ ಹಣಮೀಸಲಿಡುತ್ತಿರುವುದು ಯಾರ ಉದ್ಧಾರಕ್ಕಾಗಿ? ನಾವು ಎತ್ತ ಸಾಗುತ್ತಿದ್ದೇವೆ?! ಈಗ ನಮ್ಮ ರಾಜ್ಯ ಸರ್ಕಾರ ಬೇರೆ ಪಶ್ಚಿಮಘಟ್ಟದ ಕಾಡುಗಳನ್ನು ಕೊರೆದು ಸುರಂಗ ಮಾಡಿ ಶರಾವತಿ ನದಿಯಿಂದ ಹೆಚ್ಚು ವಿದ್ಯುತ್ ಉತ್ಪಾದನೆ ಮಾಡಲು ಹೊರಟಿದೆಯಂತೆ! ಯಾರ ಲಾಭಕ್ಕಾಗಿ ಹೆಚ್ಚು ವಿದ್ಯುತ್ ಉತ್ಪಾದನೆ ಮಾಡಲು ಹೊರಟಿದ್ದಾರೆ ಎಂಬುದು ಅರ್ಥವಾಗುತ್ತಿಲ್ಲ! ಪ್ರಕೃತಿ ನಮ್ಮನ್ನು ನಿಜವಾಗಲು ಕ್ಷಮಿಸುವುದಿಲ್ಲ!

ಇತ್ತೀಚೆಗೆ ಭೂತಾನ್‌ನಂತಹ ರಾಷ್ಟ್ರಗಳು ಪ್ರಕೃತಿಯಿಂದ ಸಂಭವಿಸುತ್ತಿರುವ ವಿಕೋಪಗಳನ್ನು ಅರಿತು ಪರಿಸರ ಕೇಂದ್ರಿತ ಆರ್ಥಿಕತೆಯನ್ನು ಜಾರಿಗೆ ತರುವ ಮೂಲಕ ನೆಮ್ಮದಿಯ ಉಸಿರಾಡಿದೆ. ಈಗ ಕರೋನದಿಂದ ಮುಕ್ತವಾಗಿರುವ ನ್ಯೂಜಿಲೆಂಡ್ ನಂತ ರಾಷ್ಟ್ರವೂ ಭೂತಾನ್ ಮಾದರಿಯ ಆರ್ಥಿಕತೆಯನ್ನು ಜಾರಿಗೆ ತರುವ ಬಗ್ಗೆ ಪ್ರಸ್ತಾಪ ಮಾಡುತ್ತಿದೆಯಂತೆ! ವಿಶ್ವ ಮಟ್ಟದಲ್ಲಿ ಈ ತರದ ಚರ್ಚೆಗಳು ಅಲ್ಲಲ್ಲಿ ಕಾಣಿಸಿಕೊಳ್ಳುತ್ತಿವೆ.

ಈ ತರದ ಪ್ರಕೃತಿಯ ಮಹತ್ವಗಳು ಚರಾಚರಗಳಲ್ಲೂ ಕಾರುಣ್ಯ, ಮೈತ್ರಿಯನ್ನು ಕಂಡ ಬುದ್ಧನಿಂದ ಹಿಡಿದು, ಅಹಿಂಸೆ ಮತ್ತು ಮಿತಿಯುಳ್ಳ ಬದುಕನ್ನು ಪ್ರತಿಪಾದಿಸಿದ ಗಾಂಧಿ, ಪ್ರಕೃತಿಯೇ ನಮ್ಮನ್ನು ಪೊರೆಯುವ ಮಹಾ ತಾಯಿಯಂಬಂತೆ ಸಾಹಿತ್ಯ ರಚಿಸಿದ ಕುವೆಂಪುರವರ ವರೆಗೆ ಎದ್ದು ಕಾಣುತ್ತದೆ. ಅಂತ ಪ್ರಕೃತಿಯಲ್ಲಿ ಒಂದು ಭಾಗವಾದ ನಾವು ಅದನ್ನ ನಾಶಗೊಳಿಸಿಬಿಟ್ಟು ಈಗ ನಾವೇ ಅದನ್ನು ಕಾಪಿಟ್ಟುಕೊಳ್ಳುವ ಹಂತಕ್ಕೆ ತಲುಪಿದ್ದೇವೆ. ನಾವು ಪರಿಸರವನ್ನು ಕಾಪಿಟ್ಟುಕೊಳ್ಳಬೇಕಾದರೆ, ಈಗ ಸದ್ಯಕ್ಕೆ ನಮಗೆ ಪರ್ಯಾಯವಾಗಿ ಕಾಣುತ್ತಿರುವುದು ಪರಿಸರ ಸ್ನೇಹಿಯಾದ ಗ್ರಾಮೋದ್ಯೋಗಗಳನ್ನು ಸೃಷ್ಟಿಸಿ ಅವುಗಳಿಗೆ ಉತ್ತೇಜನ ನೀಡುವ ಮೂಲಕ. ಈ ತರದ ಕನಸನ್ನು ಸಾಮಾಜಿಕ ಕಾರ್ಯಕರ್ತೆಯಾದ ಅರುಣಾ ರಾಯ್ ೧೯೭೦ರ ದಶಕದಲ್ಲೇ ಕಂಡಿದ್ದರು. ಜಿಲ್ಲಾಧಿಕಾರಿ ಹುದ್ದೆಗೆ ರಾಜೀನಾಮೆ ನೀಡಿ ಗ್ರಾಮಗಳ ಮಟ್ಟದಿಂದ, ಗ್ರಾಮೋದ್ಯೋಗಗಳನ್ನು ಉತ್ತೇಜಿಸುವ ,ಅವುಗಳಿಗೆ ಪ್ರಾಮುಖ್ಯತೆಯನ್ನು ನೀಡಿ ಪರಿಸರವನ್ನು ಸಂರಕ್ಷಿಸುವ ಕೆಲಸಕ್ಕೆ ಧುಮುಕಿದ್ದರು. ಇದು ಗಾಂಧಿ ನಂತರದ




ಚಿಂತನೆಯಾಗಿ ರೂಪುಗೊಂಡದ್ದು ಹೌದು. ಸದ್ಯಕ್ಕೆ ಚಾಲ್ತಿಯಲ್ಲಿರುವ ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಇವರ ಕಸುವಿನದ್ದೇ.

ಈಗ ಕರೊನದ ಲಾಕ್ ಡೌನ್ ಪರಿಣಾಮದಿಂದಾಗಿ ಭಾರತದಲ್ಲಿ ಅಂದಾಜು ೧೨ ಕೋಟಿ ಜನ ಕೂಲಿ ಕಾರ್ಮಿಕರು ನಗರದಲ್ಲಿ ಉದ್ಯೋಗ ಕಳೆದುಕೊಂಡು ತಮ್ಮ ಹಳ್ಳಿಗಳಿಗೆ ಹಿಂತಿರುಗಿದ್ದಾರಂತೆ! ಗ್ರಾಮೋದ್ಯಮಕ್ಕೆ ಈಗ ಪ್ರಾತಿನಿಧ್ಯ ಮತ್ತು ಪ್ರಾಮುಖ್ಯತೆಕೊಡಲು ಸಕಾಲವಾಗಿದೆ. ನರೇಗಾ ಯೋಜನೆಯಡಿಯಲ್ಲಿ ಅಲ್ಲಲ್ಲಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕೆರೆ ಹೂಳೆತ್ತುವುದು, ಸಸಿನೆಡಲು ಗುಂಡಿ ತೆಗೆಯುವುದು, ಕೃಷಿಹೊಂಡ ನಿರ್ಮಿಸುವಂತಹ ಕೆಲಸಗಳು ನಡೆಯುತ್ತಿವೆ. ನಮ್ಮ ಚಾಮರಾಜನಗರದಲ್ಲಿ ಒಟ್ಟು ಹದಿನಾಲ್ಕು ಸಾವಿರ ಜನ ಕೂಲಿ ಕಾರ್ಮಿಕರಿಗೆ ನರೇಗಾದಡಿಯಲ್ಲಿ ಉದ್ಯೋಗ ಸಿಕ್ಕಿದೆ ಇದರಲ್ಲಿ ಎಂಟು ಸಾವಿರ ಜನ ಮಹಿಳಿಯರೇ ಇದ್ದಾರೆ ಎಂಬುದು ಖುಷಿಯ ವಿಚಾರ. ಇದರಿಂದ ಉದ್ಯೋಗವೂ ಸಿಗುತ್ತದೆ ಪರಿಸರ ಸಂರಕ್ಷಣೆಯೂ ಆಗುತ್ತದೆ.

ನರೇಗಾದಲ್ಲಿ ೧೦೦ ದಿನ ಇರುವ ದುಡಿಮೆಯ ಅವಧಿಯನ್ನು ಅಗತ್ಯವಿದ್ದಷ್ಟು ದಿನಕ್ಕೆ ವಿಸ್ತರಿಸಿ ಕನಿಷ್ಠ ಕೂಲಿಯನ್ನು ಹೆಚ್ಚಿಸಿ, ರಸ್ತೆ ಬದಿಗಳಲ್ಲಿ ಮತ್ತು ಗೋಮಾಳ, ಖಾಲಿ ಇರುವ ಸಾರ್ವಜನಿಕ ಜಾಗಗಳಲ್ಲಿ ಮತ್ತು ಕೆರೆ ಕಟ್ಟೆಗಳ ಸುತ್ತ ಮುತ್ತ ಸಸಿ ನೆಡುವುದು, ಪ್ರತಿಯೊಬ್ಬರ ಜಮೀನಿನಲ್ಲೂ ಕೃಷಿಹೊಂಡ, ಹಾಗೆ ಹಿಂಗು ಗುಂಡಿಗಳ ನಿರ್ಮಾಣ, ಮಳೆ ನೀರಿನ ಕೊಯ್ಲು, ಬದುಗಳನ್ನು ನಿರ್ಮಿಸುವ ಕೆಲಸ ಕಾರ್ಯಗಳನ್ನು ಹೆಚ್ಚು ಹೆಚ್ಚು ಕೈಗುಳ್ಳುವಂತ ಕೆಲಸವನ್ನು ಮಾಡುವುದು ಒಳಿತು. ಇದನ್ನು ಅರಣ್ಯವಾಸಿಗಳಿಗೂ ವಿಸ್ತರಿಸಬಹುದು ಅರಣ್ಯವಾಸಿಗಳ ಅರಣ್ಯಾಧಾರಿತ ಉದ್ಯೋಗಕ್ಕಾಗಿ ಆರು ಸಾವಿರ ಕೋಟಿ ಮೀಸಲಿಟ್ಟು ಖಾಸಗಿ ಕಂಪನಿಗಳ ಜಂಟಿ ಆಯೋಗದೊಂದಿಗೆ ಸರ್ಕಾರ ಕಲ್ಲಿದ್ದಲಿನಂತ ಗಣಿಗಾರಿಕೆಗೆ ಅನುವು ಮಾಡಿಕೊಡುವ ಬದಲು ಉದ್ಯೋಗ ಖಾತ್ರಿ ಯೋಜನೆಯಡಿ ಸಸಿ ನೆಡುವ, ಕೆರೆಗಳನ್ನು ನಿರ್ಮಿಸುವಂತ ಕೆಲಸಮಾಡಿಸಬಹುದು. ಇದರಿಂದಾಚೆಗೂ ಸ್ಥಳೀಯ ಮಟ್ಟದಲ್ಲಿ ಕೃಷಿಗೆ ಸಂಬಂಧಿಸಿದ ಕಾರ್ಖಾನೆಗಳು, ಹತ್ತಿ ಬಟ್ಟೆ, ಕೈ ಮಗ್ಗ, ಕುರಿ, ಕೋಳಿ ಸಾಕಾಣಿಕೆ, ಸಾವಯವ ಕೃಷಿಯಂತ ಚಟುವಟಿಕೆಗಳಿಗೆ ಉತ್ತೇಜನ ನೀಡಿ ಬಲಪಡಿಸುವುದು. ಇದು ಸಾಧ್ಯವಾಗಲು ಭಾರತದ ಒಕ್ಕೂಟ ವ್ಯವಸ್ಥೆಯಲ್ಲಿ ಎಲ್ಲ ರಾಜ್ಯಗಳನ್ನು ಸಣ್ಣ ಸಣ್ಣ ವಿಭಾಗಗಳಾಗಿ ವಿಂಗಡಿಸಿ ಅವುಗಳಿಗೆ ಸಂಪೂರ್ಣ ಸ್ವಾಯತ್ತತೆ ನೀಡಿ ಅಧಿಕಾರವನ್ನು ವಿಕೇಂದ್ರಿಸುವುದು. ಈ ನಿಟ್ಟಿನಲ್ಲಿ ನಾವು ಪರಿಸರ ಕಾಳಜಿಯೊಟ್ಟಿಗೆ ಗ್ರಾಮಗಳನ್ನು ಅಭಿವೃದ್ಧಿಗೊಳಿಸಿ ಗಾಂಧಿಯವರ ಸ್ವರಾಜ್ಯವನ್ನು ಸ್ಥಾಪಿಸಲು ಮುಂದಾಗಬಹುದು. ಇದು ಸಧ್ಯದ ತುರ್ತು ಕೂಡ.



**(ಚಾಮರಾಜನಗರದ ಬಳಿಯ ಬೊಕ್ಕೆಪುರದ ಸಂಜಯಕುಮಾರ್ ಸಮಾಜವಾದಿ ಒಲವಿನ ಯುವ ರೈತ)**

ಜನಪರ ವೈದ್ಯ ಮತ್ತು ಹಿರಿಯ ವೈದ್ಯ ಸಾಹಿತಿಗಳೂ ಆಗಿದ್ದ ಡಾ. ಎಚ್.ಡಿ. ಚಂದ್ರಪ್ಪ ಗೌಡರ ನಿಧನಕ್ಕೆ 'ಹೊಸ ಮನುಷ್ಯ' ತನ್ನ ತೀವ್ರ ಸಂತಾಪಗಳನ್ನು ವ್ಯಕ್ತಪಡಿಸುತ್ತದೆ.–ಸಂ.

ಪ್ರಚಲಿತ-೧

# ಮಾನ್ಸಾಂಟೊ ಕಾರ್ಯಸೂಚಿಯನ್ನು ಮುಂದುವರೆಸುತ್ತಿರುವ ಬಿಲ್ ಗೇಟ್ಸ್

## ಫ್ರೆಂಚ್-೨೪ ಟಿವಿ ವಾಹಿನಿಗೆ ವಂದನಾ ಶಿವ ಸಂದರ್ಶನ



ಜೀವ ವೈವಿಧ್ಯ ಸಂರಕ್ಷಣಾ ಕ್ಷೇತ್ರದ ಜಾಗತಿಕ ಧ್ವನಿ ಎಂದೇ ಪ್ರಖ್ಯಾತರಾದ ವಂದಬಾ ಶಿವ ಅವರು ಫ್ರಾನ್ಸ್‌ನ ಫ್ರೆಂಚ್-೨೪ ಎಂಬ ಸ್ವತಂತ್ರ ಟಿವಿ ಸುದ್ದಿ ವಾಹಿನಿಗೆ ನೀಡಿರುವ ಈ ಸಂದರ್ಶನದಲ್ಲಿ ಜಾಗತಿಕ ಬಂಡವಾಳಶಾಹಿಯ ಉತ್ಪನ್ನಗಳಾದ ಬಹುರಾಷ್ಟ್ರೀಯ ಕಂಪನಿಗಳು ಮತ್ತು ಬಿಲ್ ಗೇಟ್ಸ್, ಝುಕರ್‌ಬರ್ಗ್ ಮುಂತಾದ ಕೆಲವೇ ಕೆಲವು ಶತಕೋಟ್ಯಾಧಿಪತಿಗಳು ಜಗತ್ತಿನ ಜೀವ ಸೃಷ್ಟಿಯ ಜಾಲದ ಮೇಲೇ ಹೇಗೆ ಏಕಸ್ವಾಮ್ಯತ್ವ ಹೊಂದುವ ಎಂತಹ ಸಂಕೀರ್ಣ ಸಂಚಿನಲ್ಲಿ ತೊಡಗಿದ್ದಾರೆ ಎಂಬುದನ್ನು ವಿವರಿಸಿದ್ದಾರಲ್ಲದೆ, ಆ ಸಂಚನ್ನು ವಿಫಲಗೊಳಿಸಬೇಕಾದ ಜವಾಬ್ದಾರಿ ಮತ್ತು ಮಾರ್ಗಗಳನ್ನೂ ಇಲ್ಲಿ ಸೂಚಿಸಿದ್ದಾರೆ. ಈ ಸಂದರ್ಶನವನ್ನು ಯೂ-ಟ್ಯೂಬ್‌ನಿಂದ ತೆಗೆದುಕೊಳ್ಳಲಾಗಿದೆ.-ಸಂ.

**ಸಂದರ್ಶಕ :** ನಮಸ್ಕಾರ. ಫ್ರೆಂಚ್ ೨೪ ವಾಹಿನಿಯ ಸಂದರ್ಶನಕ್ಕೆ ಸ್ವಾಗತ. ಇಂದಿನ ನಮ್ಮ ಅತಿಥಿ, ವಿಶ್ವವಿಖ್ಯಾತ ಪರಿಸರ ಹೋರಾಟಗಾರ್ತಿ ಭಾರತದ ವಂದನಾಶಿವ. ಇವರು 1993ರ ಪರ್ಯಾಯ ನೊಬೆಲ್ ಪ್ರಶಸ್ತಿ ವಿಜೇತರು. ಹಲವಾರು ಪುಸ್ತಕಗಳ ಲೇಖಕಿ. ಇವರ ಇತ್ತೀಚಿನ ಕೃತಿ 'Oneness Vs One Percent' ಇಂದು ನಮ್ಮೊಡನೆ ಇರುವುದಕ್ಕೆ ವಂದನೆಗಳು.

ನಾನು ಮೊದಲಿಂದ ಆರಂಭಿಸುವುದಾದರೆ ಪರಿಸರ ಕಾರ್ಯಕರ್ತೆಯಾಗುವುದು ನಿಮ್ಮ ಉದ್ದೇಶವಾಗಿರಲಿಲ್ಲ. ಸೈದ್ಧಾಂತಿಕ ಭೌತಶಾಸ್ತ್ರ ಅಧ್ಯಯನ ಮಾಡಿ, ಅಣುಶಕ್ತಿ ಕ್ಷೇತ್ರದಲ್ಲಿ ಕೆಲಸ ಮಾಡಬೇಕೆಂದಿದ್ದ ನೀವು, ೧೯೭೦ರ ಆರಂಭದಲ್ಲಿ 'ಚಿಪ್ಕೋ' ಎಂದೇ ಭಾರತದಲ್ಲಿ ಚಿರಪರಿಚಿತವಾಗಿರುವ ಪರಿಸರ ಚಳವಳಿಯಿಂದ ಸೆಳೆಯಲ್ಪಟ್ಟಿರಿ. ಇದರ ಬಗ್ಗೆ ವಿವರಿಸುವಿರಾ?

**ವಂದನಾ ಶಿವ :** ಹೌದು, ಭಾರತೀಯ ಅಣುಶಕ್ತಿ ಕ್ಷೇತ್ರದಲ್ಲಿರಲು ಬಯಸಿ, ಅದಕ್ಕೆ ಸಿದ್ಧಳಾಗುತ್ತಿದ್ದೆ. ಆಗ ನನ್ನಕ್ಕ, ಆಕೆ ವೈದ್ಯಕೀಯ ತಜ್ಞೆಯೂ ಹೌದು, ಅಣುಶಕ್ತಿಯ ಅಪಾಯಗಳ ಬಗ್ಗೆ ನನ್ನನ್ನು ಎಚ್ಚರಿಸಿದಳು. ಸೈದ್ಧಾಂತಿಕ ಭೌತಶಾಸ್ತ್ರದ ಆಳಕ್ಕೆ ಇಳಿಯುತ್ತಿದ್ದ ನಾನು, ಕ್ವಾಂಟಂ ಸಿದ್ಧಾಂತದ ಮೂಲತತ್ವಗಳ ಬಗ್ಗೆ ಪಿಎಚ್‌ಡಿ ಪದವಿಗಾಗಿ ಕೆನಡಾಗೆ ಹೊರಟಿದ್ದೆ. ಹೋಗುವ ಮುನ್ನ, ನನ್ನ ನೆಚ್ಚಿನ ಗುಡ್ಡ ಕಾಡುಗಳಲ್ಲಿ ಸುತ್ತುವ ಆಸೆಯಾಯಿತು. ನಾನು ಬೆಳೆದಿದ್ದೇ ಹಿಮಾಲಯದ ಕಾಡುಮೇಡುಗಳಲ್ಲಿ. ನಾನು ಈ ಹಿಂದೆ ಸುತ್ತಿ ಸಂಚರಿಸಿದ್ದ ಕಾಡುಗಳು ಅಲ್ಲಿರಲಿಲ್ಲ. ತೊಯ್ದ ಕಾಡುಗಳ ಮಧ್ಯೆ ಒಸರುತ್ತಿದ್ದ ನೀರಿನ ಸೆಲೆಗಳು, ತೊರೆಗಳು ಬತ್ತಿದ್ದವು. ನಾನು ದೆಹಲಿಗೆ ಹಿಂದಿರುಗುವಾಗ ದಾರಿಯಲ್ಲಿನ ಚಹಾದಂಗಡಿಯವನ ಬಳಿ ಹೀಗೇ ಮಾತನಾಡುತ್ತಿದ್ದಾಗ ಚಿಪ್ಕೋ ಚಳವಳಿಯ ಬಗ್ಗೆ ತಿಳಿಸಿದ. ಪ್ರತಿ ವರ್ಷದ ರಜಾ ಕಾಲದಲ್ಲಿ ಸ್ವಯಂ ಸೇವಕಳಾಗಿ ಈ ಚಳವಳಿಯಲ್ಲಿ ಕೆಲಸ ಮಾಡುತ್ತೇನೆಂದು ಅಂದೇ ನನ್ನ ಅಂತರಂಗದಲ್ಲಿ ನಿರ್ಧರಿಸಿದೆ. ಹೆಣ್ಣು ಮಕ್ಕಳು ಹೊರಬಂದು, ಮರಗಳನ್ನು ಅಪ್ಪಿಕೊಳ್ಳಲು ಆರಂಭಿಸಿದ್ದರು. ನೀವು ಮರಗಳನ್ನು ಕತ್ತರಿಸುವಂತಿಲ್ಲ. ಮರಗಳಿಂದ ನಮಗೆ ಮಳೆ ನೀರು ದೊರಕುತ್ತದೆ. ಮರಗಳು ಗುಡ್ಡಗಳನ್ನು ಸ್ಥಿರಗೊಳಿಸಿ, ಭೂ ಕುಸಿತ ತಪ್ಪಿಸುತ್ತವೆ. ಮರಗಳು ಬರಗಾಲ, ಪ್ರವಾಹಗಳನ್ನು ತಪ್ಪಿಸುತ್ತವೆ. ನಮಗೆ ಬೇಕಾದ ಎಲ್ಲವನ್ನೂ ಮರಗಳು ನೀಡುತ್ತವೆ. ಹಾಗಾಗಿ ನಾವು ಮರಗಳನ್ನು ಅಪ್ಪಿಕೊಳ್ಳುವ ಸ್ವಯಂಸೇವಕರಾಗುತ್ತೇವೆ ಎಂದರು ಮಹಿಳೆಯರು. ಚಿಪ್ಕೋ ಪದದ ಅರ್ಥವೇ ಅಪ್ಪಿಕೊ ಎಂಬುದು. ಪರಿಸರ ಕುರಿತ ನನ್ನೆಲ್ಲಾ ಪಾಠಗಳನ್ನು ಕಲಿತಿದ್ದು, ಹಿಮಾಲಯದ ಈ ಮಹಿಳೆಯರಿಂದ. ಅವರಾರೂ ಶಾಲೆಗೆ ಹೋಗದಿದ್ದರೂ, ಅವರು ಹೇಳುತ್ತಿದ್ದ ಮಣ್ಣು, ಜಲ ಮತ್ತು ಪರಿಶುದ್ಧ ಗಾಳಿಯೇ ನಾವಿಂದು ಪರಿಸರಶಾಸ್ತ್ರ ಎಂಬ ಹೆಸರಿನಲ್ಲಿ ಪ್ರತಿಪಾದಿಸುತ್ತಿರುವ ಅರಣ್ಯಗಳ ಪ್ರಾಥಮಿಕ ಕಾರ್ಯಗಳೇ ಆಗಿವೆ. ಕಾಡುಗಳೆಂದರೆ ಮರಗಳನ್ನು ಕೊಳ್ಳೆಹೊಡೆಯುವ ಖಜಾನೆಗಳಲ್ಲ. ನನ್ನ ಚಿಂತನೆಗಳಲ್ಲಿ ಅಮೂಲಾಗ್ರ ಬದಲಾವಣೆಯಾದದ್ದು, ನಿಸರ್ಗವೇ ನಮ್ಮೆಲ್ಲಾ ಆರ್ಥಿಕ ಚಟುವಟಿಕೆಗಳ ತಳಹದಿ ಎಂಬ ಅರಿವು ಮೂಡಿದ್ದು ಚಿಪ್ಕೋ ಚಳವಳಿಯ ಭಾಗವಾಗಿದ್ದರಿಂದ. ಹಿಮಾಲಯದ ಮಹಿಳೆಯರ ಸ್ಥಳೀಯ ಪರಂಪರಾಗತ ಜ್ಞಾನದ ಬಗ್ಗೆ ಅಪಾರ ಗೌರವ ಮೂಡಿದ್ದು ಚಿಪ್ಕೋ ಚಳವಳಿಯಿಂದ. ನಾನೊಬ್ಬ ಭೌತಶಾಸ್ತ್ರಜ್ಞೆ, ನನ್ನ ಅರಿವು ಉನ್ನತ ಮಟ್ಟದ್ದು, ಜಗತ್ತಿನಲ್ಲಿ ಯಾರಿಗೂ ಗೊತ್ತಿರದ ಜ್ಞಾನ ನನ್ನಲ್ಲಿ ಇದೆ ಎಂಬುದೆಲ್ಲಾ ತಲೆಕೆಳಗಾಗಿ ಹೋಯಿತು. ಎಲ್ಲರೂ–ಸಾಮಾನ್ಯರೂ–ಜ್ಞಾನಿಗಳೆ, ನಾವು ಅವರನ್ನು ಗೌರವಿಸಲೇಬೇಕು.

**ಸಂದರ್ಶಕ :** ನೀವು ಈ ಚಳವಳಿಯಲ್ಲಿ ತೀವ್ರವಾಗಿ ತೊಡಗಿಸಿಕೊಂಡಿರಿ. ಬೃಹತ್ ಅಂತಾರಾಷ್ಟ್ರೀಯ ಕಂಪನಿಗಳನ್ನು ನೀವು ವಿರೋಧಿಸುತ್ತೀರಿ. ವಿಶೇಷವಾಗಿ ಒಂದನ್ನು ಹೆಸರಿಸುವುದಾದರೆ ಮಾನ್ಸಾಂಟೊ. ಏಕೆಂದರೆ ನೀವೇ ವಿವರಿಸಿದಂತೆ ಇವುಗಳು ಕೃಷಿ ಕ್ಷೇತ್ರದಲ್ಲಿ ಉಂಟು ಮಾಡುವ ದುಷ್ಪರಿಣಾಮಗಳಿಂದಾಗಿ. ಭಾರತದಲ್ಲಿನ ಬಿಟಿ ಹತ್ತಿಯ ಬೆಳೆ ಕೂಡ. ಅದು ನೀವು ಹೇಳಿದಂತೆ ರೈತರ ಬೇಸಾಯಕ್ಕೆ ಸಹಾಯ ಮಾಡುವುದಲ್ಲ, ಬದಲಾಗಿ ಈ ದೈತ್ಯ ಕಾರ್ಪೋರೇಟ್ ಕಂಪನಿಗಳ ಮೇಲೆ ಅವರು ಅವಲಂಬಿತರಾಗುವಂತೆ ಮಾಡುತ್ತದೆ.

**ವಂದನಾ ಶಿವ :** ಈ ಕಾರ್ಪೋರೇಟ್‌ಗಳು ಕೃಷಿ ವಲಯಕ್ಕೆ ಪ್ರವೇಶಿಸುವುದೇ ತಪ್ಪು. ಏಕೆಂದರೆ ಅವು ತರುವುದೆಲ್ಲ ವಿಷಮಯವೇ. ಇವುಗಳಲ್ಲಿ ಹೆಚ್ಚಿನವುಗಳ ಬೇರುಗಳಿರುವುದೇ ಹಿಟ್ಲರ್‌ನ ಜರ್ಮನಿಯಲ್ಲಿ. ಅಲ್ಲಿ ವಿಷಾನಿಲಗಳನ್ನು ಉತ್ಪಾದಿಸುತ್ತಿದ್ದುದು, ನಾಝಿ ಶಿಬಿರಗಳಲ್ಲಿನ ಜನರನ್ನು ಕೊಲ್ಲಲು.

**ಸಂದರ್ಶಕ :** (ಅವರ ಮಾತನ್ನು ವಿರೋಧಿಸುತ್ತಾ) ಇಲ್ಲ, ಅವುಗಳ ಉದ್ದೇಶ ಅದಾಗಿರಲಿಲ್ಲ. ಅವರು ಜನತೆಗೆ ಸಾಕಷ್ಟು ಆಹಾರ ಸಿಗಬೇಕು ಎಂಬ ಗುರಿ ಅವುಗಳದಾಗಿತ್ತು...

**ವಂದನಾ ಶಿವ:** ಈ ಮೊದಲು ಜನರನ್ನು ಕೊಲ್ಲಲು ವಿಷ ರಾಸಾಯನಿಕಗಳನ್ನು ತಯಾರಿಸುತ್ತಿದ್ದವರು, ಯುದ್ಧ ಅಂತ್ಯವಾದೊಡನೆ ಉತ್ಪಾದನೆಯನ್ನು ನಿಲ್ಲಿಸುವುದೇತಕ್ಕೆ, ಇನ್ನು ಮುಂದೆ ಕೀಟಗಳನ್ನು ಕೊಲ್ಲೋಣ, ರಾಸಾಯನಿಕ ಗೊಬ್ಬರಗಳನ್ನು ತಯಾರಿಸೋಣ ಎಂದು ನಿರ್ಧರಿಸಿದರು. ಯಾವ ಕಾರ್ಖಾನೆಗಳಲ್ಲಿ ಮದ್ದು, ಗುಂಡು, ಆಸ್ಫೋಟಕಗಳನ್ನು ಹಿಟ್ಲರ್‌ನ ಜರ್ಮನಿಗಾಗಿ ತಯಾರಿಸುತ್ತಿದ್ದರೊ, ಅಲ್ಲೇ ರಾಸಾಯನಿಕ ಗೊಬ್ಬರಗಳು ಉತ್ಪಾದನೆಯಾಗುತ್ತಿರುವುದು.

**ಸಂದರ್ಶಕ:** ಆದರೆ ಅವೆರಡರ ಗುರಿ ಒಂದೇ ಅಲ್ಲವಲ್ಲ...

**ವಂದನಾಶಿವ :** ಇಲ್ಲ,. ಅದೇ ಕಂಪನಿಗಳು, ಅದೇ ಉತ್ಪಾದನಾ ಪ್ರಕ್ರಿಯೆಗಳು. ನಿಮ್ಮ ನುಡಿಗಟ್ಟು ಬದಲಾಗಬಹುದು;ಮಾತಿನ ವರಸೆ ಬದಲಾಗಬಹುದು. ಆದರೆ ಗುರಿಯಲ್ಲ. ನಾವು ಇದನ್ನೆಲ್ಲಾ ಮಾಡುತ್ತಿರುವುದು, ಜಗತ್ತಿಗೆ ಆಹಾರ ಒದಗಿಸಲು ಎಂಬುದು ಮಾರಕ ರಾಸಾಯನಿಕಗಳನ್ನು ಉತ್ಪಾದಿಸುತ್ತವೆಂಬ ಭೌತಿಕ ಸತ್ಯವನ್ನು ಬದಲಾಯಿಸುವುದಿಲ್ಲ. 'ಹಸಿರು ಕ್ರಾಂತಿ'ಯ ಹಿಂಸೆಯ ಬಗ್ಗೆ ನಾನೊಂದು ಪುಸ್ತಕ ಬರೆದಿದ್ದೇನೆ. ಏಕೆಂದರೆ ಈ 'ಕ್ರಾಂತಿ'ಯಿಂದ ಭಾರತದ ಅತಿ ಫಲವತ್ತಾದ ಪಂಜಾಬಿನ ನೆಲ ನಾಶವಾಗಿ ಹೋಯಿತು. ಜಾಗತೀಕರಣದ ಭಾಗವಾಗಿ ಮಾನ್ಸಾಂಟೋ ಪ್ರವೇಶಿಸುವ ಮುನ್ನ, ೧೯೯೦ರವರೆಗೂ ಅತಿ ಹೆಚ್ಚಿನ ಶೇಕಡವಾರು ಪ್ರಮಾಣದ ಬಿತ್ತನೆ ಬೀಜಗಳು ರೈತರ ಸ್ವತ್ತಾಗಿದ್ದವು. ಉಳಿದದ್ದು, ಸಾರ್ವಜನಿಕ ಉದ್ಯಮಗಳು, ಸರ್ಕಾರಿ ಪ್ರಯೋಗಾಲಯಗಳು, ಸಂಶೋಧನಾ ಸಂಸ್ಥೆಗಳಿಂದ ದೊರೆಯುತ್ತಿತ್ತು. ಮಾನ್ಸಾಂಟೋ ಬಂದಿದ್ದೇ ಕಾನೂನು ಬಾಹಿರವಾಗಿ. ಯಾವುದೇ ಅನುಮತಿ ಪಡೆಯದೇ, ರೈತರ ಆದಾಯವನ್ನು ಹೆಚ್ಚಿಸುತ್ತೇವೆ ಎಂಬ ಮಾತಿನೊಂದಿಗೆ. ಕೀಟಗಳನ್ನು ನಿಯಂತ್ರಿಸುವ ಮಾಂತ್ರಿಕ ತಂತ್ರಜ್ಞಾನ ನಮ್ಮ ಬಳಿ ಇದೆ ಎಂದಿದ್ದರು. ಈಗ ನೋಡಿದರೆ, 'ಬುಲ್‌ವರ್ಮ್' ಯಾವುದಕ್ಕೂ ಜಗ್ಗದ ನಿರೋಧಕ ಶಕ್ತಿ ಬೆಳೆಸಿಕೊಂಡಿದೆ. ಇದರಿಂದಾಗಿ ಪರಾಗ ಸ್ಪರ್ಶಕಗಳು ಹೇಳಹೆಸರಿಲ್ಲದಂತಾಗಿವೆ. ನೀರಿನ ಅತಿಬಳಕೆಯಿಂದಾಗಿ ಅಂತರ್ಜಲ ಬತ್ತಿ ಹೋಗಿದೆ. ಕೃಷಿ ಪೂರಕ ಪರಿಸರ ವ್ಯವಸ್ಥೆಯೇ ಇಲ್ಲದಂತಾಗಿದೆ. ರೈತರು ಸಾಲದ ಸುಳಿಗೆ ಸಿಲುಕಿದ್ದಾರೆ. ರೈತರು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ನಾವು ಜೈವಿಕ ಹತ್ತಿಬೀಜಗಳನ್ನು ಮರಳಿ ತಂದು ಗಾಂಧಿ ಆಶ್ರಮಗಳೊಂದಿಗೆ ಕಾರ್ಯಪ್ರವೃತ್ತರಾದೆವು. ಕೈಯಲ್ಲಿ ನೂಲು ತೆಗೆಯುವ,

ಕೈಮಗ್ಗದಲ್ಲಿ ನೇಯುವ ಮೂಲಕ ಈ ಜೈವಿಕ ಹತ್ತಿಯನ್ನು ಬಳಸಲಾರಂಭಿಸಿದೆವು. ಇದರಿಂದಾಗಿ ಈ ಹಳ್ಳಿಗಳ ಆರ್ಥಿಕ ಮಟ್ಟ ಹತ್ತುಪಟ್ಟು ಹೆಚ್ಚಾಯಿತು. ಏಕೆಂದರೆ ಇದರ ಲಾಭಾಂಶವೆಲ್ಲ, ಮಾನ್ಸಂಟೋ ಪಾಲಾಗುವುದರ ಬದಲು, ಈ ಹಳ್ಳಿಗಳಲ್ಲೇ ಉಳಿಯಿತು. ಸ್ಥಳೀಯ ಬಿತ್ತನೆ ಬೀಜಗಳನ್ನು ಸಂರಕ್ಷಿಸಿ ಅವುಗಳನ್ನು ಮರಳಿ ಆರ್ಥಿಕ ವ್ಯವಸ್ಥೆಯೊಳಗೆ ತಂದಿದ್ದರಿಂದ ಮಾನ್ಸಂಟೋ ಆದಾಯ ೧೧ ದಶ ಲಕ್ಷ ಡಾಲರ್‌ಗಳಷ್ಟು ಕುಸಿಯಿತು ಎಂದು ನಾನು ಇತ್ತೀಚೆಗೆ ಓದಿದ ಅಧ್ಯಯನವೊಂದು ತಿಳಿಸಿದೆ.


ಬಿಲ್ ಗೇಟ್ಸ್


ಮಾರ್ಕ್ ಝುಕರ್‌ಬರ್ಗ್

**ಸಂದರ್ಶಕ :** ನಿಮ್ಮ ಇತ್ತೀಚಿನ ಪುಸ್ತಕವನ್ನು ಗಮನಿಸೋಣ. ಏಕೆಂದರೆ ನಿಮ್ಮ ಆಕ್ರಮಣವನ್ನು ಇದರಲ್ಲಿ ಇನ್ನೂ ವಿಸ್ತಾರಗೊಳಿಸುತ್ತಿದ್ದೀರಿ. ಕೇವಲ ಮಾನ್ಸಾಂಟೋ ಹಾಗೂ ಅವರಂಥವರಲ್ಲದೆ, ನೀವೇ ಗುರುತಿಸಿರುವ 'ಶತಕೋಟ್ಯಾಧಿಪತಿ ಸರ್ವಾಧಿಕಾರಿಗಳು', ಅದರಲ್ಲೂ ವಿಶೇಷವಾಗಿ ಯಾರನ್ನು ನೀವು ಆಧುನಿಕ ಕಾಲದ ಕ್ರಿಸ್ಟೋಫರ್ ಕೊಲಂಬಸ್‌ಗೆ ಹೋಲಿಸಿದ್ದೀರೋ ಮತ್ತು ಈ ಹೋಲಿಕೆ ಖಂಡಿತ ಪ್ರಶಂಸನೀಯವಲ್ಲವೋ, ಆ ಒಬ್ಬ ವ್ಯಕ್ತಿ ಬಿಲ್‌ಗೇಟ್ಸ್ ವಿರುದ್ಧ ಕೂಡ ನಿಮ್ಮ ದಾಳಿ ನಡೆದಿದೆ. ನಿಮ್ಮ ಪ್ರಕಾರ, ಅವರ ಗುರಿ ಏನಿದ್ದರೂ ಮಾರ್ಪಡಿಸಿದ ಜೈವಿಕ ತಳಿಗಳನ್ನು ನೇರವಾಗಿ, ಬಲವಂತವಾಗಿ ಹೇರುವುದು ಮತ್ತು ಡಿಜಿಟಲ್ ತಂತ್ರಜ್ಞಾನದ ಮೂಲಕ ಸಣ್ಣ ರೈತರ ಮೇಲೆ ಸರ್ವಾಧಿಕಾರ ಹೊಂದುವುದು. ಜಗತ್ತಿನಾದ್ಯಂತ ಬಡ ದೇಶಗಳಲ್ಲಿ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಸುಧಾರಿಸಲು ಹಾಗೂ ಇತರೆ ಸೇವೆಗಳಿಗೆ ಸಾವಿರಾರು ಕೋಟಿ ಡಾಲರ್‌ಗಳ ದೇಣಿಗೆ ನೀಡಿರುವ ಬಿಲ್ ಗೇಟ್ಸ್, ಒಬ್ಬ ಸರ್ವಾಧಿಕಾರಿ. ಆತನ ಉದ್ದೇಶ ಸಹಾಯ ಮಾಡುವುದಲ್ಲ, ಮೂಲತಃ ಜನರನ್ನು ಇನ್ನೂ ಬಡವರನ್ನಾಗಿಸುವುದು, ಹೆಚ್ಚು ಅವಲಂಬಿಗಳನ್ನಾಗಿಸುವುದು ಎನ್ನುತ್ತೀರಿ. ನಿಮ್ಮ ವಾದ ಜಟಿಲವಾಗಿದೆ.

**ವಂದನಾ ಶಿವ:** ಬಿಲ್ ಗೇಟ್ಸ್ ಮಾನ್ಸಾಂಟೋ ಕಾರ್ಯಸೂಚಿಯನ್ನು ಮುಂದುವರೆಸುತ್ತಿದ್ದಾನೆ. ಹೇಗೆಂದರೆ, ಮಾನ್ಸಾಂಟೋ, ಹಲವು ಚಳವಳಿಗಳನ್ನು ಎದುರಿಸಬೇಕಾಯಿತು. ಮಾನ್ಸಾಂಟೋ –ಬಾಯರ್‌ಗಳನ್ನು ನ್ಯಾಯ ಮಂಡಳಿಗೆ ಎಳೆದೊಯ್ದಿದ್ದೆವು. ಆದರೆ ಆಫ್ರಿಕಾದ ಬಡ ದೇಶಗಳಿಗೆ ಆಹಾರ ಒದಗಿಸಲು ಮತ್ತು ಬರ ನಿವಾರಣೆ ಮಾಡಲು ಎನ್ನುತ್ತಾ ಹಣ ಸುರಿದ ಬಿಲ್ ಗೇಟ್ಸ್ ಮಾಡಿದ್ದೇನು? ನಮ್ಮಲ್ಲಿ ವಿಫಲವಾದ ಹಸಿರು ಕ್ರಾಂತಿಯನ್ನು ಬೆಂಬಲಿಸಿ, ಅಲ್ಲಿ ಮುಂದುವರೆಸಿದ್ದು. ವಿಷ ರಾಸಾಯನಿಕಗಳನ್ನು ಸುರಿದದ್ದು, ಮಾರ್ಪಡಿಸಿದ ಜೈವಿಕ ತಳಿಗಳನ್ನು ಉಪಯೋಗಿಸಿದ್ದು ಮತ್ತು ಇವುಗಳೆಲ್ಲದರ ವೈಭವದ ಪ್ರದರ್ಶನ, ಪ್ರಚಾರ ಮಾಡಿದ್ದು.

**ಸಂದರ್ಶಕ :** ಇದೆಲ್ಲವನ್ನೂ ಗೊತ್ತಿದ್ದೂ ಮಾಡುತ್ತಿರುವರೊ ಅಥವಾ ಇದೆಲ್ಲವೂ ಒಳ್ಳೆಯ ಕಾರ್ಯವೆಂದು ಆತನ ಗ್ರಹಿಕೆ ತಪ್ಪಾಗಿರಬಹುದೊ.

**ವಂದನಾ ಶಿವ :** ಬಿಲ್ ಗೇಟ್ಸ್ ಕೃತ್ಯಗಳಿಗೆ ಸಾಕಷ್ಟು ಪುರಾವೆಗಳಿವೆ. ಆಫ್ರಿಕಾದ ರೈತರು ಹಾಗೂ ಸರ್ಕಾರಗಳು ಇದು ಸರಿಯಾದ ದಾರಿಯಲ್ಲ ಎಂದು ದೂರಿದ ಲಿಖಿತ ದಾಖಲೆಗಳಿವೆ. ವಿಶ್ವ ಸಂಸ್ಥೆ ಕೂಡ ಕೃಷಿ ಚಟುವಟಿಕೆಗಳು ನಿಸರ್ಗದೊಂದಿಗೆ ಸಾಮರಸ್ಯದಿಂದ ಇರುವುದೇ ಅತ್ಯುತ್ತಮ ಮಾರ್ಗ ಎಂದು ಒಪ್ಪಿದೆ. ಬಿಲ್ ಗೇಟ್ಸ್ ಈಗ ಹಕ್ಕುಸ್ವಾಮ್ಯವನ್ನು ಡಿಜಿಟಲ್ ವ್ಯವಸ್ಥೆಯಾಗಿ ಪರಿವರ್ತಿಸಲು ಬಹಳ ಶ್ರಮವಹಿಸುತ್ತಿದ್ದಾನೆ. ವಂಶವಾಹಿ ಸಂಬಂಧಿತವಾದ ನಕ್ಷೆಯೊಂದನ್ನು ಸಿದ್ಧಪಡಿಸಿ, ಇದು ನನ್ನ ಸಂಶೋಧನೆ ಎಂದು ಹಕ್ಕು ಪ್ರತಿಪಾದಿಸಿ ಕೋಟ ಕೋಟಿ ಡಾಲರ್ ರಾಯಧನ ಸಂಪಾದಿಸುತ್ತಿದ್ದಾನೆ, ಬೀಜವನ್ನು ಯಾರೂ ಸೃಷ್ಟಿಸಲು ಸಾಧ್ಯವಿಲ್ಲ. ಅದು ಸ್ವಯಂ ಸೃಷ್ಟಿ, ಸ್ವಯಂ ಸಂಯೋಜಿತವಾದದ್ದು ಮತ್ತು ನಿರಂತರ ಜೈವಿಕ ವಿಕಾಸದ ಮುಂದುವರಿಕೆಯಾಗಿದೆ. ವಂಶವಾಹಿ ನಕ್ಷೆಯೊಂದನ್ನು ತಯಾರಿಸಿ ಅದರ ಪ್ರಕಾರ ಬೀಜ ಹೇಗೆಲ್ಲ ವರ್ತಿಸಬಲ್ಲದೆಂಬ ತಿಳುವಳಿಕೆ ಇಲ್ಲದೆ ಹೆಚ್ಚು ಇಳುವರಿಯ ಹೆಸರಿನಲ್ಲಿ ತಿಳಿಯದೆ ಅದನ್ನು ಒಂದು ಕಡೆ ದೇಣಿಗೆಗಳ ಆಮಿಷ ತೋರಿಸಿ, ಇನ್ನೊಂದೆಡೆ ಬಲವಂತವಾಗಿ ಹೇರುತ್ತಿದ್ದಾನೆ. ನನ್ನ ಪುಸ್ತಕದಲ್ಲಿ ಆತ, ''Divseek''ನಲ್ಲಿ ಹಣ ತೊಡಗಿಸಿದ ಬಗೆ ಹೇಗೆ ಮತ್ತು ನಾವು ಸಂರಕ್ಷಿಸಿದ ಲವಣಾಂಶ ಹಾಗೂ ಪ್ರವಾಹಗಳನ್ನು ತಡೆದುಕೊಳ್ಳಬಲ್ಲ ದೇಸೀಯ ಬೀಜಗಳನ್ನು ಕೃತಿ ಚೌರ್ಯ ಮಾಡಿ, ತನ್ನ ಸಂಶೋಧನೆ ಎಂದು ಹೇಳಿಕೊಳ್ಳುತ್ತಿರುವ ಬಗ್ಗೆ ದಾಖಲೆ ಒದಗಿಸಿದ್ದೇನೆ. ಈ ರೀತಿಯಾದ ಜೈವಿಕ ಕೃತಿ ಚೌರ್ಯ ಕೊಲಂಬಸ್‌ನ ಕ್ರೌರ್ಯಕ್ಕೆ ಸಮಾನಾಗಿದೆ. ಕೊಲಂಬಸ್ ಅಮೆರಿಕ ಕಂಡುಹಿಡಿದ ಎನ್ನುತ್ತಾರೆ. ಆದರೆ ಆತ ಹೋಗಿದ್ದು ಕಡಲ್ಗಳ್ಳನಾಗಿ. ಬಿಲ್ ಗೇಟ್ಸ್‌ನನ್ನು ನಾನು ಇಂದಿನ ಕೊಲಂಬಸ್ ಎಂದು ಕರೆಯುವುದಾದರೂ ಏತಕ್ಕೆ? ಈತ ಕೂಡ ಹೊಸ ಹೊಸ ವಸಾಹತುಶಾಹಿಯ ಜನಕನಾಗಿದ್ದಾನೆ.. ಸಾಫ್ಟ್‌ವೇರ್ (ತಂತ್ರಾಂಶ) ಮುಕ್ತ ಸಾಫ್ಟ್‌ವೇರ್ ಆಗಿಯೇ ಇರಬೇಕಿತ್ತು.

**ಸಂದರ್ಶಕ :** ಬಿಲ್‌ಗೇಟ್ಸ್ ತಂತ್ರಗಾರಿಕೆ ಅನುಸರಿಸುತ್ತಿದ್ದಾನೆ. ಅದು ಕೂಡ ಮಹಾಪಾತಕದ ತಂತ್ರಗಾರಿಕೆ... ಹಾಂ... ನೀವೇ ಬಣ್ಣಿಸಿರುವಂತೆ ಆತನದ್ದು, ದಾನಶೂರತೆಯ ಬಂಡವಾಳಶಾಹಿ, ಕೇವಲ ತನ್ನ ಉದ್ಯಮಗಳ ವೃದ್ಧಿಗಾಗಿ. ಆತ ತಪ್ಪು ವಿಧಾನ ಅನುಸರಿಸುತ್ತಿಲ್ಲ, ಬದಲಾಗಿ ಸ್ವಹಿತಾಸಕ್ತಿಗಾಗಿ ತಪ್ಪಾದ ಗುರಿಗಳನ್ನು ಬೆನ್ನುಹತ್ತಿದ್ದಾನೆ ಎನ್ನುವಿರಾ?

ನೀವು ಫೇಸ್‌ಬುಕ್‌ನ ಸಂಸ್ಥಾಪಕ ಮಾರ್ಕ್ ಝುಕರ್‌ಬರ್ಗ್‌ನನ್ನು ವಿರೋಧಿಸುತ್ತೀರಿ ಮತ್ತು ಇವರೆಲ್ಲರ ನಡುವೆ ಪರಸ್ಪರ ಸಂಬಂಧ, ಹೊಂದಾಣಿಕೆಗಳಿವೆ ಎನ್ನುತ್ತೀರಿ. ಇವರ ವಿರುದ್ಧ ಇದೊಂದು ಸಂಚು, ಪಿತೂರಿ ಎನ್ನಿಸುತ್ತಿದೆಯಲ್ಲ!

**ವಂದನಾ ಶಿವ:** ನನ್ನ ಪುಸ್ತಕ ಹೊಸ ಹೊಸ ಪುರಾವೆಗಳನ್ನು ಆಧರಿಸಿದೆ. ನೀವು ಮಾಡಬೇಕಾಗಿರುವುದಿಷ್ಟೆ. ಈ ಕರ್ಯಾಚರಣೆಯಲ್ಲಿ ಯಾರ್‍ಯಾರ ಮಾಲಿಕತ್ವ ಇದೆ, ಯಾರ್‍ಯಾರ ಸಮಾನ ಒಡೆತನವಿದೆ ಎಂಬುದನ್ನು ಗಮನಿಸುವುದು. ಇದೆಲ್ಲದಕ್ಕೂ ನನ್ನ ಪುಸ್ತಕದಲ್ಲಿ ಅಂಕಿ– ಅಂಶ, ದಾಖಲೆಗಳಿವೆ. ಮಾರ್ಕ್ ಝುಕರ್‌ಬರ್ಗ್ ಭಾರತದ ಕೃಷಿ ಕ್ಷೇತ್ರ ಪ್ರವೇಶಿಸುವುದನ್ನು ತಡೆದೆವು. ಮುಕ್ತ ಅಂತರ್ಜಾಲದಲ್ಲಿ ನಂಬಿಕೆ ಇರುವ ಎಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಒಗ್ಗೂಡಿದ್ದರು.

**ಸಂದರ್ಶಕ :** ಆತ ಮಾಡಬೇಕೆಂದಿದ್ದಾರೂ ಏನು?

**ವಂದನಾ ಶಿವ:** ರೈತರಿಂದ ಅವರ ಸಾಮಾಜಿಕ–ಆರ್ಥಿಕ ಸ್ಥಿತಿಗಳೂ ಸೇರಿದಂತೆ ಕೃಷಿ ಸಂಬಂಧಿತ ಅಂಕಿ–ಅಂಶಗಳನ್ನು ಸಂಗ್ರಹಿಸುವ ಅವರು, ಎಲ್ಲ ಮಾಹಿತಿಗಳನ್ನು ದೋಚುತ್ತಾರೆ. ನಿಮಗೆ ಗೊತ್ತಿರುವಂತೆ ಸದ್ಯ ಪ್ರಪಂಚದಲ್ಲೆಲ್ಲಾ ಖಾಸಗಿತನದ ಬಗ್ಗೆ ಬಹು ತೀವ್ರವಾದ ಚರ್ಚೆಯಾಗುತ್ತಿದೆ, ಪುಸ್ತಕಗಳು ಬರೆಯಲ್ಪಡುತ್ತಿವೆ. ಹೊಸ ಬಗೆಯ ಬಂಡವಾಳಶಾಹಿ ರೂಪುಗೊಳ್ಳುತ್ತಿದೆ. ಎಲ್ಲರ ಮೇಲೆ ಹದ್ದಿನ ಕಣ್ಣು ಇಡುವ ಸರ್ವೇಕ್ಷಣೆಯಲ್ಲಿ ಬಂಡವಾಳ ಹೂಡಿಕೆಯಾಗುತ್ತಿದೆ. ಒಟ್ಟಾರೆ ಪ್ರತಿ ಮನುಷ್ಯ ಜೀವಿಯನ್ನೇ ಹೊಸ ಕಚ್ಚಾ ಸಾಮಗ್ರಿಯಾಗಿಸುತ್ತಿದ್ದಾರೆ. ಬಿಲ್ ಗೇಟ್ಸ್ ಎರಡನ್ನೂ ಮಾಡುತ್ತಾನೆ. ನಮ್ಮ ಬದುಕಿನ ಸಂಪನ್ಮೂಲಗಳಾದ ಜೀವ ವೈವಿಧ್ಯತೆ, ದೇಸಿ ಬಿತ್ತನೆ ಬೀಜಗಳ ಮಾಹಿತಿಯನ್ನು ಸಂಗ್ರಹಿಸಿ, ಅದನ್ನು ಡಿಜಿಟಲ್ ಅಂಕಿ–ಅಂಶಗಳನ್ನಾಗಿ ಪರಿವರ್ತಿಸಿ, ಅದರ ಮೇಲೆ ತಾನು ಹಾಗೂ ತನ್ನ ಗೆಳೆಯರ ಮಾಲೀಕತ್ವವನ್ನು ಪ್ರತಿಪಾದಿಸುತ್ತಾನೆ ಮತ್ತು ಮಾರ್ಕ್ ಝುಕರ್‌ಬರ್ಗ್ ನಿಮ್ಮ ವರ್ತನೆ, ಬೇಕು ಬೇಡಗಳನ್ನು ಕ್ರೋಢೀಕರಿಸಿ ಅವನ್ನು ಕಾರ್ಪೋರೇಟ್ ಜಗತ್ತಿನ ಕಚ್ಚಾ ಸಾಮಗ್ರಿಗಳನ್ನಾಗಿಸಿ ಮಾರಾಟ ತಂತ್ರಗಾರಿಕೆ ಹಾಗೂ ಚುನಾವಣೆಗಳನ್ನು ಕುಯುಕ್ತಿಯಿಂದ ನಿಭಾಯಿಸಲು ಪಟ್ಟಭದ್ರರಿಗೆ ನೆರವಾಗುತ್ತಿದ್ದಾನೆ. ಹಾಗಾಗಿಯೇ ನೀವು ನಿಮ್ಮ ಗೆಳೆಯೊನೊಬ್ಬನಿಗೆ ಸಂದೇಶ ಕಳಿಸಿದಾಗಲೆಲ್ಲಾ ಅಚ್ಚರಿ ಹುಟ್ಟಿಸುವ ಚಿತ್ರ ವಿಚಿತ್ರ ಜಾಹೀರಾತುಗಳು ಪುಟಿದೇಳುತ್ತಿರುತ್ತವೆ. ನನ್ನ ಪುಸ್ತಕದಲ್ಲಿ, 'ಪ್ರಜಾಪ್ರಭುತ್ವದ ಅಪಹರಣ'ದ ಬಗ್ಗೆ ಒಂದು ಅಧ್ಯಾಯವಿದೆ. ಫೇಸ್‌ಬುಕ್ ತನ್ನ ಮಾಹಿತಿಯನ್ನೆಲ್ಲಾ, 'ಕೇಂಬ್ರಿಡ್ಜ್ ಅನಾಲಿಟಿಕಾ'ಗೆ ಮಾರಿದ್ದರ ಪರಿಣಾಮಗಳ ಬಗ್ಗೆ ಸಾಕಷ್ಟು ಸಾಕ್ಷಿ ಇದೆ. ಹಾಗಾಗಿಯೇ ಮಾಧ್ಯಮಗಳಲ್ಲಿ ಕೃತಕಬುದ್ಧಿವಂತಿಕೆಯ ಪರವಾದ ಪ್ರತಿಕ್ರಿಯೆಗಳು ಧುತ್ತೆಂದು ಗೋಚರಿಸುತ್ತವೆ. ಇದು ಪ್ರಜಾಪ್ರಭುತ್ವಕ್ಕೆ ಅತಿ ದೊಡ್ಡ ಗಂಡಾಂತರ. ಪ್ರಜಾಪ್ರಭುತ್ವಗಳ ಅಂತರ ಸರ್ಕಾರಿ ಸಮ್ಮೇಳನದಲ್ಲಿ ರಾಷ್ಟ್ರ ನಾಯಕರ ಮಧ್ಯದಲ್ಲಿ ಆತನಿಗೆ ಜಾಗಕೊಡಬಾರದು. ಸರಳ ರೇಖೆ ಆರ್ಥಿಕತೆಗೆ ಒತ್ತು ನೀಡುವ ಕಾರ್ಪೋರೇಟ್ ಸುಳಿಯಿಂದ ಹೊರಬಂದು. ಸಣ್ಣ ಸಣ್ಣ ಸಮುದಾಯಗಳ ನಡುವೆಯೇ ಕೃಷಿ, ಆಹಾರ, ನೀರು, ಹಣ ಇವುಗಳುಚಲಾಯಿಸುತ್ತಿರುವ ಸಹಕಾರಿ ಬದುಕಿಗೆ ಒತ್ತು ನೀಡಿ ಯಶಸ್ವಿ ಆಗಿರುವ ಹಲವು ಪ್ರಯೋಗಗಳಿವೆ.

**ಸಂದರ್ಶಕ :** ಹಾಗಾಗಿ ನೀವು ಶತಕೋಟ್ಯಾಧಿಪತಿ ಸರ್ವಾಧಿಕಾರಿಗಳು ಎನ್ನುತ್ತಿದ್ದೀರಿ. ಇವರು ಪ್ರಜಾಪ್ರಭುತ್ವಕ್ಕೆ ಸಹಾಯ ಮಾಡುತ್ತಿಲ್ಲ, ಬದಲಾಗಿ ಬೆದರಿಕೆ ಒಡ್ಡುತ್ತಿದ್ದಾರೆ. ಅಷ್ಟೇ ಅಲ್ಲ, ಅದರ ಹತ್ಯೆಗೂ ಸಜ್ಜಾಗಿದ್ದಾರೆ ಎನ್ನುತ್ತೀರಿ. ಇದು ಸ್ವಲ್ಪ ಅತಿಯಾಯಿತು ಎಂದೆನಿಸುತ್ತಿದೆ...

**ವಂದನಾ ಶಿವ :** ನಾನು ಸ್ವಾತಂತ್ರ್ಯೋತ್ತರ ಭಾರತದಲ್ಲಿ ಬೆಳೆದಿದ್ದೇನೆ. ಒಂದೇ ಒಂದು ಕಾರ್ಪೋರೇಟ್ ಕಂಪನಿಯೂ ಇಲ್ಲದಿದ್ದ ಭಾರತದ ಬೆಳೆದಿದ್ದೇನೆ. ಪ್ರಜಾಪ್ರಭುತ್ವ ಸಕ್ಷಮವಾಗಿ ಕಾರ್ಯನಿರ್ವಹಿಸುತ್ತಿದ್ದ ಭಾರತದಲ್ಲಿ ನಾನು ಬೆಳೆದಿದ್ದೇನೆ. ಹಾಗಾಗಿ ಈ ಡಿಜಿಟಲ್ ವ್ಯವಹಾರ–ವಿನಿಮಯ ವ್ಯವಸ್ಥೆಗಳನ್ನು ಬಲವಂತವಾಗಿ ಹೇರುವುದನ್ನು ಕಂಡಾಗ ಬಡ ರೈತರ ಮಧ್ಯೆ ಪರಸ್ಪರ ನಗದು ವ್ಯವಹಾರವನ್ನು

(೧೧ನೇ ಪುಟಕ್ಕೆ

ಪ್ರಚಲಿತ-೨

# ಕೊರೋನಾ ಮಹಾ ಮಾರಿ ನಮಗೆ ಏನು ಹೇಳುತ್ತಿದೆ?



ಈಗ ಜಗತ್ತನ್ನೇ ಕಾಡುತ್ತಿರುವ ಕೋವಿಡ್-೧೯ಕ್ಕೆ ಕಾರಣವಾಗಿರುವ ಕರೋನಾ ವೈರಾಣು ಇತರ ವೈರಾಣುಗಳಂತೆ ಜೈವಿಕ ಪರಿಣಾಮಗಳಿಗೆ ಮಾತ್ರವಲ್ಲದೆ, ಜಗತ್ತಿನ ಈವರೆಗಿನ ನಡೆಯ ದಿಕ್ಕನ್ನೇ ಮರುವಿಮರ್ಶೆಗೆ ಒಳಪಡಿಸುವಂತೆ ನಮ್ಮನ್ನು ಒತ್ತಾಯಿಸುವಂತಹ ಪಿಡುಗಾಗಿ ಪರಿಣಮಿಸಿದೆ ಎಂಬ ಚರ್ಚೆ ಈಗ ಹಲವು ವಲಯಗಳಲ್ಲಿ ಚಾಲ್ತಿಯಲ್ಲಿದೆ. ಇದಕ್ಕೆ ಕಾರಣ, ಈ ವೈರಾಣು ಕಾಣಿಸಿಕೊಳ್ಳತೊಡಗಿದ್ದು ಎಗ್ಗಿಲ್ಲದ ನಮ್ಮ ಬದುಕಿನ ರೀತಿ ನೀತಿಗಳಿಂದ ಸೃಷ್ಟಿಯ ಲಯಕ್ಕೇ ಭಂಗ ಬಂದುದರಿಂದ ಎಂಬ ಮಾತಿದೆ. ಹಾಗಾಗಿ ಈ ನಮ್ಮ ಆಧುನಿಕ ಬದುಕಿನ ಕಾಲಕ್ರಮದಲ್ಲಿ ಇದೊಂದು ನಿರ್ಣಾಯಕ ಘಟ್ಟವೂ ಇರಬಹುದೆಂಬ ಅಭಿಪ್ರಾಯವಿದೆ. ಈ ಹಿನ್ನೆಲೆಯಲ್ಲಿ 'ಹೊಸ ಮನುಷ್ಯ' ಬದುಕಿನ ಹಲವು ಪ್ರಾತಿನಿಧಿಕ ಕ್ಷೇತ್ರಗಳಲ್ಲಿ ತೊಡಗಿಕೊಂಡಿರುವ ಕೆಲವರನ್ನು ಈ ಬಗ್ಗೆ ಈ ಮೂರು ಪ್ರಶ್ನೆಗಳ ಮೂಲಕ ಅವರ ಚಿಂತನೆಯೇನು ಎಂದು ತಿಳಿಯಲು ಪ್ರಯತ್ನಪಟ್ಟಿತು-

*೧. ಕರೋನಾ ದಾಳಿ ಅನಿರೀಕ್ಷಿತವೇ? ಅದರ ಆಗಮನ ನಮಗೆ ಯಾವ ಸಂದೇಶ ನೀಡುತ್ತಿದೆ ಎಂದು ನಿಮಗನ್ನಿಸಿದೆ.*

*೨. ಕರೋನಾ ನಂತರದ ನಮ್ಮ ಬದುಕಿನ ದಿಕ್ಕು-ದೆಸೆ-ಮಾದರಿ ಹೀಗೇ ಇರುತ್ತದೆಯೆಂದು ನೀವು ಭಾವಿಸುವಿರಾ? ಅಲ್ಲವಾದರೆ ಏಕೆ?*

*೩.ನಿಮ್ಮ ಪ್ರಕಾರ ಕರೋನಾ ವೈರಾಣುವನ್ನು ಎದುರಿಸುವ ಕಾರ್ಯಕ್ರಮದ ಮುಖ್ಯ ನೆಲೆ ಯಾವುದಾಗಿರಬೇಕು?*

ಅವರ ಉತ್ತರಗಳು ಇಲ್ಲಿವೆ: ಎಲ್ಲರದ್ದೂ ಹೆಚ್ಚೂಕಡಿಮೆ ಒಂದೇ ಅಭಿಪ್ರಾಯ: ನಮ್ಮ ಬದುಕಿನ ಕ್ರಮ ಬದಲಾಗದೆ ಈ ಪಿಡುಗಿಂದ ಪರಿಹಾರವಿಲ್ಲ.

## ಎಚ್ಚರಿಕೆಗಳನ್ನು ಆಲಿಸದ ಪರಿಣಾಮ



೧. ಇದೇ ಸಮಯಕ್ಕೆ ಇದೇ ರೂಪದಲ್ಲಿ ಕರೋನಾ ದಾಳಿ ಮಾಡುತ್ತದೆ ಎಂದು ಯಾರೂ ನಿರೀಕ್ಷಿಸದೆ ಇದ್ದಿರಬಹುದು. ಹಾಗಾದರೂ ಹವಾಮಾನದಲ್ಲಿ ತೋರಿಬಂದ ಬದಲಾವಣೆಗಳು, ತಾಪಮಾನ ಏರುವಿಕೆ, ಅರಣ್ಯಗಳ ನಾಶ, ಜೈವಿಕ ಸಂಕುಲದ ಅಳಿವು ಮುಂತಾದ ಜಾಗತಿಕ ಸಂಗತಿಗಳು ಇಂಥದೊಂದು ಆಪತ್ತು ಎದುರಾಗಬಹುದಾದ ಊಹೆಗೆ ಅವಕಾಶಮಾಡಿಕೊಟ್ಟಿದ್ದವು. ಶತಮಾನಕ್ಕೂ ಮೊದಲು (೧೯೧೧) ವಿಕಾಸವಾದಿ ವಿಜ್ಞಾನಿ ರೆ ಲಂಕೆಸ್ಟರ್ ಆಧುನಿಕ ಸಾಂಕ್ರಾಮಿಕ ಪಿಡುಗುಗಳು ಮತ್ತು ಮಾನವ ಸೃಷ್ಟಿಸಿದ ಪರಿಸರ ಮಾರ್ಪಾಡುಗಳ ನಡುವೆ ಸಂಬಂಧ ಕಲ್ಪಿಸುವ ಮಾತುಗಳನ್ನು ಹೇಳಿದ್ದ. ನಂತರದಲ್ಲಿ ಅದೇ ಬಗೆಯ ಎಚ್ಚರಿಕೆಯ ಮಾತುಗಳನ್ನು ಇತರರೂ ಹೇಳುತ್ತಲೇ ಬಂದಿದ್ದಾರೆ. ಆ ಮಾತುಗಳನ್ನು ಯಾರೂ ಅಷ್ಟಾಗಿ ಪರಿಗಣಿಸದಿದ್ದದ್ದು ಇಂದು ಮಾರಕವಾಗಿ ಪರಿಣಮಿಸಿದೆ.

೨. 'ವರ್ಕ್ ಫ್ರಂ ಹೋಮ್,' ಆನ್‌ಲೈನ್ ತರಗತಿಗಳಂತಹ ತಾತ್ಕಾಲಿಕ ಪರಿಹಾರಗಳು ವ್ಯವಸ್ಥೆಯಲ್ಲಿ ಖಾಯಂ ಆಗಿ ಮುಂದುವರಿಯಬಹುದು. ಇದಕ್ಕೆ ಹಿತಾಸಕ್ತ ಗುಂಪುಗಳ ಬೆಂಬಲ, ಮನ್ನಣೆಗಳೂ ಸಿಗುತ್ತವೆ. ಪ್ರಸ್ತುತದಲ್ಲಿ ವ್ಯಾಪಕವಾಗಿರುವ ಅಸಮಾನತೆ ಇನ್ನಷ್ಟು ತೀವ್ರಗತಿಯಲ್ಲಿ ಏರಿಕೆಯಾಗುವ ಸಂಭವ ಹೆಚ್ಚಾಗಿದ್ದು, ಬಗೆ ಬಗೆಯ ಸಂಘರ್ಷಗಳಿಗೆ ಎಡೆಮಾಡಿಕೊಡಬಹುದು.

೩. ಭವಿಷ್ಯದತ್ತ ಚಿಂತಿಸುವಾಗ, ನಮ್ಮ ಎಲ್ಲ ಯೋಜನೆಗಳ ಮುಖ್ಯ ನೆಲೆ ಮಾನವನ ಗೌರವಯುತ ಬದುಕು ಆಗಿರಬೇಕು. ಸಮಾನತೆಯತ್ತ ಸಾಗುವ, ಪರಿಸರದ ಸಮತೋಲನ ಕಾಯ್ದುಕೊಳ್ಳುವ, ಬುದ್ಧ-ಗಾಂಧಿ ಜೀವನ ತತ್ವಗಳನ್ನು ಅಳವಡಿಸಿಕೊಳ್ಳುವ ದೀರ್ಘಾವಧಿ ಯೋಜನೆಗಳಿಗೆ ಒತ್ತುಕೊಡುವುದು ಸೂಕ್ತ.

**-ಹೆಚ್.ಎಸ್. ಈಶ್ವರ,** ನಿವೃತ್ತ ಸಂವಹನಶಾಸ್ತ್ರ ಪ್ರಾಧ್ಯಾಪಕರು, ಬೆಂಗಳೂರು

## ಈ ಟಿವಿಗಳನ್ನು ಮೊದಲು ಬಂದ್ ಮಾಡಬೇಕು!



೧.ಕರೋನ ನಮ್ಮ ದೇಶಕ್ಕೆ ವ್ಯಾಪಿಸಿರುವುದು ಅನಿರೀಕ್ಷಿತವೇನಲ್ಲ. ದಾಳಿ ಎನ್ನುವ ಶಬ್ದ ನನಗೆ ಸರಿ ಅನ್ನಿಸುವುದಿಲ್ಲ. ಅದು ಟಿವಿಯವರ ಭಾಷೆ. ಕರೋನಾ ವೈರಾಣುವಿಗೆ ಯಾವುದೇ ದೇಶದ ಗಡಿ ಗೊತ್ತಿಲ್ಲ. ಮಾನವರಲ್ಲಿ ರೋಗ ಉಂಟು ಮಾಡುವ ಶಕ್ತಿ ಹೊಂದಿದೆ ಅಷ್ಟೆ. ನಮ್ಮಲ್ಲಿ ಕಾಣಿಸಿಕೊಳ್ಳುವ ಮೊದಲು ಇತರೇ ದೇಶಗಳಲ್ಲಿ ಇತ್ತು. ವೈಮಾನಿಕ ಪ್ರಯಾಣಿಕರ ಮೂಲಕ ಬಂದಿದೆ ಅಷ್ಟೆ. ಮಾನವರಂತೆ, ಪ್ರಾಣಿ, ಪಕ್ಷಿ, ಸಸ್ಯಗಳಂತೆ ಮತ್ತು ಇತರೆ ಸೂಕ್ಷ್ಮಾಣುಗಳಂತೆ ಅದಕ್ಕೂ ಈ ಭೂಮಿಯಲ್ಲಿ ಇರುವ, ಜೀವಿಸುವ ಹಕ್ಕು ಇದೆ. ನಮ್ಮಲ್ಲಿ ಇದು ರೋಗ-ಬಾಧಕಗಳನ್ನು ಉಂಟುಮಾಡುವುದರಿಂದ, ನಾವು ಹುಷಾರಾಗಿ ನಮ್ಮ ನಿತ್ಯ ಜೀವನ ಸಾಗಿಸಬೇಕು, ಅಷ್ಟೆ.

೨. ಈ ಟಿವಿಗಳನ್ನು ಬಂದ್ ಮಾಡಬೇಕು. ದಿನಕ್ಕೆ ಹತ್ತು ನಿಮಿಷದ ಕರೋನಾ ವಾರ್ತೆ ಸಾಕು. ಸರ್ಕಾರದ ತಪ್ಪುಗಳಿಂದ ಬಡವರಿಗೆ, ಕಾರ್ಮಿಕರಿಗೆ ತೊಂದರೆ ಆಗಿದೆ. ಲಾಕ್ ಡೌನ್ ಮಾಡುವುದಕ್ಕಿಂತ ಮುಂಚೆ ಒಂದು ವಾರದ ಗಡುವು ನೀಡಿದ್ದರೆ, ಎಲ್ಲರೂ ಅವರವರ ಗೂಡು ಸೇರಿಕೊಳ್ಳುತ್ತಿದ್ದರು. ಕಾರ್ಮಿಕರ ಅಮಾನವೀಯ ವಲಸೆ ಇರುತ್ತಿರಲಿಲ್ಲ ಅಥವಾ ಕಡಿಮೆ ಆಗುತ್ತಿತ್ತು.

ಕರೋನಾ ಸಂಪೂರ್ಣವಾಗಿ ದೇಶದಿಂದ ಮಾಯವಾಗುವುದಿಲ್ಲ. ಅದು ಕಾಮನ್ ಫ್ಲ್ಯೂ ಹೇಗೆ ನಮ್ಮೊಡನೆ ಇದೆಯೋ ಹಾಗೆಯೇ ಕರೋನಾ ಸಹ ನಮ್ಮೊಡನೆ ಇರುತ್ತದೆ. ಕರೋನಾ ಭೀತಿ ಕನಿಷ್ಠ ಇನ್ನೆರಡು ವರ್ಷ ಇರುತ್ತದೆ. ಬೇರೆಯವರು ಮನೆಗೆ ಬರುವಂತಿಲ್ಲ, ನೀವು ಹೋಗುವಂತಿಲ್ಲ, ತಬ್ಬಿಕೊಳ್ಳುವಂತೆಯೂ ಇಲ್ಲ. ಪ್ರೀತಿಸುವಂತೆಯೂ ಇಲ್ಲ.

೩. ಸಂಶೋಧನೆ, ವೈರಾಣುವಿನ ಸಂಪೂರ್ಣ ಮಾಹಿತಿ, ರೋಗದ ಹರಡುವಿಕೆ, ಪ್ರಕೃತಿಯಲ್ಲಿ ಜೀವಿಸುವ ಅದರ ಶಕ್ತಿಯ ಅರಿವು, ವ್ಯಾಕ್ಸೀನ್ ಮತ್ತು ಔಷಧಿ ಸಂಶೋಧನೆ, ಜೀವನ ಶೈಲಿಯಲ್ಲಿ ಬದಲಾವಣೆ- ಈ ಕಾರ್ಯಗಳಿಂದ ವೈರಾಣುವಿನ ಜೊತೆ ಜೊತೆಗೆ ನಿರಾಳವಾಗಿ ಬದುಕಬಹುದು.

ಟಿವಿಗಳಲ್ಲಿನ ಅಬ್ಬರ, ', ಕೋಮು ಗಲಭೆಗೆ ವಾತಾವರಣ ಸೃಷ್ಟಿಸುವ ಟಿವಿ ಮಾಧ್ಯಮಗಳನ್ನು ಮತ್ತು ಅಂತಹ ವ್ಯಕ್ತಿಗಳನ್ನು ಭಯೋತ್ಪಾದಕರೆಂದು ದೂರವಿಡಬೇಕು.

**-ರಾಜಾ ಸಾಬ್ ಎ.ಎಚ್.,** ತುಮಕೂರು ವಿಶ್ವವಿದ್ಯಾಲಯದ ಮಾಜಿ ಕುಲಪತಿಗಳು, ಕಲಬುರಗಿ

## ಸುಖ-ಉಪಭೋಗದ ಬದುಕಿಗೆ ಇನ್ನು ಕಡಿವಾಣ



೧. ನನ್ನಮಟ್ಟಿಗೆ ಹೇಳುವುದಾದದರೆ ಕರೋನಾ ಅನಿರೀಕ್ಷಿತವೇ ಆಗಿತ್ತು. ನನಗೀಗ ೭೫ರ ಹರಯ, ಈ ವಯಸ್ಸಿನಲ್ಲಿ ನಾನು ಇದನ್ನೆಲ್ಲ ನೋಡಬೇಕಾಗಿ ಬರುತ್ತದೆಂದು ಯಾವತ್ತೂ ಯೋಚಿಸಿರಲಿಲ್ಲ. ಕರೋನಾದ ಒಂದು ಸಂದೇಶವಂತೂ ಸ್ಪಷ್ಟವಾಗಿದೆ. ಅದಕ್ಕೆ ಶ್ರೀಮಂತರು, ಬಡವರು ಎಂಬ ಬೇಧವಿಲ್ಲ. ರಾಷ್ಟ್ರಗಳ ನಡುವೆಯೂ ಅದು ಬೇಧವೆಣಿಸುವುದಿಲ್ಲ. ಭಾರತದಂತೆ ಅಮೆರಿಕಾವೂ ಕರೋನಾ ಸಂತ್ರಸ್ತವಾಗಿದೆ. ಚೀಣಾ ರಷ್ಯಾಗಳೂ, ಪ.ಯೂರೋಪಿನ ರಾಷ್ಟ್ರಗಳೂ ಎಲ್ಲವೂ ಕರೋನಾ ವೈರಾಣುವಿನಿಂದ ಸಮಾನವಾಗಿ ಆಕ್ರಮಣಕ್ಕೆ ಒಳಗಾಗಿವೆ.

೨. ಕರೋನ ನಂತರ ನಮ್ಮ ಬದುಕಿನ ದಿಕ್ಕು ದೆಸೆ ಖಂಡಿತ ಸಂಪೂರ್ಣವಾಗಿ ಬದಲಾಗುತ್ತದೆ ಎಂದು ನನ್ನ ಭಾವನೆ. ನಿಜಕ್ಕೂ ನಾವು ಇನ್ನು ಮುಂದೆ ನಮ್ಮ ನಿರಾತಂಕದ ಚೆಲುವಾದ ಬದುಕಿಗೆ ಹಾತೊರೆಯುವುದನ್ನು ಕೈಬಿಡಬೇಕು. ತಳಮಳವಿಲ್ಲದ ನಿಶ್ಚಿಂತೆಯ ಬದುಕು ಇನ್ನುಮುಂದೆ ನಮಗೆ ದಕ್ಕುವುದಿಲ್ಲ.

೩.. ಕರೋನಾ ವೈರಾಣು ದಾಳಿಯನ್ನು ಎದುರಿಸುವ ನಮ್ಮ ಮುಖ್ಯ ನೆಲೆ ಉಪಭೋಗ ಸಂಸ್ಕೃತಿಯನ್ನು ಸಂಪೂರ್ಣವಾಗಿ ಬಿಟ್ಟುಕೊಡುವುದಾಗಿರಬೇಕು. ಸುಖ-ಉಪಭೋಗಗಳು ಇನ್ನುಮುಂದೆ ನಮ್ಮ ಪಾಲಿಗೆ ಇಲ್ಲವೆಂಬ ದೃಢ ನಿರ್ಧಾರದೊಂದಿಗೆ ನಾವು ಬಾಳುವೆ ನಡೆಸಬೇಕು.

**-ಜಿ. ರಾಜಶೇಖರ,** ಲೇಖಕರು ಮತ್ತು ಚಿಂತಕರು, ಉಡುಪಿ

## ಕೊರೋನಾ ಸೋತಿದೆ ನಮ್ಮನ್ನು ಎಚ್ಚರಿಸಲು, ನಾವು ಗೆದ್ದಿದ್ದೇವೆ!



೧. ಅನಿರೀಕ್ಷಿತವಲ್ಲ. ಮುಂದಿನ ವಿಶ್ವ ಯುದ್ಧ ಮದ್ದುಗುಂಡುಗಳು, ಬಾಂಬ್‌ಗಳಿಂದಲ್ಲ, ಅದು ಜೈವಿಕ ಯುದ್ಧಾಸ್ತ್ರಗಳಿಂದ ಎಂಬ ಮಾತು ಬಹಳ ಕಾಲದಿಂದಲೂ ಹರಿದಾಡುತ್ತಲೇ ಇತ್ತು. ವೂಹಾನ್ ಶಹರದಲ್ಲಿ ಕೊರೋನಾದ ಚೆಲ್ಲಾಟದ ಫೋಟೋ ವಿಡಿಯೋಗಳನ್ನೆಲ್ಲ ನೋಡಿದಾಗ ಬಹಳವೇನೂ ತಲೆಕೆಡಲಿಲ್ಲ. ವಿದೇಶಗಳಿಂದ ಬರುವವರು ಹಕ್ಕಿಜ್ವರವನ್ನು ದೇಶದಿಂದ ದೇಶಕ್ಕೆ ಹಾರಿಸಿ ತಂದ ಉದಾಹರಣೆಗಳು ನಮ್ಮನ್ನು ರೆಡಿ ಮಾಡಿತ್ತು.

ಬಹಳ ನೇರ, ಸರಳ ಸಂದೇಶವದು. ಮಾನವಾ! ಎಲ್ಲ ಸಾಧಿಸಿದ್ದೇನೆಂದುಕೊಂಡಿದ್ದೀಯಲ್ಲ, ಎಲ್ಲಾ ನಿನ್ನ ನಿಯಂತ್ರಣದಲ್ಲಿದೆ ಎಂದುಕೊಂಡಿದ್ದೀಯಲ್ಲ, ಕಣ್ತೆರೆದು ನೋಡು ಸ್ವಲ್ಪ. ನಿಸರ್ಗದ ಒಂದು ಅತಿ ಚಿಕ್ಕ ಚೂರು ಮಾತ್ರ ನೀನು ಅರ್ಥಮಾಡಿಕೋ.

ಬಹುಶಃ ದಾರಿಯ ಮಧ್ಯದಲ್ಲಿದ್ದೇವೆ ನಾವು. ಈಗಲೇ ಹೇಳುವುದು ಕಷ್ಟ. ಲಾಕ್‌ಡೌನ್ ಕಾಲವನ್ನು ನೋಡಿದೆವು. ಲಾಕ್‌ಡೌನ್‌ದ ಆರಂಭದಲ್ಲಂತೂ ನಮ್ಮ ಬದುಕಿನ ದಿಕ್ಕೇ ಬದಲಾಗಿ ಹೋಯ್ತು ಎಂದುಕೊಂಡೆವು. ಕೆಲಕಾಲ ಹತಾಶೆ. ಮತ್ತೆ ಸ್ವಲ್ಪ ಹುಮ್ಮಸ್ಸು. ಈಗಲಾದರೂ ನಮಗೆ ಅರ್ಥವಾಗಬಹುದು, ನಮ್ಮ ಅಭಿವೃದ್ಧಿಯ ದಿಕ್ಕು ಬದಲಾಗಬಹುದು. ನಮ್ಮ ಆದ್ಯತೆಗಳು ಬದಲಾಗಬಹುದು. ಮಹಾತ್ಮಾ ಗಾಂಧೀಜಿಯವರು ತೋರಿಸಿದ ಹಾದಿ ನಮಗೀಗ ಕಾಣಬಹುದು. ನಾವು ನೀವೆಲ್ಲ ಕನಸಿದ, ಆಗಲಾರದು ಬಿಡೆಂದು ಕೈ ಕೊಡವಿದ್ದ ಜೀವನ ಪದ್ಧತಿ ಮುನ್ನೆಲೆಗೆ ಬರಬಹುದು ಎಂದೆಲ್ಲ. ಆದರೀಗ ಲಾಕ್ ಡೌನ್ ಸಮಯದಲ್ಲೆಲ್ಲ ಟಿವಿ, ರೆಡಿಯೋ (ನಿಮ್ಮಲ್ಲಿದ್ದರೆ) ಕಡೆಗೆ ನಿಮ್ಮ ಫೋನಿನ ರಿಂಗ್ ಟೋನ್‌ಗಳಲ್ಲಿ ಎಲ್ಲಿ ನೋಡಿದರೂ ಕೊರೋನಾ ಕುರಿತ ಎಚ್ಚರಿಕೆಯ ಮಾತುಗಳೆಲ್ಲ ನಮ್ಮ ಈ ಕಿವಿಯಿಂದ ಒಳಹೋಗಿದ್ದು ಸೀದಾ ಆ ಕಿವಿಯ ಮೂಲಕ ಹೊರಹೋಗಿಬಿಟ್ಟಿದ ಎನಿಸುತ್ತದೆ. ಕೊರೋನಾ ಸೋಂಕಿತರ ಸಂಖ್ಯೆ ಏರುತ್ತಲೇ ಇದೆ ಆದರೆ ನಾನು ಗಟ್ಟಿ. ನನಗೆ ಮಾತ್ರ ಕೊರೋನಾ ಬರುವುದಿಲ್ಲ ಎಂದು ನಿರ್ಧರಿಸಿರುವಂತೆ ಎಂದಿನ ವ್ಯವಹಾರದಲ್ಲಿ ಎಂದಿನಂತೇ ತೊಡಗಿಕೊಂಡಿದ್ದೇವೆ. ಕೊರೋನಾ ಸೋತಿದೆ ನಮ್ಮನ್ನು ಎಚ್ಚರಿಸಲು, ನಾವು ಗೆದ್ದಿದ್ದೇವೆ.

೩.ನಮ್ಮ ಮಧ್ಯೆ ಬೇಕಿರುವುದು ಸಾಮಾಜಿಕ ಅಂತರವಲ್ಲ, ದೈಹಿಕ ಅಂತರ ಮಾತ್ರ. ಸ್ವಚ್ಛತೆ, ಸ್ಥಳೀಯ. ಇತಿ ಮಿತಿ. ಸರಕಾರದ ನೀತಿ ಮತ್ತು ಆದ್ಯತೆಗಳು ಈ ಮಿತಿಯೊಳಗೆ ಇದ್ದರೆ ಅದನ್ನು ಬಾಯಲ್ಲಿ ಪ್ರಚಾರ ಮಾಡುವ ಅಗತ್ಯವೇ ಇಲ್ಲ. ಜನರು ರೂಢಿಸಿಕೊಳ್ಳುತ್ತಾರೆ. ನೀತಿ ಮತ್ತು ಕೃತಿ ಒಂದೇ ಇರಬೇಕು.

**–ಶಾರದಾ ಗೋಪಾಲ**, ಸಾಮಾಜಿಕ ಕಾರ್ಯಕರ್ತರು, ಧಾರವಾಡ

## ಜಾಗತಿಕ ಸಹಕಾರವೊಂದೇ ಸುಲಭ ಮತ್ತು ಸರಿಯಾದ ದಾರಿ

೧.ಈ ಕರೋನಾ ರೋಗ, ಅನಿರೀಕ್ಷಿತವಲ್ಲ. ಈ ವೈರಸ್ಸಿಗೆ ವಿಜ್ಞಾನಿಗಳು ಇಟ್ಟಿರುವ ಸಾರ್ಸ್, ಕೋವ್–೨ ಎಂಬ ಹೆಸರೇ ಇದನ್ನು ಸೂಚಿಸುತ್ತದೆ. ೨೦೦೩ರಲ್ಲಿ ಚೀನಾದಲ್ಲಿ ಮೊದಲಿಗೆ ಕಾಣಿಸಿಕೊಂಡು ನಂತರ ದಕ್ಷಿಣ ಕೊರಿಯಾ, ತೈವಾನ್, ಸಿಂಗಪುರ ಮುಂತಾದ ದೇಶಗಳಲ್ಲಿ ಹರಡಿದ 'ಸಾರ್ಸ್' ರೋಗವೂ ಕರೋನಾ ವೈರಸ್ಸಿನಿಂದಲೇ ಉಂಟಾದದ್ದು. ಪ್ರಾಣಿಗಳಿಂದ ಮನುಷ್ಯರಿಗೆ ಹರಡುವ ರೋಗಗಳು ಇನ್ನು ಮುಂದೆ ಹೆಚ್ಚುತ್ತಾ ಹೋಗುತ್ತವೆ ಎಂಬುದು ತಜ್ಞರ ಅಭಿಮತ.ನಮ್ಮ ರಾಜ್ಯದಲ್ಲಿ ಸುಮಾರು ಅರವತ್ತು ವರ್ಷಗಳ ಹಿಂದೆ ಕಾಣಿಸಿಕೊಂಡ 'ಕ್ಯಾಸನೂರು ಕಾಯಿಲೆ' ಇಂದಿಗೂ ಜನರನ್ನು ಬಲಿ ತೆಗೆದುಕೊಳ್ಳುತ್ತಿದೆ. ಅವುಗಳನ್ನು ನಿಯಂತ್ರಿಸುವ ರೀತಿಯಲ್ಲಿ ನಮ್ಮ ನಡಾವಳಿಗಳು ಬದಲಾಗಬೇಕು ಅಷ್ಟೆ.



೨. ವ್ಯಾಪಾರೋದ್ಯಮಗಳ ಜಾಗತೀಕರಣವೇ ಪರಿಸರ ನಾಶಕ್ಕೆ, ತನ್ಮೂಲಕ ಇಂತಹ ರೋಗಗಳಿಗೆ ಕಾರಣ ಎಂದು ಪ್ರತಿಪಾದಿಸುವವರು ಈ ರೋಗವು ಜಾಗತೀಕರಣವನ್ನು ಸ್ಥಗಿತಗೊಳಿಸಬಹುದು ಎಂದು ಆಶಿಸುತ್ತಿದ್ದಾರೆ. ಸುಮಾರು ಮುವತ್ತೈದು ವರ್ಷಗಳ ಹಿಂದೆ ಕಾಣಿಸಿಕೊಂಡ ಎಚ್.ಐ.ವಿ./ಏಡ್ಸ್ ರೋಗ ಕೂಡ ನಮ್ಮ ಬದುಕನ್ನು ಆಮೂಲಾಗ್ರವಾಗಿ ಬದಲಿಸುತ್ತದೆ ಎಂದು ನಂಬಲಾಗಿತ್ತು. ಆ ರೋಗವನ್ನು ತಡೆಗಟ್ಟಲಾಗಿದೆ. ಜೀವನ ಹಿಂದಿನಂತೆಯೆ ಮುಂದುವರೆದಿದೆ. ಜಗತ್ತಿನಾದ್ಯಂತ ಕಾಡಿದ ೧೯೧೮ರ 'ಇನ್‌ಫ್ಲ್ಯೂಯೆಂಜಾ' ರೋಗ ನಮ್ಮ ಸಾಮುದಾಯಿಕ ಪ್ರಜ್ಞೆಯಲ್ಲಿ ನೆಲೆಗೊಳ್ಳದೆ ಇರುವುದನ್ನು ನೆನಪಿಸಿಕೊಳ್ಳಿ.

೩. ಕೆಲವು ಪಶ್ಚಿಮದ ದೇಶಗಳು ಈ ರೋಗದ ಹರಡುವಿಕೆಗೆ ಚೀನಾವನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಲು ವ್ಯರ್ಥ ಪ್ರಯತ್ನಗಳನ್ನು ಮಾಡುತ್ತಿವೆ. ಚೀನಾದ ಕಮ್ಯೂನಿಸ್ಟ್ ರಾಷ್ಟ್ರೀಯವಾದಿಗಳನ್ನು ಸುಧಾರಿಸುವುದು ಸಾಧ್ಯವಾಗದ ಮಾತು. ಅದರ ಬದಲು ಜಗತ್ತಿನ ದೇಶಗಳೆಲ್ಲ ವಿಶ್ವಸಂಸ್ಥೆಯನ್ನು, ಅದರ ಮೂಲಕ ವಿಶ್ವ ಆರೋಗ್ಯ ಸಂಸ್ಥೆಯನ್ನು ಬಲಪಡಿಸಿ, ಇನ್ನು ಮುಂದೆ ಜಾಗತಿಕ ಮಟ್ಟದಲ್ಲಿ ಹರಡಬಹುದಾದ ರೋಗಗಳ ಬಗ್ಗೆ ನಿರಂತರವಾಗಿ ಕಟ್ಟೆಚ್ಚರ ವಹಿಸುವಂತಹ ಕ್ರಮಗಳನ್ನು ಕೈಗೊಳ್ಳುವತ್ತ ಜಗತ್ತಿನ ಎಲ್ಲ ದೇಶಗಳು, ಎಲ್ಲ ಜನರು ಶಿಸ್ತಿನಿಂದ ಸಹಕರಿಸುವುದೊಂದೆ ಸುಲಭವಾದ ಮತ್ತು ಸರಿಯಾದ ದಾರಿ.

**–ಗಿರೀಶ್ ವಿ. ವಾಘ್**, ನಿವೃತ್ತ ಹಿರಿಯ ಪತ್ರಕರ್ತರು, ಬೆಂಗಳೂರು

## ಗಾಂಧಿ-ಕುಮಾರಪ್ಪ ಹೇಳಿದ ಬದುಕಿನ ಪಾಠಗಳೇ ಪರಿಹಾರ



ವೈಜ್ಞಾನಿಕವಾಗಿ ಯೋಚಿಸಿದರೆ ಯಾವ ನಿರ್ದಿಷ್ಟ ವೈರಾಣು ಯಾವಾಗ ಹೀಗೆ ಪಸರಿಸಬಹುದು ಎಂದು ಹೇಳಲಾಗದಿದ್ದರೂ ಜಗತ್ತಿನಲ್ಲಿ ಅಸಂಖ್ಯಾತ ವೈರಾಣುಗಳಿರುವುದರಿಂದ ಹೀಗೆ ಆಗುವ ಸಾಧ್ಯತೆ ಯಾವಾಗಲೂ ಇರುತ್ತದೆ. ಅನಿರೀಕ್ಷಿತವೆಂದು ಹೇಳಲಾಗದು. ಇನ್ನೂ ಮುಖ್ಯವೆಂದರೆ ನಮ್ಮ ಜಗತ್ತಿನ ರಚನೆ, ಇಲ್ಲಿಯ ಸಕಲ ಜೀವಿಗಳು ಇವುಗಳ ಬಗ್ಗೆ ಸಮಗ್ರ ಜ್ಞಾನವೂ ಇಲ್ಲದೆ ಮನುಷ್ಯರು ನಿರಂತರವಾಗಿ ನಿಸರ್ಗದ ಮೇಲೆ ದಾಳಿ ಮಾಡುತ್ತಾ ಭೀಕರ ಏರುಪೇರುಗಳನ್ನು ಮಾಡಿದ್ದಾರೆ. ಈ ಏರುಪೇರುಗಳ ಪರಿಣಾಮಗಳನ್ನು ತಿಳಿಯುವಷ್ಟು ಸಮಗ್ರ ಜ್ಞಾನ ನಮಗಿಲ್ಲ. ಹೀಗಾಗಿ ಕೊರೋನಾ ವೈರಾಣು ಈ ಏರುಪೇರುಗಳಿಂದ ಎಂದು ಹೇಳಲಾರೆವು ಆದರೆ ಬಹುಜನ ವಿಜ್ಞಾನಿಗಳು ಇಂಥ ಸಾಧ್ಯತೆ ಇದೆಯೆಂದು ಹೇಳುತ್ತಾರೆ.

ಕೊರೋನಾ ವೈರಸ್ ಕೊಟ್ಟಿರುವ ಸಂದೇಶವೆಂದರೆ ವಿಜ್ಞಾನವೇ ನಮಗೆ ಈವರೆಗೆ ಕೊಟ್ಟಿರುವ ಜ್ಞಾನ ಬಳಸಿಕೊಂಡು ಎಲ್ಲಾ ದೇಶಗಳಲ್ಲಿ ಸಮರ್ಥವಾದ ಆರೋಗ್ಯ ವ್ಯವಸ್ಥೆ, ವೈದ್ಯಕೀಯ ಸೌಲಭ್ಯಗಳು, ಎಲ್ಲರೂ ಘನತೆಯಿಂದ ಬದುಕಬಲ್ಲ ಅರ್ಥವ್ಯವಸ್ಥೆಗಳನ್ನು ಕಟ್ಟಿಕೊಳ್ಳುವುದಾಗಿದೆ. ಏಕೆಂದರೆ ಕೊರೋನಾ ತಂದಿರುವ ನೋವು, ದುಃಖಗಳು ಸಾಮಾಜಿಕವಾಗಿವೆ, ಆರ್ಥಿಕವಾಗಿವೆ; ಅದು ತಂದಿರುವ ಸಾವುಗಳ ಆಚೆಗೆ ಇನ್ನೆಲ್ಲವೂ ನಾವು ಕಟ್ಟಿಕೊಂಡ ಅಮಾನುಷವಾದ ಅಸಮಾನತೆಗಳು ತಂದಿರುವ ದುಃಖಗಳೇ, ಭಾರತದಲ್ಲಂತೂ ನಾವು ಎಂಥ ಅಮಾನುಷ ಸಮಾಜವನ್ನು ಕಟ್ಟಿದ್ದೇವೆ ಎನ್ನುವುದನ್ನು ಈ ವೈರಾಣು ತೋರಿಸಿಕೊಟ್ಟಿದೆ.

ಕೊರೋನಾ ನಂತರ ನಮ್ಮ ಬದುಕಿನ ದಿಕ್ಕು ದೆಸೆಗಳು ಬದಲಾಗುತ್ತವೆ ಎಂದು ನನಗೆ ಅನಿಸಿಲ್ಲ. ಈಗಾಗಲೇ ರಾಷ್ಟ್ರಗಳು ವೈರಾಣು ಕೃಪೆಯಿಂದ ತಮ್ಮ ಸರ್ವಾಧಿಕಾರವನ್ನುಇನ್ನೂ ಬಲಪಡಿಸಿಕೊಂಡಿವೆ. ಜನರ ಎಲ್ಲಾ "ಇತರರನ್ನು" ಭೀತಿ ಮತ್ತು ಸಂಶಯದಿಂದ ನೋಡತೊಡಗಿದ್ದಾರೆ. ಈ ಜಗತ್ತು ಉಳ್ಳವರಿಗೆ ಮಾತ್ರ ಎನ್ನುವುದು ಹೆಚ್ಚು ನಿಜವಾಗತೊಡಗಿದೆ.

ಕೊರೋನಾವನ್ನು ನಿಜವಾಗಿ ಎದುರಿಸಬೇಕೆಂದರೆ (ದಯವಿಟ್ಟು ಯಾರೂ ನಗಬೇಡಿ) ಗಾಂಧಿ ಮತ್ತು ಜೆ.ಸಿ.ಕುಮಾರಪ್ಪನವರು ಹೇಳಿಕೊಟ್ಟಂತೆ ಬದುಕಲು ಆರಂಭಿಸಬೇಕು. ಕಾಮೂನ 'ಪ್ಲೇಗ್' ಕಾದಂಬರಿಯ ಕೊನೆಯ ವಾಕ್ಯಗಳಲ್ಲಿ ಇದೂ ಒಂದು– 'ಪ್ಲೇಗ್‌ತರುವ ರೋಗಾಣುಗಳು ಸಾಯುವುದಿಲ್ಲ ತಾತ್ಕಾಲಿಕವಾಗಿ ಸುಪದ್ರಿಯಲ್ಲಿರುತ್ತವೆ'.

**–ರಾಜೇಂದ್ರ ಚೆನ್ನಿ**, ನಿವೃತ್ತ ಪ್ರಾಧ್ಯಾಪರು ಹಾಗೂ ಲೇಖಕರು, ಶಿವಮೊಗ್ಗ

## ಇದು ಭಾರತದ ಪಾಲಿಗೆ ಜಾಗತೀಕರಣದ ಬೆಳ್ಳಿ ಹಬ್ಬ...



ಭಾರತದ ದೃಷ್ಟಿಯಿಂದ ನೋಡಿದರೆ, ಕೋರೋನಾ ಬಿಕ್ಕಟ್ಟು ಜಾಗತೀಕರಣದ ಬೆಳ್ಳಿಹಬ್ಬವೋ ಎನ್ನುವಂತೆ ಬಂದಿದೆ. ೧೯೯೦ಕ್ಕಿಂತ ಮೊದಲು ಈ ಆಧುನಿಕ ನಾಗರಿಕತೆಯು ಮಾಡಿದ್ದ ಪಾಪಗಳನ್ನೆಲ್ಲ ಬಿಟ್ಟರೂ ಈ ೨೫ ವರ್ಷಗಳಲ್ಲೇ ನಾವೆಲ್ಲ ಕೂಡಿ ಮಾಡಿದ ಪಾಪಸಂಚಯ ಕಡಿಮೆಯಲ್ಲ. ಬಾಹ್ಯ ಪರ್ಯಾವರಣದ ನೆಲೆಯಿಂದ ವ್ಯಕ್ತಿತ್ವಗಳ ಅಂತರಂಗದ ಲೋಕದವರೆಗೂ ಈ ಕಾಲು ಶತಮಾನದಲ್ಲಿ ನಾವು ಭಾರೀ ಪಲ್ಲಟಗಳನ್ನುಂಟಾಗಿಸಿಕೊಂಡಿದ್ದೇವೆ. ಉದಾಹರಣೆಗೆ, ಟಿವಿ ಮತ್ತು ಚರದೂರವಾಣಿ ಎಂಬ ವೈರಸ್ಸುಗಳನ್ನು ನಾವು ಟಾನಿಕ್ಕೋ ಎಂಬಂತೆ ಕುಡಿದು ನಮ್ಮ ಮೈಮನಗಳ ತುಂಬ ಕೊಳ್ಳುಬಾಕತನದ ದುರಾಶೆಯನ್ನು ವರ್ಧಿಸಿಕೊಂಡಿದ್ದೇವೆ. ಅಸಹ್ಯಕರ ಶ್ರೀಮಂತಿಕೆ, ಅನಗತ್ಯ ಪ್ರಯಾಣ, ಅಪಾಯಕಾರಿ ಆಹಾರ, ಅನರ್ಥಕರ ಮನರಂಜನೆ,

ಅನುಪಯುಕ್ತ ಮಾಹಿತಿಸಂಚಯ – ಇವೆಲ್ಲವೂ ಇವತ್ತು ಅಗತ್ಯಗಳೆಂಬಂತೆ ಜೀವನದಲ್ಲಿ ಸೇರಿಕೊಂಡಿವೆ. ಇವೆಲ್ಲದರ ಕರ್ಮಫಲವೇ ಕೋರೋನಾ.

ಸದ್ಯಕ್ಕೆ ನಮ್ಮ ಸರ್ಕಾರ–ಸಮಾಜ ಯಥಾನುಶಕ್ತಿ ಈ ಬಿಕ್ಕಟ್ಟಿನ ನಿರ್ವಹಣೆಯ ತುರ್ತುಕ್ರಮಗಳನ್ನು ಕೈಗೊಂಡಿವೆ. ತತ್ಕಾಲಕ್ಕೆ ಇವೆಲ್ಲ ಅನಿವಾರ್ಯವಾಗಿತ್ತು ನಿಜ, ಆದರೆ ಈ ಯಾವ ನಿರ್ವಹಣಾ ಪ್ರತಿಭೆಯೂ ನಮ್ಮನ್ನು ಭವಿಷ್ಯಕ್ಕೆ ಕೊಂಡೊಯ್ಯಲಾರವು ಎಂಬುದೂ ನಮಗೀಗ ಅರ್ಥವಾಗತೊಡಗಿದೆ. ನಾಯಿಕೊಡೆಗಳಂತೆ ತಲೆ ಎತ್ತಿದ್ದ ಹೈಟೆಕ್ ಆಸ್ಪತ್ರೆಗಳ್ಯಾವುದೂ ಕೋರೋನಾ ಬಂದಾಗ ಪ್ರಯೋಜನಕ್ಕೆ ಬಾರದೆ, ಸಾದಾ ಸರ್ಕಾರಿ ಆಸ್ಪತ್ರೆಗಳೇ ನಮಗೆ ಗತಿಯಾಗಲಿಲ್ಲವೆ? ಆದ್ದರಿಂದ, ಈ ಬಿಕ್ಕಟ್ಟನ್ನು ದಾಟುವ ಸಂಕಲ್ಪ ಇದ್ದರೆ, ಕೂಡಲೇ ನಾವು ತುರ್ತು ನಿರ್ವಹಣೆಗಳ ಆಚೆಗಿನ ದಾರ್ಶನಿಕ ಪ್ರಜ್ಞೆಯೊಂದನ್ನು ಉದ್ಬೋಧಗೊಳಿಸಿಕೊಳ್ಳಬೇಕು.

ಮನಸ್ಸು ಮಾಡಿದರೆ, ಅದೇನೂ ಅಸಾಧ್ಯವಲ್ಲ. ನನಗನ್ನಿಸುವಂತೆ, ನಾವು ಈ ಆಧುನಿಕ ನಾಗರಿಕತೆಯನ್ನೇ ಪೂರ್ಣ ನಿರಾಕರಿಸಿ ಮಧ್ಯಯುಗಕ್ಕೆ ಹಿಂದಿರುಗಬೇಕಾದ ಅಗತ್ಯವಿಲ್ಲ. ಕೇವಲ ೧೯೫೦ಕ್ಕೆ ಹಿಂದುರಿಗಿದರೂ ಸಾಕು, ನಮ್ಮ ವರ್ತಮಾನ ಭವಿಷ್ಯಗಳು ಸಹನೀಯಗೊಳ್ಳುತ್ತವೆ. ೧೯೫೦ರಷ್ಟೇ ಪ್ರಮಾಣದ ಆದಾಯ, ಅಭಿವೃದ್ಧಿ, ವಿಮಾನಪ್ರಯಾಣ, ಮನರಂಜನೆ, ಮಾಹಿತಿ ಸಂಚಯ, ಕೊಳ್ಳುಮಾರಾಟದ ಸರಕುಗಳು – ನಮಗೆ ಸಾಕು ಎಂದು ಸಾಮೂಹಿಕವಾಗಿ ನಿರ್ಧರಿಸಿದರೆ, ಅಷ್ಟರಮಟ್ಟಿಗೆ ನಮ್ಮ ಭವಿಷ್ಯ ದೃಢವಾಗುತ್ತದೆ.

ನನ್ನನ್ನು ಬೇಕಿದ್ದರೆ, ವಿಕ್ಷಿಪ್ತ ಆಶಾವಾದಿ ಎಂದುಕೊಳ್ಳಿ – ನಗರವಾಸಿ ಕೂಲಿಕಾರ್ಮಿಕರು ಕಾಲ್ನಡಿಗೆಯಲ್ಲೂ ತಮ್ಮ ಊರಿಗೆ ಹಿಂತಿರುಗುತ್ತಿರುವ ದಾರುಣತೆಯ ನಡುವೆಯೇ ಈ ನಾಗರಿಕತೆಯನ್ನು ಕುರಿತು ಅವರೊಳಗೆ ಮೂಡಿರಬಹುದಾದ ತಿರಸ್ಕಾರದ ಕಿಡಿ ನನ್ನೊಳಗೆ ಇಂಥದೊಂದು ಪಲ್ಲಟ ಸಂಭವಿಸುವ ಸಾಧ್ಯತೆಯನ್ನೂ ಅನುರಣಿಸಿದೆ.

**–ಕೆ.ವಿ.ಅಕ್ಷರ,** ಹಿರಿಯ ರಂಗಕರ್ಮಿ ಮತ್ತು ಲೇಖಕ, ಹೆಗ್ಗೋಡು

## ಸುಖೀ ಜೀವನಕ್ಕೊಂದು ಹೊಸ ಅರ್ಥ ಹುಡುಕಿಕೊಳ್ಳಬೇಕಿದೆ



ಇಡೀ ಜಗತ್ತಿಗೆ ಸಂಬಂಧಿಸಿ ಹೇಳುವುದಾದರೆ ಕೊರೋನಾ ಕೊರೋನಾ ದಾಳಿ ಅನಿರೀಕ್ಷಿತವಾಗಿರಬಹುದು. ಆದರೆ ಭಾರತಕ್ಕೆ ಇದು ಬಹಳ ಮುನ್ಸೂಚನೆ ನೀಡಿಯೇ ಬಂದಿತ್ತು. ಭಾರತಕ್ಕೆ ಕೋರೋನಾ ಕಾಲಿಡುವ ಮೊದಲು ಇತರ ದೇಶಗಳ ಪರಿಸ್ಥಿತಿಯ ಉದಾಹರಣೆ ನಮ್ಮ ಕಣ್ಣ ಮುಂದೆ ಇತ್ತು. ಆದಾಗ್ಯೂ ಹೆಚ್ಚು ಕಡಿಮೆ ಮಾರ್ಚ್ ತಿಂಗಳ ಮಧ್ಯ ಭಾಗ ಕಳೆಯುವವರೆಗೂ ವಿಮಾನ ನಿಲ್ದಾಣಗಳಲ್ಲಿ ಯಾವುದೇ ರೀತಿಯ ತಪಾಸಣೆಯೂ ಇರಲಿಲ್ಲ.

ಕೋರೋನಾ ನಂತರದ ದಿನಗಳು ಹೇಗಿರಬಹುದು ಎಂದು ಹೇಳುವುದು ಕಷ್ಟ. ಕೋರೋನಾ ಕಾಲವೇ ಬಹಳಷ್ಟು ಸುದೀರ್ಘವಾಗಲಿರುವ ಲಕ್ಷಣಗಳು ಕಾಣಿಸುತ್ತಿವೆ. ಈವರೆಗೆ ಸಂಕಷ್ಟದ ಸ್ವರೂಪ ಏನು ಮತ್ತು ಎಷ್ಟು ಎನ್ನುವುದು ಸ್ಪಷ್ಟವಾಗಿಲ್ಲ. ಇಷ್ಟಕ್ಕೆ ಮುಗಿಯುವುದೋ ಅಥವಾ ಎರಡನೆಯ ಅಲೆ, ಮೂರನೆಯ ಅಲೆ ಅಂತ ಬಂದು ಪರಿಸ್ಥಿತಿ ಬಿಗಡಾಯಿಸಲಿದೆಯೋ ಗೊತ್ತಾಗುತ್ತಿಲ್ಲ.

ಒಮ್ಮೆ ಲಸಿಕೆ ಬಂದುಬಿಟ್ಟರೆ ಆ ನಂತರ ಕೋರೋನಾ ಕಾಲದಲ್ಲಿ ಕಲಿತ ಯಾವುದೇ ಪಾಠಗಳು ನೆನಪಿರಬಹುದು ಅಂತ ಅನ್ನಿಸುವುದಿಲ್ಲ. ಆ ನಂತರ ಏನಿದ್ದರೂ ಮಕ್ಕಾಡೆ ಮಲಗಿರುವ ಅರ್ಥ ವ್ಯವಸ್ಥೆಯನ್ನು ಮತ್ತೆ ಚಿಗಿತುಕೊಳ್ಳುವ ಹಾಗೆ ಮಾಡುವತ್ತಲೇ ಎಲ್ಲರ ಗಮನವೂ ಇರಬಹುದು. ಈ ಪ್ರಯತ್ನದಲ್ಲಿ ಕೋರೋನಕ್ಕೆ ಕಾರಣವಾದ ಅಭಿವೃದ್ಧಿಯ ಅದೇ ಮಾದರಿಯನ್ನೇ ಮತ್ತೆ ದೊಡ್ಡ ರೀತಿಯಲ್ಲಿ ಬಳಸಿಕೊಳ್ಳುವ ಸನ್ನಾಹವೇ ಕಾಣಿಸುತ್ತದೆ. ಅದನ್ನು ಮುರಿದುಕಟ್ಟುವ ಯೋಚನೆಗಳನ್ನು ಹುಟ್ಟುಹಾಕಬಲ್ಲ ಮುತ್ಸದ್ದಿ ನಾಯಕತ್ವ ಜಾಗತಿಕ ಮಟ್ಟದಲ್ಲಾಗಲೀ, ರಾಷ್ಟ್ರ ಮಟ್ಟದಲ್ಲಾಗಲೀ ಕಾಣಿಸುತ್ತಿಲ್ಲ.

ಇನ್ನು ಕೋರೋನ ವೈರಾಣುವನ್ನು ಎದುರಿಸುವ ಮುಖ್ಯ ನೆಲೆ ಯಾವುದಾಗಿರಬೇಕು ಎಂದಾಗ, ವೈರಾಣುವನ್ನು ವೈಜ್ಞಾನಿಕವಾಗಿ ಎದುರಿಸುವುದೋ ಅಥವಾ ವೈರಾಣುವಿನ ದೆಸೆಯಿಂದಾಗಿ ಜನಜೀವನದಲ್ಲಿ ಉಂಟಾದ ಅಲ್ಲೋಲ ಕಲ್ಲೋಲವನ್ನು ಎದುರಿಸುವುದೋ ಎನ್ನುವ ಪ್ರಶ್ನೆ ಬರುತ್ತದೆ.. ಉಳಿದಂತೆ, ಈ ವೈರಾಣುವನ್ನು ಅಥವಾ ಮುಂದೆ ಎಂದಾದರೂ ಬರಬಹುದಾದ ಇಂತಹದ್ದೊಂದು ವೈರಾಣುವನ್ನು ಎದುರಿಸುವ ಮುಖ್ಯ ನೆಲೆ ಎಂದರೆ ಹೊಸ ರೀತಿಯಲ್ಲಿ ಬದುಕುವ ಒಂದು ವಿಧಾನವನ್ನು ಅಳವಡಿಸಿಕೊಳ್ಳುವುದು ಮತ್ತು ಸುಖೀ ಜೀವನಕ್ಕೊಂದು ಹೊಸ ಅರ್ಥವನ್ನು ಹುಡುಕಿಕೊಳ್ಳುವುದು ಅಂತ ಅನ್ನಿಸುತ್ತದೆ.

**–ಎ. ನಾರಾಯಣ,** ಪ್ರಾಧ್ಯಾಪಕರು, ಅಜೀಂಪ್ರೇಂಜಿ ವಿಶ್ವವಿದ್ಯಾಲಯ, ಬೆಂಗಳೂರು

## ಇದು ಜೀವ ವಿರೋಧಿ ಆರ್ಥಿಕ ವ್ಯವಸ್ಥೆ



ಕೋವಿಡ್–೧೯ ವೈರಸ್‌ನ ಉಗಮದ ಕಾರಣಗಳೇನೆ ಇರಬಹದು, ಆದರೆ ಅದು ಜಗತ್ತಿನ ಎಲ್ಲ ದೇಶಗಳಲ್ಲೂ ಕಂಡುಬರುತ್ತಿರುವ ಅದರ ಹರಡುವಿಕೆಯ ತೀವ್ರತೆ, ಅದು ಜನರ ಬದುಕಿನ ಎದುರು ತಂದಿಟ್ಟ ವಿವಿಧ ಸಂಕಷ್ಟಗಳು ಮತ್ತು ನಮ್ಮ ಇಂದಿನ ಬದುಕನ್ನು ನಿರ್ಧರಿಸುತ್ತಿರುವ ಆಧುನಿಕ ಆರ್ಥಿಕ ವ್ಯವಸ್ಥೆಗೂ ನಡುವೆ ಇರುವ ನಿಕಟ ಸಂಬಂಧವಿರುವುದಂತೂ ಸ್ಪಷ್ಟ. ತಮ್ಮ ಆರ್ಥಿಕ ಬದುಕಿಗಾಗಿ ಕೋಟ್ಯಂತರ ಜನರು ತಮ್ಮ ಊರನ್ನು ಬಿಟ್ಟು ದೂರದೂರಿನಲ್ಲಿ ನೆಲಸಿ ವಾಪಾಸ್ಸು ಬರಲು ಪರದಾಡಿದ್ದು, ಹಾಗೆ ಬಂದವರಿಂದಾಗಿ ವೈರಸ್ ಎಲ್ಲೆಡೆಯೂ ಹರಡಿದ್ದು, ಕೇವಲ ಒಂದು ತಿಂಗಳ ಲಾಕ್‌ಡೌನ್‌ನಿಂದಲೆ ನಗರಗಳಲ್ಲಿನ ಬದುಕು ಅಸಾಧ್ಯ ಎನ್ನುವ ಪರಿಸ್ಥಿತಿ ನಿರ್ಮಾಣವಾಗಿದ್ದು, ಇವೆಲ್ಲವನ್ನು ಸೂಕ್ಷ್ಮವಾಗಿ ಗಮನಿಸಿದರೆ ನಾವು ಎದುರಿಸುತ್ತಿರುವ ಇಂದಿನ ಸಂಕಷ್ಟಗಳಿಗೆ ಕೊರೋನಾ ವೈರಸ್‌ಗಿಂತ ಹೆಚ್ಚಾಗಿ ನಾವು ವಿಶ್ವಾದ್ಯಂತ ಜತನದಿಂದ ಕಾಪಾಡಿಕೊಂಡು ಬರುತ್ತಿರುವ ಆರ್ಥಿಕ ವ್ಯವಸ್ಥೆಯೇ ಕಾರಣ ಎನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ. ಕೊರೋನಾ ವೈರಸ್ ಜೀವ ವಿರೋಧಿ ಎಂದು ಮೇಲ್ನೋಟಕ್ಕನಿಸುತ್ತದೆ ನಿಜ. ಆದರೆ ವಾಸ್ತವದಲ್ಲಿನಮ್ಮ ಬದುಕನ್ನು ನಿರ್ಧರಿಸುತ್ತಿರುವ ಆರ್ಥಿಕ ವ್ಯವಸ್ಥೆ ಎಂತಹಾ ಜೀವ ವಿರೋಧಿ ಎನ್ನುವುದನ್ನು ನಮಗೆ ಈ ವೈರಸ್ ತೋರಿಸಿಕೊಟ್ಟಿದೆ ಅಷ್ಟೆ.

ಇದರ ಮುನ್ಸೂಚನೆ ಇರಲಿಲ್ಲವೆ? ಖಂಡಿತಾ ಇತ್ತು. ಆದರೆ ಆಧುನಿಕ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆ ಮತ್ತು ಅದರಲ್ಲಿ ಅಂತರ್ಗತವಾಗಿರುವ ಅಭಿವೃದ್ಧಿಯ ಪರಿಕಲ್ಪನೆಗೆ ಪರ್ಯಾಯವೇ ಇಲ್ಲವೇನೋ ಎನ್ನುವ ರೀತಿಯಲ್ಲಿ ಬದುಕನ್ನು ಕಟ್ಟಿಕೊಂಡಿರುವ ನಾವು ಕಾಲದಿಂದ ಕಾಲಕ್ಕೆ ದೊರೆಯುತ್ತಿರುವ ಮುನ್ಸೂಚನೆಗಳನ್ನು ಕಡೆಗಣಿಸುತ್ತಲೇ ಬಂದಿದ್ದೇವೆ. ಕೆಲವೊಮ್ಮೆ ಅಂತಹ ಮುನ್ಸೂಚನೆಗಳನ್ನು ಗುರುತಿಸಿದಾಗಲೂ ಸಹ ಅದಕ್ಕೆ ಪರಿಹಾರಗಳನ್ನು ಆತಂಕಗಳನ್ನು ತಂದೊಡ್ಡುತ್ತಿರುವ ಆಧುನಿಕ ಆರ್ಥಿಕ ವ್ಯವಸ್ಥೆಯೊಳಗೆಯೇ ಕಂಡುಕೊಳ್ಳುವ ವಿಫಲ ಪ್ರಯತ್ನ ನಡೆಸುತ್ತಿದ್ದೇವೆ.

ಹೀಗಾಗುತ್ತದೆ ಎಂದು ಬಹಳ ಹಿಂದೆಯೆ ಎಚ್ಚರಿಸಿದ್ದ ಗಾಂಧೀಜಿಯವರಂತಹ ಚಿಂತಕರ ಮಾತುಗಳನ್ನು ಅಳವಡಿಸಿಕೊಳ್ಳಲಾಗದ ಆದರ್ಶಗಳೆಂದು (ಯುಟೋಪಿಯನ್) ಗೌರವಪೂರ್ವಕವಾಗಿ ಬದಿಗೆ ಸರಿಸಲಾಗಿದೆ. ಪ್ರಚಲಿತ ಆರ್ಥಿಕ ವ್ಯವಸ್ಥೆಗೇ ಒಂದು ಪರ್ಯಾಯದ ಹುಡುಕಾಟ ಇಂದಿನ ಅತ್ಯಂತ ಅಗತ್ಯವಾಗಿದೆ. ಅಂತಹ ಹುಡುಕಾಟವನ್ನು ಪ್ರಾರಂಭಿಸುವಲ್ಲಿ ನಮ್ಮ ಇಂದಿನ ಚಿಂತನಾಕ್ರಮವನ್ನು ರೂಪಿಸುತ್ತಿರುವ ಶಿಕ್ಷಣವೂ ಈಗಿನ ಆರ್ಥಿಕ ವ್ಯವಸ್ಥೆಯ ಪೋಷಣೆಗೆಂದೇ ಜನ್ಮ ತಾಳಿದ್ದು ಎನ್ನುವ ಎಚ್ಚರ ನಮಗಿರಬೇಕು.

**–ಜೆ.ಎಸ್. ಸದಾನಂದ.,** ನಿವೃತ್ತ ಪ್ರಾಧ್ಯಾಪಕರು, ಚಿಂತಕರು, ಶಿವಮೊಗ್ಗ

## ಆಸೆಗೂ ದುರಾಸೆಗೂ ನಡುವೆ ಬೇಲಿ ಹಾಕಬೇಕಿದೆ



ನಮ್ಮೂರ ಕಡೆ ಹಳ್ಳಿಯಲ್ಲಿ ತುಳು ಭಾಷೆಯ ಜನರು ಆಡಿಕೊಳ್ಳುವ ಅರ್ಥಪೂರ್ಣವಾದ ಸೊಗಸಾದ ಒಂದು ಗಾದೆಯ ಮಾತಿದೆ. "ಉಂಡ್‌ನಾಯಗ್ ಬಡವು ಹೆಚ್ಚ! ತಿಂದಿನಾಯಗ್ ಕೊದಿ ಹೆಚ್ಚ". ಅಂದರೆ ಅರ್ಥ="ಊಟ ಮಾಡಿದಷ್ಟೂ ಹಸಿವು ಹೆಚ್ಚು–ತಿಂದಷ್ಟೂ ಆಸೆ ಹೆಚ್ಚು".ಇದರಲ್ಲಿ ಎರಡು ಪದ ಮುಖ್ಯವಾದದ್ದು. ಬಡವು ಅಂದರೆ ಹಸಿವೆ. ಕೊದಿ ಎಂದರೆ ಆಸೆ.

ಹೌದು ಸತ್ಯ, ಈ ಕೊರೋನಾ ಕೂಡಾ ಹುಟ್ಟಿಕೊಂಡದ್ದು ತಿಂದಷ್ಟೂ ಇನ್ನೂ ತಿನ್ನಬೇಕೆನ್ನುವ ಮನುಷ್ಯನ ಕೊದಿ ಅಥವಾ ಆಸೆಯ ಸ್ವಭಾವದಿಂದಾಗಿಯೇ ಅಲ್ಲವೇ? ಹಸಿವು ಸಹಜ, ಆದರೆ ಆಸೆ? ನಾವು ತಿನ್ನುವುದರಲ್ಲಿ ಎಷ್ಟೊಂದು ತಲ್ಲೀನವಾಗಿದ್ದೆವೆಂದರೆ ಹಸಿವು ಆಸೆಯಾದದ್ದು ಮತ್ತು ಇದೀಗ ಆಸೆಯೇ ನಮ್ಮನ್ನು ತಿನ್ನಲು ಹೊರಟದ್ದು ನಮಗೆ ಗೊತ್ತಾಗಲೇ ಇಲ್ಲ!

ನಮ್ಮ ಆಸೆ ತಿನ್ನುವುದರಲ್ಲಷ್ಟೇ ಉಳಿಯಲಿಲ್ಲ, ಬೇಕು, ಬೇಕುಗಳ ಬಯಕೆಯ ಪಟ್ಟಿಯನ್ನು ವಿವರಿಸಿ ಬರೆಯಬೇಕಾಗಿಲ್ಲ. ಅದು ನಮ್ಮೊಳಗಿದೆ. ಹಸಿವೆಗೂ–ಕೊದಿಗೂ, ಆಸೆಗೂ–ದುರಾಸೆಗೂ ನಡುವೆ ನಾವೇ ಒಂದು ಬೇಲಿ ಹಾಕಬೇಕಾಗಿದೆ. ಬೇಲಿಯೆಂದರೆ ಬೇಲಿಯಲ್ಲ. ತರಲವಾದ, ಕಣ್ಣಿಗೆ ಕಾಣಲಾರದ ಗೆರೆ, ಬಹಳ ಸೂಕ್ಷ್ಮವಾದ ಈ

(ಮುಂದಿನ ಪುಟಕ್ಕೆ

# ಕರೋನಾ ಸಂಕಟದಿಂದ ಕಲಿಯಬೇಕಾದ ಪಾಠಗಳು: ಎರಡು ಪ್ರತಿಕ್ರಿಯೆಗಳು

'**ಹೊ**ಸ ಮನುಷ್ಯ'ದ ಜೂನ್ ಸಂಚಿಕೆಯಲ್ಲಿ ಪ್ರಕಟವಾಗಿರುವ *ಕೊರೊನಾ ಸಂಕಟದಿಂದ ಜಗತ್ತು–ಭಾರತ ಕಲಿಯಬೇಕಾದುದು ಏನು?* ಎಂಬ ಲೇಖನದಲ್ಲಿ ಸುಧೀಂದ್ರ ಕುಲಕರ್ಣಿಯವರು ಗಮನಾರ್ಹವಾದ ಮಾತುಗಳನ್ನು ಬರೆದಿದ್ದಾರೆ. ಅವರ ಮಾತುಗಳಲ್ಲಿರುವ ಸದ್ಭಾವನೆಯ ಬಯಕೆ ಒಳ್ಳೆಯದೇ. ಆದರೆ ಅಲ್ಲಿರುವ ಕೆಲವು ಸಮಸ್ಯೆಗಳನ್ನು ಪ್ರಸ್ತಾವಿಸಬೇಕಾಗಿದೆ.

ಕೊರೊನಾ ಮುಕ್ತರಾಗಲು ವ್ಯಕ್ತಿಕೇಂದ್ರಿತ ಆಚರಣೆಯೇ ಪರಿಹಾರವೆಂದು ಕುಲಕರ್ಣಿಯವರು ಹೇಳುತ್ತಾರೆ. ಕೊರೊನಾದಿಂದ ನಾವೆಲ್ಲರೂ 'ಲಾಕ್‌ಡೌನ್'ನ ಸ್ವ–ನಿರ್ಬಂಧಿತ ಸ್ಥಿತಿಯಲ್ಲಿದ್ದವರು. ಸ್ವ–ಸಂಗೋಪನೆ ಮಾಡಿಕೊಳ್ಳುವುದು ಮನುಷ್ಯನ ಮೂಲಭೂತ ಪ್ರವೃತ್ತಿಗಳಲ್ಲಿ ಒಂದು. ಸಂಕಷ್ಟಗಳ ಕಾಲದಲ್ಲಿ ನಮ್ಮನ್ನು ರಕ್ಷಿಸಿಕೊಳ್ಳುವ ಮಾರ್ಗೋಪಾಯಗಳ ಬಗೆಗಷ್ಟೇ ನಾವ್ಯಾಕೆ ಯೋಚಿಸುತ್ತೇವೆಯೆಂದರೆ ನಮ್ಮ ಅಭಿವೃದ್ಧಿಯ ಸಂಕಥನಗಳಿರುವುದೇ ವ್ಯಕ್ತಿಕೇಂದ್ರಿತವಾಗಿ. ನಮ್ಮಂತಹ ಮನುಷ್ಯರಿಗೆ, ಇತರೆ ಜೀವಿಗಳಿಗೆ, ನಿಸರ್ಗಕ್ಕೆ, ಕೊನೆಗೆ ಇಡಿಯ ಜಗತ್ತಿಗೆ ಏನಾಗುತ್ತಿದೆ? ಎಂಬುದರ ಕುರಿತು ಯೋಚನೆಯೇ ಮಾಡದಂತೆ ದೇಹವೇ ಪರಮೋಚ್ಚವೆಂದು ಭಾವಿಸಿರುವ ನಮ್ಮ ಕಾಲದ 'ಫಿಟ್‌ನೆಸ್' ಮಂತ್ರವನ್ನಷ್ಟೇ ನಾವು ಈ ಸಮಯದಲ್ಲಿ ಜಪಿಸಿದ್ದೆವು. ಈ ಮಂತ್ರವನ್ನು ನಮ್ಮ ಪ್ರಧಾನಿಯವರೂ ಸೇರಿದಂತೆ ಬಹುತೇಕರು ಉಪದೇಶಿಸುತ್ತಿರುವುದು ನೋಡಿದರೆ, ಈ ಸಲಹೆಗಿರುವ ಇನ್ನೊಂದು ಮುಖ 'ದೇಹಸೌಖ್ಯವನ್ನು ಹೊರತುಪಡಿಸಿ ಇನ್ನಾವುದರ ಬಗೆಗೂ ಯೋಚನೆ ಮಾಡುವ ಉಸಾಬರಿ ನಿಮಗೆ ಬೇಡ' ಎಂಬ ಪುಸಲಾಯಿಸುವ ಧಾಟಿಯಲ್ಲಿರುವ ಎಚ್ಚರಿಕೆಯ ಮಾತುಗಳು.

ಕುಲಕರ್ಣಿಯವರು *ಈಚ್ ಫಾರ್ ಆಲ್, ಆಲ್ ಫಾರ್ ಈಚ್* ಎಂಬ ಸತ್ಯ ಕೊರೊನಾದ ಕಾಲದಲ್ಲಿ ಜಗತ್ತಿಗೆ ಅರಿವಾಗಿದೆ ಎಂದು ಹೇಳುತ್ತಾರೆ. ಇದನ್ನೇ ಅವರು ಹೊಸ ಸಮಾಜವಾದ ಎಂದೂ ಭಾವಿಸಿದಂತಿದೆ. ಜಗತ್ತಿನ ಪ್ರಶ್ನೆ ಬಿಡಿ. ಇದು ನಮ್ಮ ದೇಶದಲ್ಲಾದರೂ ಕಾಣಿಸಿಕೊಂಡಿದೆಯೇ? ಅನ್ನ–ನೀರು ಇಲ್ಲದೆ ಕೋಟಿಗಟ್ಟಲೆ ವಲಸೆ ಕಾರ್ಮಿಕರು ಕಾಲ್ನಡಿಗೆಯಿಂದ ತಂತಮ್ಮ ಊರುಗಳಿಗೆ ತೆರಳುವಾಗ ಅನೇಕರು ಜೀವತೆತ್ತರು. ಅದು ನಡೆಯುತ್ತಿರುವಾಗಲೇ ಮಧ್ಯಮ ವರ್ಗದ ಜನರಾದ ನಾವು ಬೆಳಗ್ಗಿನ ನಮ್ಮ ದೈಹಿಕ ಕಸರತ್ತಿನ ಮತ್ತು ಉಪಾಹಾರದ, ಸಂಜೆಯ ಸ್ನ್ಯಾಕ್ಸ್‌ನ ಫೋಟೋ ತೆಗೆದು ಸೋಶಿಯಲ್ ಮೀಡಿಯಾಗಳಲ್ಲಿ ಹಂಚುತ್ತಿದ್ದೆವು. ಈ ಹೊತ್ತಿನಲ್ಲಿ; ಯಹೂದಿಗಳ ನರಮೇಧ ನಡೆಯುತ್ತಿರುವಾಗ ತತ್ತ್ವಜ್ಞಾನಿ ಸಾರ್ತ್ರ್; 'ಹಿಟ್ಲರನಿಗೆ ನಾನು ಜವಾಬ್ದಾರ' ಎಂದು ಸಾರ್ವಜನಿಕವಾಗಿ ಘೋಷಿಸಿರುವುದನ್ನು ನಾವು ನೆನಪಿಸಿಕೊಳ್ಳಬೇಕಾಗಿದೆ. ಆ ಅರ್ಥದಲ್ಲಿ ಕೊರೊನಾಕ್ಕೆ, ಉಪಭೋಗ ಸಂಸ್ಕೃತಿ ಎಂಬ ರೋಗಕ್ಕೆ ನಿಷ್ಠೆಯಿಂದಿರುವ ನಾವೆಲ್ಲರೂ ಜವಾಬ್ದಾರರು.

ಕುಲಕರ್ಣಿಯವರು 'ಹೊಸ ಸಮಾಜವಾದ ಆರಂಭವಾಗಲಿದೆ' ಎಂದಿದ್ದಾರೆ. ಅಂತಹ ಸೂಚನೆ ಕಾಣುತ್ತಿದೆಯೇ.? ಕೊರೊನಾ ಪರಿಣಾಮಗಳ ಹಿನ್ನೆಲೆಯಲ್ಲಿ ಹೊಸಪಾಠ ಕಲಿತಿರುವ ನವಬಂಡವಾಳಶಾಹಿ ಜನರ ಮೂಲಭೂತ ಅವಶ್ಯಕತೆಯಾದ ಹಸಿವಿನ ಪ್ರಶ್ನೆಯನ್ನು ಆಹಾರೋದ್ಯಮ ಎಂದು ಪರಿವರ್ತಿಸಿ ಅದರತ್ತ ಧಾವಿಸುತ್ತಿದೆ. ವಿಜ್ಞಾನ–ತಂತ್ರಜ್ಞಾನಗಳು ಮಾನವತೆಯ ಐಕ್ಯತೆಗಾಗಿ ಹುಟ್ಟಿಕೊಂಡ ಶಕ್ತಿಗಳೆಂದು ಕುಲಕರ್ಣಿಯವರು ಬಣ್ಣಿಸಿದ್ದಾರೆ. ಆದರೆ ವಿಜ್ಞಾನ ಮತ್ತು ತಂತ್ರಜ್ಞಾನ ಇಂದು ನವಬಂಡವಾಳಶಾಹಿಯ ಕೈಯ ಆಯುಧಗಳಾಗಿರುವುದು ಕುರುಡನಿಗೂ ಕಾಣುತ್ತಿದೆ. ಜಗತ್ತಿನ ಸರ್ವಸ್ವವೂ ಮನುಷ್ಯನಿಗಾಗಿ ಇದೆ ಮತ್ತು ಇದು ಮನುಷ್ಯ ಕೇಂದ್ರಿತವಾದ ಜಗತ್ತು ಎಂದು ನಮ್ಮನ್ನು ನಂಬಿಸಿದ್ದು ಇದೇ ಬಂಡವಾಳಶಾಹಿಯಲ್ಲವೇ?

ಈ ಅಪಾಯವನ್ನು ಅರಿತ ನಮ್ಮ ಕಾಲದ ನಿಜವಾದ ಸಮಾಜವಾದಿ ಮಹಾತ್ಮ ಗಾಂಧೀಜಿಯವರ ***ಹಿಂದ್ ಸ್ವರಾಜ್*** ಆಧುನಿಕ ಸಮಾಜ ಹೇಗೆ ಗ್ರಾಹಕ ಕೇಂದ್ರಿತವಾಗಿದೆ? ಮತ್ತು ಆಧುನಿಕ ನಾಗರಿಕತೆ ಪ್ರಕೃತಿಯ ಜೊತೆಗಿನ ಮನುಷ್ಯ ಸಂಬಂಧದ ಗೋಣಸುಗಳನ್ನು ಹೇಗೆ ಮುರಿಯುತ್ತಿದೆ? ಎಂಬುದರ ಕುರಿತು ಯೋಚನೆ ನಡೆಸಿದ್ದ ಕೃತಿ.

ಮನುಷ್ಯನ ಅದಮ್ಯ ಬಯಕೆಗಳ ನಿರಂಕುಶತೆಯನ್ನು ಪ್ರೋತ್ಸಾಹಿಸುವ ಆಧುನಿಕತೆ, ಧರ್ಮದ ನಿಧಾನ ಲಯವನ್ನು ಧಿಕ್ಕರಿಸಿ ಧರ್ಮವೂ ಪಥಚ್ಯುತಗೊಳ್ಳುವಂತೆ ಮಾಡುವುದರಿಂದ ಮನುಷ್ಯ ಆಧ್ಯಾತ್ಮಿಕವಾಗಿ ಶೂನ್ಯನಾಗುತ್ತಾನೆ. ಹೀಗೆ ಒಳಗೆ ಟೊಳ್ಳಾದ ಮನುಷ್ಯ ಹೊರಗೆ ಹಿಂಸ್ರ ಮನಃಪ್ರವೃತ್ತಿಯವನಾಗುತ್ತಾನೆ ಎಂಬುದನ್ನು ಗಾಂಧೀಜಿಯವರು ಸಾರಿಸಾರಿ ಹೇಳಿದ್ದರು. ಇದನ್ನು ನಾವೀಗ ನೋಡುತ್ತಿದ್ದೇವೆ. ಗಾಂಧಿ ಚಿಂತನೆಯನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸುತ್ತ ಅಲ್ಲಿಗೆ ಮರಳಿ ಹೊರಳುವುದೇ ಈ ಎಲ್ಲ ಬಗೆಯ ರೋಗಗಳಿಂದ ಮುಕ್ತಿ ಪಡೆಯುವ ಏಕೈಕ ದಾರಿ.

**–ನಿತ್ಯಾನಂದ ಬಿ ಶೆಟ್ಟಿ**, ತುಮಕೂರು

**ಕ**ರೊನಾ ಹಾಗೂ ಲಾಕ್‌ಡೌನ್ ಎಂಬ ಶಬ್ದಗಳನ್ನು ಕೇಳಿ ಕ್ಷಣ ಕಣ್ಣು ಮುಚ್ಚಿಕೊಂಡರೆ ಮನಃಪಟಲದಲ್ಲಿ ಮೂಡುವ ಚಿತ್ರಗಳು ಎರಡೇ:

೧. ಕಂಕುಳಲ್ಲಿ ಕೂಸು ಇರುಕಿಸಿಕೊಂಡು, ಹೆಗಲ ಮೇಲೆ ಹೊರೆ ಹೊತ್ತು, ಕೈಯಲ್ಲಿ ಕಾಸಿಲ್ಲದೆ, ಮುಂದಿನ ತುತ್ತು ಎಲ್ಲೋ ಕಾಣದೆ, ನೂರಾರು ಕಿಲೋಮೀಟರ್ ಕಾಲು ಎಳೆಯುತ್ತ ರಾಜ್ಯಗಳ ಗಡಿಯಲ್ಲಿ ಅತಂತ್ರರಾಗಿ ಬೀದಿ ಪಾಲಾದ 'ವಲಸೆ ಕಾರ್ಮಿಕ'ರೆಂಬ ನವ ನಿರಾಶ್ರಿತರ ದಾರುಣ ಅವಸ್ಥೆ, ಮತ್ತು ಅಷ್ಟೇ ದಾರುಣವಾಗಿ ಆ ಅವಸ್ಥೆಗೆ ಕಲ್ಲಾದ ನಮ್ಮ ಸಮಾಜದ ಅಂತಸ್ಸಾಕ್ಷಿ...

೨. ಕ್ವಾರಂಟೈನ್ ಕೇಂದ್ರದಲ್ಲಿ ದಲಿತರು ಬೇಯಿಸಿದ್ದೆಂಬ ಒಂದೇ ಕಾರಣಕ್ಕೆ ಊಟದ ತಟ್ಟೆ ಸಮೇತ ಕಾಲಿನಿಂದ ಒದ್ದು ಮೇಜನ್ನು ಕೆಡವುವ ಮೂಲಕ ಹಸಿವನ್ನೇ ಅವಮಾನಿಸಿದ ಜಾತೀಯ ತಿಮಿರು...

ಈಗ ಹಿರಿಯ ಚಿಂತಕ ಸುಧೀಂದ್ರ ಕುಲಕರ್ಣಿಯವರು ಕರೊನಾ ಕಾರಣವಾಗಿ ಹೊಸದೊಂದು ವಿಶ್ವವ್ಯವಸ್ಥೆ ಉದಯಿಸುವುದೆಂಬ ಆಶಾಭಾವದಲ್ಲಿದ್ದಾರೆ. ಆದರೆ ಈ ಮೇಲಿನ ಚಿತ್ರಗಳು ಅಂಥದೊಂದು ಆಸೆಗೆ ಆಸ್ಪದವನ್ನೇ ಕೊಡುತ್ತಿಲ್ಲ. ಈಗಾಗಲೇ ದೇಶದಲ್ಲಿ ಕರೊನಾ ಬಿಕ್ಕಟ್ಟಿನಿಂದಾಗಿ ೧೩ ಕೋಟಿ ಮಂದಿ ಉದ್ಯೋಗ ಕಳೆದುಕೊಂಡಿದ್ದಾರೆ ಎಂದು ಒಂದು ಅಂದಾಜು. ಇನ್ನು ಭಾರತವೊಂದರಲ್ಲೇ ೪೦ ಕೋಟಿ ಮಂದಿ ಕಡು ಬಡತನದ ದವಡೆಗೆ ಸಿಲುಕಲಿದ್ದಾರೆ ಎಂದು ಐಎಂಎಫ್ ಅಧ್ಯಯನ ಹೇಳುತ್ತಿದೆ. ಹಾಗಾದರೆ ಈ ದಟ್ಟ ದಾರಿದ್ರ್ಯದ ತಳಹದಿಯ ಮೇಲೆ ಮೂಡಲಿರುವ ಹೊಸ ವಿಶ್ವವ್ಯವಸ್ಥೆಯಾದರೂ ಯಾವುದು?

ಇಲ್ಲಿಂದ ಮುಂದಕ್ಕೆ ಹೊಸದೊಂದು ಜಾಗತಿಕ ಸಮೀಕರಣ ಏರ್ಪಡುವುದು ನಿಶ್ಚಿತವೇ ಇರಬಹುದು. ಆದರೆ ಸುಧೀಂದ್ರ ಕುಲಕರ್ಣಿ ಆಶಿಸಿದಂತೆ 'ಸಮಾಜವಾದದ ಪುನರ್ಜನ್ಮ' ಅದರಲ್ಲೂ ಗಾಂಧಿ ಸಮಾಜವಾದದ ಮರು ಹುಟ್ಟಿಗೆ ಕರೊನಾ ಬಿಕ್ಕಟ್ಟು ದಾರಿಯಾಗಲು ಸಾಧ್ಯವೇ?...

ಹಾಲಿ ಕರೊನಾ ಒಂದೇ ಅಲ್ಲ, ಆಧುನಿಕ ಮಾನವ ಸಮಾಜದ ಎಲ್ಲ ಬಿಕ್ಕಟ್ಟುಗಳಿಗೂ ಒಂದಿಲ್ಲೊಂದು ಬಗೆಯಲ್ಲಿ ವಿಜ್ಞಾನ ತಂತ್ರಜ್ಞಾನದ 'ಸಾಧನೆ'ಗಳೇ ಬೀಜ ಬಿತ್ತಿವೆ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಂಡರೆ, ಸುಧೀಂದ್ರ ಕುಲಕರ್ಣಿಯವರ ಆಶಯಗಳಿಗೂ ಅವರು ಸೂಚಿಸುತ್ತಿರುವ ದಾರಿಗೂ ಅರ್ಥಾತ್ ತದ್ವಿರುದ್ಧ ಎಂಬುದು ಹೊಳೆಯುತ್ತದೆ. ತಂತ್ರಜ್ಞಾನದ ಅಸೀಮ ಅಟ್ಟಹಾಸವೇ ಅವರು ಬಯಸುವ ಗಾಂಧಿ ಪ್ರಣೀತ 'ಸ್ಥಳೀಯ ಅರ್ಥವ್ಯವಸ್ಥೆ'ಯ ಮೊದಲ ಶತ್ರು ಎಂಬುದೂ ಮನವರಿಕೆಯಾಗುತ್ತದೆ.

ಇದರ ಮಧ್ಯೆ ಅವರು ಲಾಕ್‌ಡೌನ್ ಅವಧಿಯಲ್ಲಿ ಜನಸ್ತೋಮ ಪಡೆದುಕೊಂಡ 'ಏಕಾಂತದ ಅನುಭವ'ದ ಬಗ್ಗೆ 'ಆತ್ಮಾವಲೋಕನದಲ್ಲಿ ಅಡಗಿರುವ ದೊಡ್ಡ ಸೃಜನಶಕ್ತಿಯ' ಬಗ್ಗೆ ಚಪ್ಪಾಳೆ ತಟ್ಟುತ್ತಿದ್ದಾರೆ! ಏನು ಹೇಳುವುದು?

**–ಎನ್.ಎಸ್. ಶಂಕರ್**, ಬೆಂಗಳೂರು

---

**ಹಿಂದಿನ ಪುಟದಿಂದ)**

ರೇಖೆಯನ್ನು ನಮಗೆ ನಾವೇ ಕೊಳ್ಳಲು ಸಂಯಮದ ಗಟ್ಟಿ ಮನಸ್ಸು ಬೇಕಾಗುತ್ತದೆ.

ನನ್ನ ಆಸೆ ಇನ್ನೊಬ್ಬನಿಗೆ ದುರಾಸೆಯಾಗಿ ಕಾಣಬಹುದಾದ ಸಾಧ್ಯತೆಯಿದೆ ಅನ್ನುವುದು ನನಗೆ ಗೊತ್ತಿದೆ. ಹಾಗಾಗಿಯೇ ಒಮ್ಮೊಮ್ಮೆ ನನಗೆ ಒಂದು ರೀತಿಯ ಪಾಪಪ್ರಜ್ಞೆ ಕೂಡಾ ಕಾಡುತ್ತದೆ. ಇರಲಿಕ್ಕೊಂದು ಮನೆ, ಹೊತ್ತಿಗೊಂದು ಊಟ ಇಲ್ಲದೆ ಮೂಲಭೂತ ಅವಶ್ಯಕತೆಯಿಂದಲೇ ವಂಚಿತರಾದವರ ಪರಿಸ್ಥಿತಿಯನ್ನು ನಾವು ಯೋಚಿಸಬಲ್ಲೆವೇ? ಇನ್ನೊಬ್ಬರ ನೋವು, ಇನ್ನೊಬ್ಬರ ಕಷ್ಟ ನಿಜದಲ್ಲಿ ನಮ್ಮದಾಗುವುದು ಎಷ್ಟು ಕಷ್ಟ! ಆದಂತೆ ಮಾತಾಡುವುದು ಅಥವಾ ಆದಂತೆ ಭಾವಿಸುವುದು ಮಾತ್ರ ಸುಲಭ.

ಇನ್ನು ಕೊರೊನಾದ ಜೊತೆಗೆ ನಾವು ಬಹುಕಾಲ ಬಾಳಬೇಕಾಗಬಹುದು ಅನ್ನುವುದು ಹಲವರ ಅಭಿಪ್ರಾಯ. ಗೊತ್ತಿಲ್ಲ. ಬಹುಶಃ ಯಾರಿಗೂ ಗೊತ್ತಿಲ್ಲ. ಮಾಸ್ಕ್, ಸ್ಯಾನಿಟೈಸರ್, ಸೋಷಿಯಲ್ ಡಿಸ್ಟೆನ್ಸ್ ಇವೆಲ್ಲದರ ಜೊತೆಗೆ ದೇಹದ ಇಮ್ಯೂನಿಟಿ ಲೆವೆಲ್‌ನ್ನು ಬೆಳೆಸುವುದೊಂದೇ ಸದ್ಯಕ್ಕೆ ನಮಗಿರುವ ಪರಿಹಾರ ಅಂತಷ್ಟೆ ಹೇಳಬಹುದು. ದೇಹದ ಇಮ್ಯೂನಿಟಿಗೆ ಆಹಾರವಲ್ಲವೇ ಅಗತ್ಯವಾಗಿ ಬೇಕಾದದ್ದು? ಮತ್ತೆ ಪುನಃ, ಹಾಗಾದರೆ ಬಡವರು ಏನು ಮಾಡಬೇಕು? ಅಂತ ಕೇಳಿದರೆ ಅದಕ್ಕೇನು ಉತ್ತರವಿದೆ ನಮ್ಮಲ್ಲಿ?? '

**-ಸಂಧ್ಯಾದೇವಿ**, ಕವಯತ್ರಿ. ಪುತ್ತೂರು

ಪ್ರಚಲಿತ-೩

# ಕೊರೋನಾ, ಡಾ. ಲೀ ಮತ್ತು ಗಾಂಧಿ

-ರಾಜ್‌ಮೋಹನ್ ಗಾಂಧಿ



**ಗಾಂಧಿ, ಭಾರತದ ಬಹು ದೊಡ್ಡ ದುರಂತವೆಂದು ೨೦೨೦ರ ಯಾವ ಕಾರ್ಮಿಕ ವಲಸೆಯನ್ನು ಅಲ್ಲಗಳೆಯಲಾಗದೋ ಅಂತಹ ಸಂಗತಿಯ ಬಗ್ಗೆ ಮತ್ತೆ ಮತ್ತೆ ಹೀಗೆ ಎಚ್ಚರಿಸುತ್ತಿದ್ದರು: "ಎಲ್ಲಿಯವರೆಗೆ ನಮ್ಮ ಆಳುವ ವರ್ಗ ಮತ್ತು ನಾಗರಿಕರು ಕೂಡಿ ಪರಸ್ಪರ ಕೈ ಜೋಡಿಸಿ ನಮ್ಮ ಗ್ರಾಮಾಂತರ ಮತ್ತು ಹೊರವಲಯಗಳ ಜೀವನೋಪಾಯಗಳನ್ನು ಮತ್ತು ಬದುಕನ್ನು ಸುಧಾರಿಸಿಕೊಳ್ಳುವುದಿಲ್ಲವೋ ಅಲ್ಲಿಯವರೆಗೂ ನಮ್ಮ ಭಾರತೀಯ ಸಮಾಜವು ರೋಗಪೀಡಿತವಾಗಿಯೇ ಉಳಿದಿರುತ್ತದೆ". ನಮ್ಮ ೧೫ ಕೋಟಿ ಭಾರತೀಯರು ಕೇವಲ ಒಂದು ಡಜನ್ ಬೃಹತ್ ಮಹಾನಗರಗಳಲ್ಲಿ ಮತ್ತು ಹೆಚ್ಚೂ ಕಡಿಮೆ ಒಂದು ನೂರರಷ್ಟು ಪಟ್ಟಣಗಳಲ್ಲಿ ಅಮಾನವೀಯವಾದಂತಹ ಪರಿಸ್ಥಿತಿಯಲ್ಲಿ ದಟ್ಟಣೆಗೊಂಡಿರುವ ಸಾಧ್ಯತೆಯನ್ನು ನೆನೆಸಿಕೊಳ್ಳುತ್ತಾ ನಮ್ಮ ಭವಿಷ್ಯದ ವೈರಾಣುಗಳು ಖಂಡಿತ ತಮ್ಮ ಬಾಯಿಯನ್ನು ಚಪ್ಪರಿಸಿಕೊಳ್ಳುತ್ತಿರುತ್ತದೆ.**



**ಕೊ**ರೋನಾ ವೈರಾಣುವಿನ ಸೋಂಕು ಮಾನವ ಜನಾಂಗದ ಯಾವುದೇ ವ್ಯಕ್ತಿಗೂ ತಗುಲಿ ಬಾಧಿಸಬಹುದಾದ ನಮ್ಮೆಲ್ಲರ ಸಮಾನ ದುರ್ಬಲತೆಗೆ ಸಾಕ್ಷಿಯಂಂತಿರುವ ಇಂದಿನ ಸಂದರ್ಭವು ವಾಸ್ತವವಾಗಿ ಯಾವುದೋ ಒಂದು ಧರ್ಮದ ಜನರನ್ನೋ ರಕ್ತದ ಗುಂಪಿನ ಜನರನ್ನೋ, ನಿರ್ದಿಷ್ಟ ಬಣ್ಣದ ತೊಗಲಿನವರನ್ನೋ ಬೊಟ್ಟು ಮಾಡಿ ದೂಷಿಸುವುವಂಥ ಮತ್ತು ಆಪಾದಿತರನ್ನಾಗಿ ಕಲ್ಪಿಸುವ ಮನುಷ್ಯನ ಸಣ್ಣತನವನ್ನು ಬಯಲು ಮಾಡುವಂತಿದೆ

ಕೊವಿಡ್-೧೯ ರಿಂದ ಮುಕ್ತವಾದ ನಂತರದ ಸುಧೀರ್ಘ ಕಾಲದವರೆಗೂ, ಕೊರೊನ ವೈರಾಣುವಿನ ಹುಟ್ಟಿನ ಕಾರಣದ ಬಗೆಗೆ ಅತೀ ಹತ್ತಿರವೆನಿಸಬಹುದಾದಂತೆ ಆಡಿದ ಒಂದು ಮಾತನ್ನು ಜಗತ್ತು ಸದಾ ನೆನಪಿಸಿಕೊಳ್ಳುತ್ತಿರುತ್ತದೆಂದು ಭಾವಿಸುತ್ತೇನೆ. ವುಹಾನ್ ಪಟ್ಟಣದಲ್ಲಿದ್ದ ಲೀ ವೆನ್ಲಿಯಾಂಗ್ ಎಂಬ ೩೪ ವರ್ಷದ ಚೀನಾದ ವೈದ್ಯನೊಬ್ಬ ಆ ಮಾತನ್ನು ಆಡಿದ್ದನು.

ಅವನು "ಒಂದು ಆರೋಗ್ಯಕರವಾದ ಸಮಾಜದಲ್ಲಿ ಹಲವು ಧ್ವನಿಗಳಿಗೆ ಮತ್ತು ಅವುಗಳಿಗೆ ಕಿವಿಗೊಡುವಂತಹ ಅವಕಾಶವಿರಬೇಕು ಎಂದೆನಿಸುತ್ತದೆ" ಎಂದಿದ್ದನು. ಫೆಬ್ರವರಿ ೭ ರಂದು, ಅಂದರೆ *ಸ್ಟ್ರೇಟ್ಸ್ ಟೈಮ್ಸ್* ಎಂಬ ಸಿಂಗಾಪುರದ ಪ್ರಸಿದ್ಧ ಪತ್ರಿಕೆಯು 'ಲೀ' ಯ ಹೇಳಿಕೆಯನ್ನು ಪ್ರಕಟಿಸಿದ ಒಂದು ದಿನದ ನಂತರ ಈ ವೈದ್ಯ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಯಾವ ವೈರಾಣು ಸೋಂಕಿತರನ್ನು ಉಪಚರಿಸುತಿದ್ದನೋ ಅದೇ ಕೊರೋನಾ ವೈರಾಣುವಿಗೆ ಬಲಿಯಾಗಿದ್ದನು. ಡಿಸೆಂಬರ್ ೩೦,೨೦೧೯ ರಂದು ಡಾ. ಲೀ, ಸ್ಥಳೀಯ ಸಾಗರ ಆಹಾರಗಳ ಮಾರುಕಟ್ಟೆಯೊಡನೆ ವ್ಯವಹಾರ ನಡೆಸಿದ್ದ ಒಟ್ಟು ಏಳು ಜನ ರೋಗಿಗಳನ್ನು ತೀವ್ರ ಉಸಿರಾಟದ ತೊಂದರೆಯ ಕಾರಣಕ್ಕಾಗಿ ತಮ್ಮ ಆಸ್ಪತ್ರೆಯ ಪ್ರತ್ಯೇಕ ವಾರ್ಡ್‌ಗಳಲ್ಲಿ ಇರಿಸಲಾಗಿದೆ ಎಂದು 'ವೀ ಚಾಟ್' ಎಂಬ ತಮ್ಮ ಕಾಲೇಜು ಸಹವಿಧ್ಯಾರ್ಥಿಗಳ ಗುಂಪಿಗೆ ಸಂದೇಶದ ಮೂಲಕ ತಿಳಿಸಿದ್ದರು. ಆದರೆ ಅವರ ಸಂದೇಶದ ಸ್ಕ್ರೀನ್ ಶಾಟ್ ಹೇಗೋ ಸೋರಿಕೆಯಾಗಿತ್ತು. ನಾಲ್ಕು ದಿನಗಳ ನಂತರ ವುಹಾನ್ ಪ್ರಾಂತ್ಯದ ಪೊಲೀಸರು ಆನ್‌ಲೈನ್‌ನಲ್ಲಿ ಊಹಾಪೋಹಗಳನ್ನು ಹರಡುತ್ತಿದ್ದಾರೆಂದೂ ಮತ್ತು ಸಾಮಾಜಿಕ ಸುವ್ಯವಸ್ಥೆಗೆ ಭಂಗ ಉಂಟುಮಾಡುತ್ತಿದ್ದಾರೆಂದೂ ಆರೋಪಿಸಿ ಅವರನ್ನು ವಿಚಾರಣೆಗೊಳಪಡಿಸಿ ಛೀಮಾರಿ ಹಾಕಿ ಎಚ್ಚರಿಸಿದ್ದರು.

ಆದರೆ ಯಾವಾಗ ಈ ವೈರಾಣು ಸ್ಫೋಟಗೊಂಡಿತೋ ಆಗ ಚೀನಾದ ಸರ್ವೋಚ್ಚ ನಾಗರಿಕ ನ್ಯಾಯಾಲಯ ಸೂಕ್ಷ್ಮವಾಗಿ ಮತ್ತು ಅಪರೋಕ್ಷವಾಗಿ ವುಹಾನ್ ಪೊಲಿಸರನ್ನು ತರಾಟೆಗೆ ತೆಗೆದುಕೊಂಡಿತ್ತು. 'ಸ್ಟ್ರೇಟ್ಸ್ ಟೈಮ್ಸ್' ಪತ್ರಿಕೆಯು ಉಲ್ಲೇಖಿಸಿದ ಪ್ರಕಾರ ನ್ಯಾಯಾಲಯ ಹೇಳಿದ್ದೇನೆಂದರೆ, 'ಡಾ.ಲೀ ಅವರ ತಥಾಕಥಿತ ಊಹಾಪೋಹವನ್ನು ಜನರು ನಂಬಿ ಮುಖ ಗವಸುಗಳನ್ನು ಧರಿಸಲು, ಸ್ವಚ್ಛತೆಯ ಕ್ರಮಗಳನ್ನು ಅನುಸರಿಸಿ ಮತ್ತು ಕಾಡು ಮತ್ತು ಸಾಗರ ಪ್ರಾಣಿಗಳ ಆಹಾರದ ಮಾರುಕಟ್ಟೆಯನ್ನು ಪ್ರವೇಶಿಸದಿದ್ದರೆ ಒಳ್ಳೆಯದಿತ್ತು'. ಈ ಅಭಿಪ್ರಾಯವು ಸರ್ವೋಚ್ಚ ನ್ಯಾಯಾಲಯದಿಂದ ಹೊರಟಿದ್ದು ಜನವರಿ ೨೮, ಅಂದರೆ ಪೊಲೀಸರು ಡಾ. ಲೀ ಅವರನ್ನು ಖಂಡಿಸಿದ ನಾಲ್ಕು ವಾರಗಳ ನಂತರ ಮತ್ತು ಲೀ ಅವರ ಸಾವಿನ ೧೦ ದಿನಗಳ ಮೊದಲು. ಡಾ.ಲೀ ಸಾವಿನ ನಂತರ ಅವರನ್ನು ಯಾವುದೇ ಅಳುಕು ಇಲ್ಲದೆ ಅವರಿಗೆ ಚೀನಾದ ಅತ್ಯುನ್ನತ ರಾಷ್ಟ್ರೀಯ ಗೌರವವನ್ನೂ ಸಮರ್ಪಿಸುವ ಮೂಲಕ ಅವರನ್ನು 'ಪುನರುಜ್ಜೀವಿತ'ಗೊಳಿಸಲಾಯಿತು! ಆದರೆ ಭವಿಷ್ಯವು ಅವರಿಗೆ ಸಂದಾಯವಾದ ಅತ್ಯುನ್ನತ ರಾಷ್ಟ್ರೀಯ ಗೌರವದ ಬಗ್ಗೆ ಹೆಚ್ಚು ಯೋಚಿಸುವುದಿಲ್ಲವೆನಿಸಿದರೂ ಅವರ 'ಒಂದು ಆರೋಗ್ಯವಂತ ಸಮಾಜದಲ್ಲಿ ಹಲವು ಧ್ವನಿಗಳಿಗೆ ಅವಕಾಶವಿರಬೇಕು ಮತ್ತು ಅವನ್ನು ಆಲಿಸುವಂತಿರಬೇಕು' ಎಂಬ ಕರೆ ಮಾತ್ರ ಉಳಿದೇ ಇರುತ್ತದೆ. ಡಾ.ಲೀ ಅವರ ಈ ಮಾತು ಗಾಂಧೀಜಿ ಅವರ ಬಗ್ಗೆ ನನ್ನಲ್ಲಿ ಮಾತ್ರವಲ್ಲದೆ ಅನೇಕರಲ್ಲಿ ಯೋಚಿಸುವಂತೆ ಪ್ರಚೋದಿಸಿತು ಎನ್ನುವುದಂತೂ ನಿಜವಾದರೂ, ಅದು ಲೀ ಅವರ ಈ ಹೇಳಿಕೆ ಜನವರಿ ೩೦ ರಂದೇ ಹೊರ ಬಂದಿತೆಂಬ ಕಾರಣಕ್ಕಂತು ಅಲ್ಲ. ಗಾಂಧಿ ಮತ್ತು ಲೀ ಅವರನ್ನು ಜೊತೆಯಲ್ಲೇ ನೆನಪಿಸಿಕೊಂಡಾಗ ಹಲವು ವಿಚಾರಗಳು ಮನಸ್ಸಿನಲ್ಲಿ ಪ್ರತಿಫಲನಗೊಳ್ಳುತ್ತಿವೆ.

ಮೊದಲನೆಯದಾಗಿ, ಹಲವು ಧ್ವನಿಗಳಿಗೆ ಅವಕಾಶವಿರಬೇಕು ಎಂಬ ಮಾತು ಚೀನಾ ದೇಶಕ್ಕೆ ಮಾತ್ರವಲ್ಲ, ಪ್ರತಿಯೊಂದು ಸಮಾಜಕ್ಕೂ, ರಾಜಕೀಯ ಸಮುದಾಯಕ್ಕೂ ಅನ್ವಯಿಸುತ್ತದೆ. ಉದಾಹರಣೆಗೆ, ನಮ್ಮ ಪ್ರಧಾನಿ ನರೇಂದ್ರ ಮೋದಿ ಅವರು, ನೋಟು ಅಮಾನ್ಯ ಕ್ರಮ ಅಥವಾ ರಾಷ್ಟ್ರವ್ಯಾಪಿ ಲಾಕ್ ಡೌನ್‌ನಂತಹ ಇನ್ನೊಂದು ವ್ಯಾಪಕವಾದ ಮತ್ತು ದೂರಗಾಮಿ ಪರಿಣಾಮ ಬೀರಬಲ್ಲಂಥ ಕ್ರಮಗಳನ್ನು ಘೋಷಿಸುವ ಮುಂಚೆ ಅವರು ತಮ್ಮ ಸಚಿವ ಸಂಪುಟದ ಸದಸ್ಯರ ಅಭಿಪ್ರಾಯಗಳನ್ನು ಕೇಳಬಹುದಿತ್ತು. ಇದು ಆರೋಗ್ಯಕರ ಮತ್ತು ವಿವೇಕಯುತ ಕ್ರಮವೆನಿಸಿಕೊಳ್ಳುತ್ತಿತ್ತಲ್ಲವೆ? ನಮ್ಮ ವೈವಿಧತೆಯೇ ಮುಖ್ಯ ಲಕ್ಷಣವಾಗಿರುವ ಈ ದೇಶದ ಮೇಲೆ ವ್ಯಾಪಕ ಪರಿಣಾಮ ಬೀರಬಲ್ಲಂಥ ವಿಚಾರಗಳಲ್ಲಿ ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ರಾಜ್ಯಗಳ ಮುಖ್ಯಮಂತ್ರಿಗಳ ಅಭಿಪ್ರಾಯಗಳನ್ನೂ ಸಹ ಕೇಳಿದ್ದೇ ಆದರೆ ಅದು ವಾಸ್ತವವಾಗಿ ಅವರಿಗೂ ಮತ್ತು ಭಾರತಕ್ಕೂ ಹೆಚ್ಚಿನ ಲಾಭವೆ ಆಗುತ್ತದೆ. ಕೋವಿಡ್-೧೯ ನಿಜಕ್ಕೂ ನಮ್ಮ ಮುಖ್ಯಮಂತ್ರಿಗಳು ಮತ್ತು ಜಿಲ್ಲಾಧಿಕಾರಿಗಳ ಪಾತ್ರಗಳು ಬೇರುಮಟ್ಟದಲ್ಲಿ ಎಷ್ಟು ಮುಖ್ಯ ಎಂದು ಮನವರಿಕೆ ಮಾಡಿಕೊಟ್ಟಿದೆ. ಡಾ. ಲೀ ಅವರು ಇದನ್ನು ಅರಿತಿರಲಿಲ್ಲದಿರಬಹುದು. ಆದರೆ ಅವರ ಜನವರಿ-೩೦ ರ ಹೇಳಿಕೆಯು ಖಂಡಿತ ಜಾಣ ಮತ್ತು ವಿವೇಕಯುತ ಕ್ರಮಗಳು ಅಥವಾ ಕ್ರಿಯೆಗಳು ದೂರದಲ್ಲಿ (ಕೇಂದ್ರದಿಂದ) ಹುಟ್ಟುವುದರ ಸೀಮಿತವಾದ ಶಕ್ತಿ-ಸಾಧ್ಯತೆಯನ್ನು ಬಟಾ ಬಯಲು ಮಾಡಿದೆ. ಚೀನಾ ಅಥವಾ ಭಾರತದಂತಹ ಬೃಹತ್ ರಾಜಕೀಯ ಸಮುದಾಯದಗಳನ್ನು ಕೇವಲ ಒಂದೋ ಎರಡೋ ವ್ಯಕ್ತಿಗಳಿಂದ ಸಮರ್ಥವಾಗಿ ನಿರ್ದೇಶಿಸಲ್ಪಡಲು ಸಾಧ್ಯವಿಲ್ಲ ಎನ್ನುವುದನ್ನು ನಾವು ಮನಗಾಣಬೇಕು.

ಎರಡನೆಯದಾಗಿ, ಮತ್ತು ಬಹುಶ: ಇನ್ನೂ ಬಹಳ ಮುಖ್ಯವಾಗಿ, ಡಾ.ಲೀ ಅವರ ಎಚ್ಚರಿಕೆಯು ಪ್ರತಿಯೊಬ್ಬ ಭಾರತೀಯನಿಗೂ ಅನ್ವಯಿಸುವಂತಿದೆ. ಇಲ್ಲಿ ಇತ್ತೀಚಿಗೆ ಅನಾವರಣಗೊಂಡ ಕೋವಿಡ್-೧೯ರಿಂದ ಹಿಡಿದು ದೇಶವ್ಯಾಪಿ ಲಾಕ್ ಡೌನ್ , ಅಸಹಾಯಕರಾದ ದೊಡ್ಡ ಸಂಖ್ಯೆಯ ಜನರ ವಲಸೆಯ ಸರಣಿಯು ಒಂದು ಸಮಾಜವಾಗಿ ನಾವೆಷ್ಟು ದುರ್ಬಲರು ಎಂಬುದನ್ನು ಬಹಿರಂಗಪಡಿಸಿದೆ. ಭಾರತದ ಕ್ರೂರ ವಾಸ್ತವವು ಮತ್ತೊಮ್ಮೆ ಅನಾವರಣಗೊಂಡಿದೆ. ಜನರ ಇಂತಹ ವಲಸೆ ಕೂಡ ಈ ದೇಶದ ಅಸಮಾನತೆ ಮತ್ತು ಶ್ರೇಣೀಕರಣದಂಥ ಅವಿವೇಕಿ

ವ್ಯವಸ್ಥೆಯನ್ನು ಮನಗಾಣುವಂತೆ ಮಾಡದಿದ್ದಲ್ಲಿ ಇನ್ನಾವುದು ಮಾಡೀತು?

ಡಾ.ಲೀ ಅವರ ಹೇಳಿಕೆ ಮತ್ತು ಅದರ ಸಂದರ್ಭವು ಒಂದು ಶತಮಾನದ ಹಿಂದೆ ಯುವಕ ಗಾಂಧಿ ಅವರ ಇಂಥದ್ದೇ ಪ್ರಯತ್ನಗಳು ನನ್ನ ಮನಸ್ಸನ್ನು ತುಂಬಿಕೊಳ್ಳುತ್ತಿವೆ. ೧೮೯೬ ರಲ್ಲಿ ರಾಜಕೋಟ್‌ನಲ್ಲಿ ಹಬ್ಬಿದ್ದ ಪ್ಲೇಗ್ ರೋಗದ ವಿರುದ್ಧ ೨೬ರ ಹರೆಯದ ಗಾಂಧಿ ಕೆಲಸ ಮಾಡುತ್ತಾ ಕಂಡುಕೊಂಡಿದ್ದೇನೆಂದರೆ ಆ ಪಟ್ಟಣದ ದಲಿತರು ತಮ್ಮ ಮನೆಗಳನ್ನು ಅಲ್ಲಿಯ ಮೇಲ್ಜಾತಿಯ ಜನರಿಗಿಂತ ಹೆಚ್ಚು ಸ್ವಚ್ಛವಾಗಿಟ್ಟುಕೊಂಡಿದ್ದರು ಎಂಬುದು. ಕೆಲ ವರ್ಷಗಳ ನಂತರ, ಅಂದರೆ ೧೯೦೪ರಲ್ಲಿ, ಗಾಂಧಿ ಮತ್ತು ಅವರ ಇಬ್ಬರು ದೇಶವಾಸಿಗಳು (ಮದನ್‌ಜಿತ್ ವ್ಯವಹಾರಿಕ್ ಮತ್ತು ವಿಲಿಯಂ ಗಾಡ್‌ಫ್ರೇ) ಜೋಹಾನ್ಸ್‌ಬರ್ಗ್ ಪಟ್ಟಣದ ಪಕ್ಕದ ಅತ್ಯಂತ ಜನದಟ್ಟಣೆಯ ವಸತಿ ಪ್ರದೇಶವಾದ ಬ್ರಿಕ್‌ಫೀಲ್ಡ್ಸ್‌ನಲ್ಲಿ ಹುಟ್ಟಿಕೊಂಡ ಪ್ಲೇಗ್ ರೋಗದ ವಿರುದ್ಧ ತಮ್ಮ ಧೀರ ಸೇವಾ ಕಾರ್ಯಗಳಿಂದಾಗಿ ಅನೇಕ ಭಾರತೀಯರ ಪ್ರಾಣವನ್ನು ಉಳಿಸಿದ್ದರು. ಬ್ರಿಕ್‌ಫೀಲ್ಡ್ಸ್‌ನಲ್ಲಿದ್ದ ಭಾರತೀಯರನ್ನು ಅವರ ಅಸುರಕ್ಷತೆಯ ಮತ್ತು ಅಸ್ವಚ್ಛತೆಯ ವಸತಿ ಪ್ರದೇಶವನ್ನು ತೆರವುಗೊಳಿಸಿ ಹೊಸ ಪ್ರದೇಶಕ್ಕೆ ಹೋಗಿ ಅಲ್ಲಿ ಗುಡಾರಗಳನ್ನು ಹಾಕಿ ವಸತಿ ಹೂಡುವುದಕ್ಕೆ ಮನವೊಲಿಸುತ್ತಾ 'ಸ್ವಚ್ಛತೆ ಮತ್ತು ಆರೋಗ್ಯಪೂರ್ಣ ನೈರ್ಮಲ್ಯತೆಯು ನಮ್ಮ ಅಸ್ತಿತ್ವದ ಭಾಗವಾಗಬೇಕು' ಎಂದು ಜನರಿಗೆ ಗಾಂಧಿ ಮನದಟ್ಟು ಮಾಡಿಸಿದ್ದರು. 'ಜನದಟ್ಟಣೆಯನ್ನು' ನಾವು ನಿವಾರಿಸಿಕೊಳ್ಳಬೇಕು ಮತ್ತು 'ಹೇರಳವಾಗಿ, ಸರಾಗವಾಗಿ ಗಾಳಿ ಮತ್ತು ಬೆಳಕು ನಮ್ಮ ವಸತಿ ಪ್ರದೇಶಗಳಲ್ಲಿ ಪಸರಿಸಲು ಆಸ್ಪದವಿರಬೇಕು' ಎಂದು ಹೇಳಿದ್ದರು.

ಗಾಂಧಿಗೆ ಆಗ ೩೪ರ ಹರಯ. ಅಂದರೆ ಡಾ.ಲೀ ಅವರು ಸತ್ತಾಗ ಆಗಿದ್ದ ವಯಸ್ಸು. ನಂತರದಲ್ಲಿ ಗಾಂಧಿ, ಭಾರತದ ಬಹು ದೊಡ್ಡ ದುರಂತವೆಂದು ೨೦೨೦ರ ಯಾವ ಕಾರ್ಮಿಕ ವಲಸೆಯನ್ನು ಅಲ್ಲಗಳೆಯಲಾಗದೋ ಅಂತಹ ಸಂಗತಿಯ ಬಗ್ಗೆ ಮತ್ತೆ ಮತ್ತೆ ಹೀಗೆ ಎಚ್ಚರಿಸುತ್ತಿದ್ದರು: "ಎಲ್ಲಿಯವರೆಗೆ ನಮ್ಮ ಆಳುವ ವರ್ಗ ಮತ್ತು ನಾಗರಿಕರು ಕೂಡಿ ಪರಸ್ಪರ ಕೈ ಜೋಡಿಸಿ ನಮ್ಮ ಗ್ರಾಮಾಂತರ ಮತ್ತು ಹೊರವಲಯಗಳ ಜೀವನೋಪಾಯಗಳನ್ನು ಮತ್ತು ಬದುಕನ್ನು ಸುಧಾರಿಸಿಕೊಳ್ಳುವುದಿಲ್ಲವೋ ಅಲ್ಲಿಯವರೆಗೂ ನಮ್ಮ ಭಾರತೀಯ ಸಮಾಜವು ರೋಗಪೀಡಿತವಾಗಿಯೇ ಉಳಿದಿರುತ್ತದೆ". ನಮ್ಮ ೧೩೫ ಕೋಟಿ ಭಾರತೀಯರು ಕೇವಲ ಒಂದು ಡಜನ್ ಬೃಹತ್ ಮಹಾನಗರಗಳಲ್ಲಿ ಮತ್ತು ಹೆಚ್ಚೂ ಕಡಿಮೆ ಒಂದು ನೂರರಷ್ಟು ಪಟ್ಟಣಗಳಲ್ಲಿ ಅಮಾನವೀಯವಾದಂತಹ ಪರಿಸ್ಥಿತಿಯಲ್ಲಿ ದಟ್ಟಣೆಗೊಂಡಿರುವ ಸಾಧ್ಯತೆಯನ್ನು ನೆನೆಸಿಕೊಳ್ಳುತ್ತಾ ನಮ್ಮ ಭವಿಷ್ಯದ ವೈರಾಣುಗಳು ಖಂಡಿತ ತಮ್ಮ ಬಾಯಿಯನ್ನು ಚಪ್ಪರಿಸಿಕೊಳ್ಳುತ್ತಿರುತ್ತದೆ.

ಅಂತಿಮವಾಗಿ, ಕೊರೋನಾ ಪಿಡುಗು ಜಗತ್ತಿನಾದ್ಯಂತ ಹಬ್ಬಿದ್ದಕ್ಕೆ ಚೀನಾ ಹೊರಬೇಕಾದ ದೊಡ್ಡ ಜವಾಬ್ದಾರಿಯ ಹೊರತಾಗಿ, ಭಾರತ ಮತ್ತು ಚೀನಾ ಗಡಿ ಪ್ರದೇಶದಲ್ಲಿ ಹುಟ್ಟಿಕೊಂಡಿರುವಂಥ ಉದ್ವಿಗ್ನ ಸ್ಥಿತಿಯಾಗಲಿ, ಅಥವಾ ಚೀನಾದಲ್ಲಿ ಪ್ರಜಾಸತ್ತಾತ್ಮಕ ನಡತೆಗಳ ಕೊರತೆಯ ಹೊರತಾಗಿಯೂ ನಾವು ಚೀನಾ ದೇಶದ ನಾಗರಿಕರನ್ನು ನಮ್ಮ ಹೃದಯಾಂತರಾಳದಿಂದ, ವೈಯಕ್ತಿಕವಾಗಿ ದೂಷಿಸವುದು ಸರಿಯಲ್ಲ.

ಗಾಂಧಿ ಪುನರುಚ್ಚರಿಸುವುದನ್ನು ಎಂದೂ ನಿಲ್ಲಿಸದೆ ಇದ್ದ ಮತ್ತು ಡಾ.ಲೀ ಅವರ ಹೇಳಿಕೆಯೂ ಕೂಡ ಅದರ ಸುಳಿವನ್ನು ಕೊಟ್ಟಿದ್ದ 'ಪಾಪವನ್ನು ದ್ವೇಷಿಸು, ಅದನ್ನು ಎಸಗಿದವನನ್ನಲ್ಲ–ಪಾಪಿಯನ್ನಲ್ಲ. ಅಥವಾ ಎಸಗಿದವನ ಜನರನ್ನಲ್ಲ. ಒಬ್ಬ ವ್ಯಕಿಯು ಹೇಳುತ್ತಿರುವುದನ್ನು ನೀನು ಒಪ್ಪದೇ ಇರಬಹುದು. ಅವನು/ಅವಳು ಮಾಡುತ್ತಿರುವುದನ್ನು ನೀನು ಇಷ್ಟಪಡದೆ ಇರಬಹುದು. ಆದರೆ ಅವರು ಸೇರಿದ ಜನಾಂಗವನ್ನಾಗಲಿ, ಧರ್ಮವನ್ನಾಗಲೀ ಅಥವಾ ಅವರ ಸ್ಥಳೀಯ ಸಂಸ್ಕೃತಿಯನ್ನಾಗಲೀ ದೂಷಿಸುವುದು, ತಿರಸ್ಕರಿಸುವುದು, ತೃಣೀಕರಿಸುವುದನ್ನು ನೀನು ಮಾಡದಂತಿರಲಿ" ಎಂಬ ಸತ್ಯವನ್ನು ಕೋವಿಡ್–೧೯ ಪಿಡುಗು ಮತ್ತೆ ನಮಗೆ ದೃಢಪಡಿಸುತ್ತಿರುವಂತಿದೆ.

ಪ್ರಪಂಚದ ಯಾವುದೇ ವ್ಯಕ್ತಿಯೂ ಕೋವಿಡ್–೧೯ ಸೋಂಕಿಗೆ ಬಲಿಯಾಗುವ ದುರ್ಬಲತೆಯನ್ನು ಸಾರಿ ತೋರಿಸುತ್ತಿರುವ ಮೂಲಕ ಕೊರೋನಾ ವೈರಾಣು ಯಾವುದೋ ಒಂದು ಚರ್ಮದ ಬಣ್ಣದವರನ್ನೋ, ರಕ್ತದ ಗುಂಪಿನವರನ್ನೋ ಅಥವಾ ಧರ್ಮದ ಜನರನ್ನೋ ದೂಷಿಸುವ, ಆಪಾದಿತರನ್ನಾಗಿ ಕಲ್ಪಿಸುವ ಮನುಷ್ಯನ ಸಣ್ಣತನವನ್ನು ಬಟ್ಟಬಯಲು ಮಾಡಿದೆ. ಆದರೂ, ಯಾರಿಗೆ ಗೊತ್ತು? ನಾವು ನಮ್ಮದೇ ಆದ ಪೂರ್ವಾಗ್ರಹಗಳ ಮಂಪರಿನ ಆಲಿಂಗನದಲ್ಲೇ ಇದ್ದರೆ, ಪಟ್ಟುಬಿಡದೆ ಬಲಿ ತೆಗೆದುಕೊಳ್ಳಬಹುದಾದ ಕೋವಿಡ್–೧೯ ಮಾರಿಯ ಜೊತೆಯಲ್ಲಿಯೇ ಮಲಗಿ ಸಾಕಷ್ಟು ಬೆಲೆ ತೆತ್ತು, ಕೊನೆಗೆ ಈ ಕಾಯಿಲೆಯ ಮುಂದೆ ಮನುಷ್ಯರೆಲ್ಲರೂ ಸಮಾನರು ಎಂಬ ಸಮಾಧಾನದ ಹುಸಿ ತಿಳುವಳಿಕೆಯೊಂದಿಗೆ ಎದ್ದೇಳಬಹುದು.

ಕೋವಿಡ್ ಆಕ್ರಮಣದ ಈ ಕಾಲದಲ್ಲಿ ಮತ್ತು ಮುಂಚೆಯೂ ಚೀನಿಯರ ರೀತಿ ಕಾಣುವಂತಿರುವ ಅನೇಕ ಭಾರತೀಯ ನಿವಾಸಿಗಳು ತಾರತಮ್ಯವನ್ನೋ, ನಿಂದನೆಯನ್ನೋ, ದೈಹಿಕ ಹಲ್ಲೆಯನ್ನೋ ಎದುರಿಸಿದ್ದಾರ –ಅಸ್ಸಾಮಿಗಳು, ಖಾಸಿಘಳು, ಮೆಟಿಸ್, ಮೀಜೋ, ನಾಗ, ನೇಪಾಳಿ, ಟಿಬೆಟರು–ಹೀಗೆ. ಚೀನಿಯರ ವಿರುದ್ಧವೋ ಅಥವಾ ಅವರಂತೆ ಕಾಣುವ ಇನ್ನಿತರೇ ಜನರ ವಿರುದ್ಧ ಯಾವುದೇ ದುಷ್ಟ ನಡೆಯನ್ನು, ಅದು ಬಹಿರಂಗವಾದದ್ದಿರಲಿ ಅಥವಾ ಸೂಕ್ಷ್ಮವಾಗಿರಲಿ, ಹರಿಯಬಿಟ್ಟಲ್ಲಿ ಅದನ್ನು ಕೊನೆ ಪಕ್ಷ ಕೆಲವಾದರೂ ಭಾರತೀಯರು ದೃಢನಿಶ್ಚಯದಿಂದ ವಿರೋಧಿಸುತ್ತಾರೆಂದು ನಂಬುತ್ತೇನೆ.

ಅಪಾಯದ ಶಕುನದಂತಿರುವ ಕೋವಿಡ್ ನಮ್ಮ ಮೌಢ್ಯತೆ, ಹುಸಿತನ ಮತ್ತು ಪೂರ್ವಾಗ್ರಹಗಳನ್ನು ಬಹಿರಂಗಪಡಿಸುವ ಸತ್ಯದ ಮಿಂಚೂ ಕೂಡ ಆಗಿದೆ.

**(ಮಹಾತ್ಮ ಗಾಂಧಿ ಅವರ ಮೊಮ್ಮಕ್ಕಳಲ್ಲಿ ಒಬ್ಬರಾದ ರಾಜ್‌ಮೋಹನ್ ಗಾಂಧಿ ಅಮೆರಿಕಾದ ಇಲ್ಲಿನಾಯ್ಸ್ ವಿಶ್ವವಿದ್ಯಾಲಯದಲ್ಲಿ ದ.ಏಷ್ಯಾ ಮತ್ತು ಮಧ್ಯ ಪೌರ್ವಾತ್ಯ ಅಧ್ಯಯನ ಕೇಂದ್ರದಲ್ಲಿ ಸಂಶೋಧನಾ ಪ್ರಾಧ್ಯಾಪಕರೂ ಹಲವು ಪುಸ್ತಕಗಳ ಲೇಖಕರೂ ಆಗಿದ್ದಾರೆ.)**



(ಕೃಪೆ: ***ದ ಇಂಡಿಯನ್ ಎಕ್ಸ್‌ಪ್ರೆಸ್***, ಜೂನ್ ೬, ೨೦೨೦
**ಕನ್ನಡಕ್ಕೆ : ಬಿ.ವಿ. ಸುರೇಂದ್ರ)**

---

**೫ನೇ ಪುಟದಿಂದ)**

ಅಪರಾಧೀಕರಣಗೊಳಿಸಿದಾಗ–ದಂಡನಾರ್ಹವಾಗಿಸಿದಾಗ–ಇದು ಸರ್ವಾಧಿಕಾರ–ಡಿಜಿಟಲ್ ನಿರಂಕುಶಾಧಿಕಾರ ಎಂದೇ ಭಾವಿಸುತ್ತೇನೆ. ಒಂದು ನೂರು ರೂಪಾಯಿ ನಗದು ಡಿಜಿಕಟಲೀಕರಣದ ಮೂಲಕ ಹತ್ತುಬಾರಿ ಜನರ ಮಧ್ಯೆ ವಿನಿಮಯವಾದಾಗ ಯಾರಿಗೆ ಎಷ್ಟು ಡಿಜಿಟಲೀಕರಣ ಶುಲ್ಕ ಅರ್ಥಾತ್ ಕಮೀಷನ್ ಹಣ ಸಂದಾಯವಾಗುತ್ತದೆ ಎಂಬುದು ನಿಮಗೆ ಗೊತ್ತೆ? ಬಿಲ್ ಗೇಟ್ಸ್ ಮತ್ತು ಝುಕರ್‌ಬರ್ಗ್‌ರಂಥವರ ಮತ್ತು ಅವರ ದಲ್ಲಾಳಿಗಳ ನಿಗೂಢ ಸಾಮ್ರಾಜ್ಯವಿದು. ಸೌರಶಕ್ತಿಯ ವಿಕೇಂದ್ರೀಕರಣ ವಿರೋಧಿಸುವ ಬಿಲ್ ಗೇಟ್ಸ್, ಪೃಥ್ವಿಯ ಜೀವ ಸಂಪನ್ಮೂಲಗಳ ಸಂಪೂರ್ಣ ಒಡೆತನಕ್ಕಾಗಿ ಗುರಿ ಇಟ್ಟಿದ್ದಾನೆ. ಅವನು ಅಪಾರ ಹಣದೊಡೆಯ ಎಂದು ಅಂಜಬೇಕಿಲ್ಲ.ಸೃಷ್ಟಿ ವಿಕಾಸದ ಹಾದಿಯಲ್ಲಿ ಅವನೊಬ್ಬ ನಗಣ್ಯ. ಯಾವ ಗಿಡ ಬೆಳೆಯಲು ಅವನ ಅನುಮತಿ ಕೇಳಬೇಕಿಲ್ಲ.

ನಾನೀಗ ಭಾರತದಲ್ಲಷ್ಟೇ ಅಲ್ಲ, ಆಫ್ರಿಕಾ ಹಾಗೂ ವಿಶ್ವದೆಲ್ಲೆಡೆ ಎಚ್ಚರಿಕೆಯಿಂದ ಗಮನಿಸಿದಾಗ ಮತ್ತು ನಮಗೀಗ ಲಭ್ಯವಿರುವ ಹಲವಾರು ಮಾಹಿತಿಗಳು ಸೂಚಿಸುವಂತೆ ದೇಶಿ ತಳಿಗಳು ಹೆಚ್ಚು ಪೌಷ್ಟಿಕಾಂಶ ಹೊಂದಿವೆ, ಅಧಿಕ ಆಹಾರ ಉತ್ಪಾದಿಸುತ್ತವೆ. ರಾಸಾಯನಿಕಗಳ ಉಪಯೋಗವಿಲ್ಲದಿರುವುದರಿಂದ ಹೆಚ್ಚುವರಿ ವೆಚ್ಚಗಳಿಲ್ಲ ಎಂಬುದು ಗೊತ್ತಾಗುತ್ತಿದೆ. ಸ್ಥಳೀಯ ಜೀವ ವೈವಿಧ್ಯತೆಯೇ ಜಗತ್ತಿಗೆ ಆಹಾರ ನೀಡುವ ಸರಿಯಾದ ಹಾದಿ ಎಂಬುದಕ್ಕೆ ವಿಶ್ವ ಸಂಸ್ಥೆ, ವಿಶ್ವ ಆಹಾರ ಸಂಸ್ಥೆ, ವಿಶ್ವ ಸಂಸ್ಥೆಯ ಮಾರಾಟ ಮತ್ತು ಅಭಿವೃದ್ಧಿಯ ವಿಶ್ವ ರಾಷ್ಟ್ರಗಳ ಸಮ್ಮೇಳನ) ಇವೆಲ್ಲೆಡೆಗೂ ಪುರಾವೆ ಇದ್ದಾಗ್ಯೂ ಬಿಲ್ ಗೇಟ್ಸ್ ಬಲವಂತವಾಗಿ ಜೈವಿಕವಾಗಿ ಮಾರ್ಪಾಡುಗೊಂಡ ಜೀವಿಗಳು)ಗಳನ್ನು ಹೇರುತ್ತಿದ್ದಾನೆ. ಸಂಪೂರ್ಣ ವಿಫಲಗೊಂಡ ಉದ್ಯಮದ ಪುನರುಜ್ಜೀವನಕ್ಕಾಗಿ ತನ್ನೆಲ್ಲಾ ಸಾಮರ್ಥ್ಯ ಬಳಸುತ್ತಿದ್ದಾನೆ.. ನನ್ನ ಸರ್ಕಾರ ಮಾನ್ಸಾಂಟೋ ಬಿಟಿ ಬದನೆಯನ್ನು ದೇಶದಿಂದ ಹೊರಹಾಕಿತು. ಬಿಲ್ ಗೇಟ್ಸ್ ಇದನ್ನೇ ಬಾಂಗ್ಲಾದೇಶದಲ್ಲಿ ಪುನರುತ್ಥಾನಗೊಳಿಸಿದ. ಕುರುಡುತನದ ಸಮಸ್ಯೆ ನಿವಾರಿಸಲು *ಗೋಲ್ಡನ್ ರೈಸ್* ಬಳಸುವುದನ್ನು ನಾವು ತಿರಸ್ಕರಿಸಿದೆವು. ಆದರೆ ಫಿಲಿಪೈನ್ಸ್ ದೇಶದ ಮೂಲಕ ಅದರ ಬಳಕೆಯನ್ನು ಉತ್ತೇಜಿಸಲು ಬಿಲ್ ಗೇಟ್ಸ್ ಹಣಕಾಸು ನೆರವು ನೀಡುತ್ತಾನೆ. ಆತ 'ಜೀವ ಸೃಷ್ಟಿ'ಯನ್ನು ಎಲ್ಲಿಯೋ ಕತ್ತರಿಸಿ, ಎಲ್ಲಿಯೋ ಅಂಟಿಸಲು ಸಾಧ್ಯವಿರುವ. ತಂತ್ರಾಂಶ ನಿರ್ವಹಣೆಯ ಒಂದು ಕಾರ್ಯಕ್ರಮ ಎಂದುಕೊಂಡಿದ್ದಾನೆ. ಆದರೆ ಅದೊಂದು ಅಚ್ಚರಿ ಹುಟ್ಟಿಸುವ ಸ್ವಯಂ ಸಂಘಟನೆಯ ಸಂಕೀರ್ಣಕ್ರಿಯೆ. ಆದರೆ ಎಲ್ಲ ಹೊಸ ವಿಜ್ಞಾನ ಶಾಖೆಗಳು ನೀಡುತ್ತಿರುವ ಅರಿವನ್ನು ನಿರ್ಲಕ್ಷಿಸಿ ಈತ ನಮ್ಮ ಭೂಗ್ರಹಕ್ಕೆ ಬಲು ದೊಡ್ಡ ಅಪಾಯ ತಂದೊಡಗಡಿದ್ದಾನೆ.. ಇದೆಲ್ಲವೂ ಆತನ ಏಕಸ್ವಾಮ್ಯಕ್ಕಾಗಿ ಮತ್ತು ಜನ ಹಾಗೂ ರೈತರು ಮುಕ್ತವಾಗಿ ದೇಸೀ ಬಿತ್ತನೆ ಬೀಜಗಳನ್ನು ಹೊಂದಬಾರದು ಎನ್ನುವುದಕ್ಕಾಗಿ. .ನಮ್ಮ ಶಿಕ್ಷಣ, ಜೀವನೋಪಾಯ, ಆರ್ಥಿಕತೆ, ಪ್ರಜಾಪ್ರಭುತ್ವದ ಸ್ವರೂಪ ಬದಲಾಗಬೇಕು. ಈ ದಿಸೆಯಲ್ಲಿ ನಾವು Earth University ಸ್ಥಾಪಿಸಿದ್ದೇವೆ.

ಸಂದರ್ಶಕ : ನಿಮ್ಮ ವಾದಗಳು ಪ್ರಬಲವಾಗಿವೆ, ಅವುಗಳನ್ನು ನಮ್ಮೊಂದಿಗೆ ಹಂಚಿಕೊಂಡಿದ್ದಕ್ಕಾಗಿ ನಿಮಗೆ ಧನ್ಯವಾದಗಳು.

(ಯೂ–ಟ್ಯೂಬ್‌ನಿಂದ ಕನ್ನಡಕ್ಕೆ ಲಿಪ್ಯಂತರ: **ಬಿ.ಎಸ್. ದಿವಾಕರ)**

**ಒಂದು ವ್ಯಕ್ತಿ ಚಿತ್ರ**

# ಗೋಕರ್ಣದ "ಕೋಣೆ ಅಣ್ಣ"

–ಜಯಂತ ಕಾಯ್ಕಿಣಿ

**ತಮ್ಮ ಬಹುಮುಖ ಆಸಕ್ತಿಗಳ ಮೂಲಕ ಗೋಕರ್ಣಕ್ಕೆ ಒಂದು ವೈವಿಧ್ಯಮಯ ಸಾಂಸ್ಕೃತಿಕ ಭಿತ್ತಿ ಒದಗಿಸಿದ ಕೋಣೆ ಅಣ್ಣ ಎಂದೇ ಪ್ರಸಿದ್ಧರಾಗಿದ್ದ ವೇದೇಶ್ವರರೆಂಬ ಅಪರೂಪದ ವ್ಯಕ್ತಿತ್ವದ ಜೀವಂತ ನೆನಪಿನ ಚಿತ್ರವೊಂದು ಇಲ್ಲಿದೆ–ಸಂ.**



**ಯಾ**ವಾಗಲೂ ತಮ್ಮ ಸಪೂರ ಅಂಗಸೌಷ್ಟವವನ್ನು ಮಡಿಸಿ ನೆಲದ ಮೇಲೆ ಕೂತುಕೊಂಡು ನೀಳ ಕೈಗಳಿಂದ ಪುಸ್ತಕಗಳಿಗೆ ಬುಕ್ ಬೈಂಡ್ ಮಾಡುತ್ತ ಅಥವ ಹೊಲಿಗೆ ಹಾಕುತ್ತ ಕೂತಿರುತ್ತಿದ್ದ, ಬೆರಗಿನ ಕಂಗಳ ಈ ವ್ಯಕ್ತಿಯನ್ನು ಗೋಕರ್ಣದಲ್ಲಿ ಎಲ್ಲರೂ 'ಕೋಣೆ ಅಣ್ಣ' ಅಂತಲೇ ಕರೆಯುತ್ತಿದ್ದರು. ಇದಕ್ಕೆ ಕಾರಣ, ಅವರು ಯಾವಾಗಲೂ ಪುಸ್ತಕದ ಕೋಣೆಯಲ್ಲೇ ಇರುತ್ತಿದ್ದರು. ಬಲುಹಿಂದಿನಿಂದ ಅಂದರೆ ೧೯೪೫ರ ಕಾಲದಿಂದ ಗೋಕರ್ಣದ ರಥಬೀದಿಯ ಬಸ್‌ಸ್ಟ್ಯಾಂಡಿನ ಎದುರಿನ ಕಾವಿಕಲೆಯ ಆಕರ್ಷಕ 'ಕಲಶದ ಮನೆ'ಯ ಮೊದಲ ಅಟ್ಟದಲ್ಲಿ 'ಕರ್ನಾಟಕ ಸಂಘ' ಎಂಬ ಹೆಸರಿನ ಸಾರ್ವಜನಿಕ ಗ್ರಂಥಾಲಯವನ್ನು ತಾವೇ ರೂಪಿಸಿ ಸಂಗೋಪಿಸಿ ನಡೆಸಿಕೊಂಡು ಬಂದ 'ಕೋಣೆ ಅಣ್ಣ'ನ ಹೆಸರು ಜಿ.ಎಂ. ವೇದೇಶ್ವರ. ಆ ಕಟ್ಟಡ 'ಕಲಶದ ಮನೆ' ಏಕೆಂದರೆ, ವಾರ್ಷಿಕ 'ಬಂಡೀಹಬ್ಬ'ದ ಕಲಶದ ಪೂಜೆ ಅಲ್ಲಿಯೇ ಆಗುತ್ತದೆ. ಮತ್ತು ಅದಕ್ಕೆ ಸಂಬಂಧಿತ ಸರಂಜಾಮುಗಳನ್ನು ಅಲ್ಲೇ ಇಡಲಾಗುತ್ತದೆ. ಈ ಜಾಗವನ್ನೇ ಜ್ಞಾನಾರ್ಜನೆಯ ಆವರಣವನ್ನಾಗಿಯೂ ಸದ್ದಿಲ್ಲದೆ ರೂಪಿಸಿದ 'ಕೋಣೆ ಅಣ್ಣ'ನ ಸಂವೇದನೆಯೇ ಇಪ್ಪತ್ತನೇ ಶತಮಾನದ ಪರಿವರ್ತನಶೀಲ ಸಮಾಜದ ಕಾಲಕೋಶದಂತಿದೆ. ಪ್ರಜೆಯಾಗಿ, ನಾಗರಿಕನಾಗಿ ವಿಕಾಸಗೊಳ್ಳಲು ಬೇಕಾದ ಎಲ್ಲ ಸಂಗತಿಗಳಲ್ಲೂ ಆಸಕ್ತಿಯುಳ್ಳ ಮನಸ್ಸುಗಳ ಸಂಗಮತಾಣವನ್ನಾಗಿ ವೇದೇಶ್ವರರು ಕಲಶದ ಮನೆಯಲ್ಲಿ ಪುಸ್ತಕಗಳನ್ನು ಪ್ರತಿಷ್ಠಾಪಿಸಿದರು. ತರುಣರಿಂದ ಸಂಸ್ಕೃತ, ಕನ್ನಡ, ಮರಾಠಿ ನಾಟಕಗಳನ್ನು ಆಡಿಸಿದರು.

ಸ್ವತಃ ಕುಶಲ ಕಲೆಗಾರರೂ ಆಗಿದ್ದ ವೇದೇಶ್ವರ, ಗೋಕರ್ಣದ ಹವ್ಯಾಸಿ ನಾಟಕಗಳಿಗೆ ಪರದೆಗಳನ್ನು, ಸೀನರಿಗಳನ್ನು ವೇಷಭೂಷಣಗಳನ್ನು ತಾವೇ ಊರಲ್ಲಿ ಲಭ್ಯವಿದ್ದ ವಸ್ತುಗಳಿಂದಲೇ ತಯಾರಿಸುತ್ತಿದ್ದರು. ಪೌರಾಣಿಕ ನಾಟಕಗಳಿಗೆ ಬೇಕಾದ ಎಲ್ಲ ಕಿರೀಟ, ಆಭರಣ ಮಾಡುತ್ತಿದ್ದರು. ಸಾಮಾನ್ಯವಾಗಿ ಗೋಕರ್ಣ ಶಿವರಾತ್ರಿ ಜಾತ್ರೆಯಲ್ಲಿ ಹೊರಗಿಂದ ಬರುವ ನಾಟಕ ಕಂಪನಿಗಳೇ ಕ್ಯಾಂಪು ಹೂಡುತ್ತಿದ್ದವು. ಚಿತ್ತರಗಿ, ಏಣಗಿ ಬಾಳಪ್ಪ, ಇತ್ಯಾದಿ. ಊರಲ್ಲಿ ಎಷ್ಟೊಂದು ಹವ್ಯಾಸಿಗಳು ಇರುವಾಗ ತಾವೇ ಯಾಕೆ ಜಾತ್ರೆಯಲ್ಲಿ ದೊಡ್ಡಗಾತ್ರದಲ್ಲಿ ನಾಟಕಗಳನ್ನು ತಿಕೇಟಿಟ್ಟು ಆಡಬಾರದು ಎಂಬ ಸದ್ವಿಚಾರ ಬಂದ ವೇದೇಶ್ವರರು, ಊರಿನ ಸುಬ್ರಾಯ ಜೋಶಿ ಮುಂತಾದ ಉಮೇದುವಾರರನ್ನು ಸೇರಿಸಿ "ನವೀನ ನಾಟ್ಯನಿಕೇತನ"(ನನಾನಿ) ಎಂಬ ಸಂಘ ಕಟ್ಟಿ ಒಂದು ಶಿವರಾತ್ರಿಗೆ ನಾಟಕಗಳನ್ನು ಆಡಿಯೇ ಬಿಟ್ಟರು. ಅದಕ್ಕಾಗಿ ದಿನರಾತ್ರಿ ನಿದ್ದೆಗೆಟ್ಟು ಅವರು ಮಾಡಿದ ಸೀನರಿಗಳು ಜನಮನವನ್ನು ರಂಜಿಸಿದರೂ ತಂಡಕ್ಕೆ 'ಲಾಸ್' ಆಯಿತು. ಗೋಕರ್ಣ ಸೀಮೆಯ ಯಾವುದೇ ಹವ್ಯಾಸಿ ನಾಟಕಗಳಿಗೆ ಕಾಸ್ಟ್ಯೂಮ್ಸ್ ಒದಗಿಸುತ್ತಿದ್ದರು. ಸಮೀಪದ ಅಶೋಕೆಗುಡ್ಡೆಯ ಕಾಡಿನಿಂದ ಗೀಜಗದ ಗೂಡುಗಳನ್ನು ತಂದು ಅದರಿಂದಲೇ ವಾಲ್ಮೀಕಿ ವಿಶ್ವಾಮಿತ್ರ ವಸಿಷ್ಠರಿಗೆ ಧರಿಸಲು ಸುಂದರವಾದ ಗಡ್ಡವನ್ನು ಮಾಡುತ್ತಿದ್ದರು.

ಇಂಥ ಕೆಲಸದಲ್ಲಿ ನಿರತರಾಗಿದ್ದಾಗ ಕೋಣೆ ಅಣ್ಣ ತಪಸ್ಸಿನಲ್ಲಿದ್ದವರಂತೆ ಭಾಸವಾಗುತ್ತಿದ್ದರು. ಬೇರೆ ಬೇರೆ ಸೈಜಿನ ಅವರೇ ಮಾಡಿಕೊಂಡ ಹತಾರುಗಳಿದ್ದವು. ಬಣ್ಣದ ಕಾಗದಗಳನ್ನು, ಬುಕ್ ಬೈಂಡಿನ ಕಾಗದಗಳನ್ನು ಕತ್ತರಿ ಹಿಡಿದು ಕತ್ತರಿಸುವ ಅವರ ನೀಳ ಕೈಬೆರಳುಗಳ ಕಲಾತ್ಮಕ ಚಲನೆ ನೋಡುವುದೇ ಚಂದ. ಬೆರಳುಗಳೇ ಕತ್ತರಿಯಾದಂತೆ ತೋರುತ್ತಿದ್ದವು. ಒಂದು ಚೂರು ಕಾಗದವನ್ನೂ, ಬಟ್ಟೆಯನ್ನೂ ಹಾಳುಮಾಡದಂತೆ ಅವರು ಬಳಸುತ್ತಿದ್ದರು. ಇದರಿಂದ ಉಳಿದದ್ದು ಮತ್ತೆಲ್ಲೋ ಬಳಕೆಗೆ ಬರುವಂತೆ ಮಾಡುತ್ತಿದ್ದರು. ಎಲ್ಲಿಯೂ ಬಳಕೆಯಾಗದ ಅತಿ ಚಿಕ್ಕ ಚೂರುಗಳನ್ನು ಧ್ವಜವಂದನೆಯ ದಿನ ಧ್ವಜದಿಂದ ಉದುರಿಸಲೆಂದು ಕಾದಿರಿಸುತ್ತಿದ್ದರು. ಮೈದಾಹಿಟ್ಟಿನಲ್ಲಿ ಮೈಲುತುತ್ತು ಬೆರೆಸಿ ಗೋಂದು ಮಾಡಿ ಬಳಸಿದರೆ ಪುಸ್ತಕಗಳಿಗೆ ಕೀಟಗಳ ಕಾಟ ಕಡಿಮೆ ಅಂತಿದ್ದರು. ನಾವೆಲ್ಲ ಮನೆಯಲ್ಲಿ ಗಾಳಿಪಟ, ಆಕಾಶಬುಟ್ಟಿ ಮಾಡಲು ಅವರಿಂದ ಗೋಂದು ತರುತ್ತಿದ್ದೆವು. "ಋಷಿ ಮುನಿಗಳು ತಪಸ್ಸು ಮಾಡುತ್ತಿದ್ದುದ್ದು ರಂಭೆ, ಮೇನಕೆಯರು ಬಂದು ತಪೋಭಂಗ ಮಾಡಲಿ ಹೇಳಿಯಾ"– ಎಂದು ಕವಳದ ಬಾಯಲ್ಲಿ ಮೇಲ್ಮುಖ ಮಾಡಿ, ಘಂಟಾನಾದದಂತಿದ್ದ ತಮ್ಮ ದನಿಯಲ್ಲಿ ಹೇಳುತ್ತಿದ್ದರು.

ಜುಮ್ಮಿನ ಕಾಳಿನ ಗಿಡದ ದಪ್ಪ ತೊಗಟೆಯ ದಪ್ಪ ಮುಳ್ಳುಗಳನ್ನು ಆರಿಸಿ ತಂದು ಅದರಲ್ಲಿ ಅವರು ಕೆತ್ತಿ ಸುಂದರ ಮುದ್ರಿಕೆ, ಮೊಹರುಗಳನ್ನು ಮಾಡುತ್ತಿದ್ದರು. ಕೆತ್ತಲು ಮೃದುವಾದ ಮರ ಅದು. ಕಲಶದ ಮನೆಯ ಅಟ್ಟದಲ್ಲಿ ನಾನಾ ಕಪಾಟುಗಳಲ್ಲಿ ವ್ಯವಸ್ಥಿತವಾಗಿ ಜೋಡಿಸಿದ ಪುಸ್ತಕಗಳನ್ನು ಅವರು ಎಲ್ಲೆಲ್ಲಿಂದ ಅದೆಂತು ಸಂಗ್ರಹಿಸಿದರು ಎಂಬುದೇ ಒಂದು ಚೋದ್ಯ. ಇದು ಸಾರ್ವಜನಿಕರಿಗಾಗಿಯೇ ಇದ್ದ ಸಂಗ್ರಹವಾದರೆ, ಗಣಪತಿ ದೇವಸ್ಥಾನದ ಪಕ್ಕ ಇರುವ ಅವರ ಮನೆಯ ಅಟ್ಟದ ಕೋಣೆಯಲ್ಲೂ ಹಲವಾರು ಕಪಾಟುಗಳಲ್ಲಿ ಅವರ ವಿಶೇಷ ಸಂಗ್ರಹವಿತ್ತು. ಅಲ್ಲಿ ಅವರ ಆಪ್ತರಿಗಷ್ಟೆ ಅವಕಾಶವಿತ್ತು. ಅದನ್ನವರು 'ಸ್ಟಡಿ ಸರ್ಕಲ್' ಎಂದು ಕರೆಯುತ್ತಿದ್ದರು. ಪ್ರಪಂಚದ ಎಷ್ಟೆಲ್ಲ ಭಾಷೆಯ ಪುಸ್ತಕಗಳು ಅಲ್ಲಿದ್ದವು. ನಮ್ಮ ಜಿಲ್ಲೆಯ ಜ್ಞಾನಪಿಪಾಸುಗಳಿಗೆ ಇದೊಂದು ಅರವಟ್ಟಿಗೆಯಂತಿತ್ತು. ನನ್ನ ತಂದೆ ಗೌರೀಶರು ನಂತರ ಇದಕ್ಕೆ 'ವ್ಯಾಸಂಗ ಗೋಷ್ಠಿ' ಎಂದು ನಾಮಕರಣ ಮಾಡಿದರು. ಅತ್ಯಂತ ಪ್ರಾಚೀನ, ದೇವನಾಗರಿಯ ನಾಲ್ಕುಸಾವಿರಕ್ಕೂ ಹೆಚ್ಚು ಗ್ರಂಥಗಳು, ಆರುನೂರು ವರುಷಕ್ಕೂ ಹಿಂದಿನ ನೂರಾರು ತಾಡೋಲೆ ಗ್ರಂಥಗಳು, ೧೭೫ ವರುಷಗಳ ಹಿಂದೆ ಮುಂಬಯಿ ಸರ್ಕಾರ ಪ್ರಕಟಿಸಿದ್ದ ಪಠ್ಯಪುಸ್ತಕಗಳು, ಹಳೆಗನ್ನಡ ಹೊಸಗನ್ನಡ ಗ್ರಂಥಗಳು ಅಲ್ಲಿದ್ದವು. ಗೌರೀಶರ ಹೆಚ್ಚಿನ ವ್ಯಾಸಂಗಕ್ಕೆ ಒದಗಿ ಬಂದಿದ್ದು ಇಲ್ಲಿಯ ಪುಸ್ತಕಗಳೇ. ವೇದೇಶ್ವರರು, ಪುರೋಗಾಮಿ ಪಂಡಿತ, ಲಿಬರಲ್ ಋಷಿ ಎಂದೇ ಖ್ಯಾತರಾಗಿದ್ದ ದೈವರಾತರ ಮಗಳು ಶಚಿದೇವಿಯನ್ನು ಮದುವೆಯಾಗಿದ್ದರು. ಹೀಗಾಗಿ ದೈವರಾತರ ಸಂಗ್ರಹದ ಪುಸ್ತಕಗಳೂ ಅಳಿಯನ ಸುಪರ್ದಿಯಲ್ಲೇ ಇದ್ದವು. ಸುಮಾರು ೩೮ ಭಾಷೆಯ ಪುಸ್ತಕಗಳು ಅವರ ಒಟ್ಟಾರೆ ಸಂಗ್ರಹದಲ್ಲಿದ್ದುವು.

ರಥಬೀದಿಯಲ್ಲಿಯ ಮುಖ್ಯ ಗ್ರಂಥಾಲಯದಲ್ಲಿ ಪತ್ರಿಕೆ, ನಿಯತ–ಅನಿಯತಕಾಲಿಕಗಳಿಗಾಗಿಯೇ ಒಂದು ವಿಭಾಗ ಇತ್ತು. ಹೊಸ, ಇತ್ತೀಚಿನ ಆಯಾ ಸಂಚಿಕೆಗಳನ್ನು ವಿಶಾಲವಾದ ಮೇಜಿನ ಮೇಲೆ ಅಚ್ಚುಕಟ್ಟಾಗಿ ಇಟ್ಟಿರುತ್ತಿದ್ದರು. ಅವುಗಳ ಪುಟಗಳು ಗಾಳಿಗೆ ಹಾರದಂತೆ ನಾನಾ ಆಕಾರದ ಆಕರ್ಷಕ ಬೆಣಚುಕಲ್ಲುಗಳನ್ನು ಇಟ್ಟಿರುತ್ತಿದ್ದರು. ಸಮುದ್ರ, ನದಿ ತೀರಗಳಿಂದ ಅವರು ಆಯ್ದುತಂದ ಆ ಕಲ್ಲುಗಳ ಮೇಲೂ ಕ.ಸಂ ಎಂದು ಕಲಾತ್ಮಕವಾಗಿ ಕೆತ್ತಿರುತ್ತಿದ್ದರು. ನಮಗೆ ಇನ್ನೆಲ್ಲೂ ನೋಡಲು ಸಿಗದ ಪತ್ರಿಕೆಗಳು ಅಲ್ಲಿದ್ದವು. "ವೀರಭೂಮಿ", "ಆರಾಧನೆ", "ರಾಯಭಾರಿ", "ಜನಸೇವಕ", "ಕೈಲಾಸ", "ಕಾನಡಾ ವೃತ್ತ", "ಚುನಾವಣೆ" "ಚಂದಮಾಮ". "ಬಾಲಮಿತ್ರ", "ರಮಣ ಸಂದೇಶ", "ಕರ್ಮವೀರ", "ಜೀವೋತ್ತಮ" "ಸಂಕ್ರಮಣ". "ಜನಪ್ರಗತಿ", " ಸಾಕ್ಷಿ", "ಬ್ಲಿಟ್ಜ್", "ನ್ಯಾಷನಲ್ ಜಿಯೋಗ್ರಾಫಿಕ್", "ಸೌರಭ", "ಡೆಬೋನೇರ್", "ಇಂಪ್ರಿಂಟ್", " ರೀಡರ್ಸ್ ಡೈಜೆಸ್ಟ್", "ಪಿಕ್ಚರ್ ಪೋಸ್ಟ್", ಇತ್ಯಾದಿಗಳನ್ನು ಒಳಗೊಂಡು ಕನ್ನಡದ ಎಲ್ಲ ಪತ್ರಿಕೆಗಳೂ ಇರುತ್ತಿದ್ದವು. ವೇದೇಶ್ವರರ ತಾಂಬೂಲಿತ ಮೇಲ್ಮುಖಿ ದನಿಯಲ್ಲಿ "ಮೆಗೆಜಿನ್" ಪದ ತುಂಬ ಮಂಜುಳವೂ ವಿಶೇಷವೂ ಆಗಿ ಕೇಳಿಸುತ್ತಿತ್ತು. ಗ್ರಂಥಾಲಯದಲ್ಲಿ ಪತ್ತೇದಾರಿ ಮತ್ತು ಇತರ ಸಾಮಾಜಿಕ ಕಾದಂಬರಿಗಳಿಗೆ ಹೆಚ್ಚಿನ ಚಲಾವಣೆ ಇರುತ್ತಿತ್ತು. ಪುರುಷೋತ್ತಮ, ಅರಿಂಜಯ ಮತ್ತು ಮಧುಸೂಧನನ ಸಾಹಸಗಳ ನಡುವೆ ಸರಸಮ್ಮನ ಸಮಾಧಿ, ಅಪಸ್ವರ, ಅಪಜಯ, ಕಂಬನಿಯ ಕುಯಿಲು, ಜಲಪಾತ, ಚಿತ್ರಲೇಖಾ, ಮದುವಣಗಿತ್ತಿ, ಸಂಗೊಳ್ಳಿ ರಾಯಣ್ಣ– ಇದ್ದವು. ಪತ್ತೇದಾರಿ ಕಾದಂಬರಿಗಳನ್ನು ಇಶ್ಯೂ ಮಾಡುವಾಗ ಮತ್ತು

ವಾಪಸ್ ತೆಗೆದುಕೊಳ್ಳುವಾಗ ಅವರು ಮೊದಲ ಮತ್ತು ಕೊನೆಯ ಪುಟಗಳನ್ನು ಕೂಲಂಕಷವಾಗಿ ಪರೀಕ್ಷಿಸುತ್ತಿದ್ದರು. ಏಕೆಂದರೆ, ಕೆಲವು ವಿಘ್ನಸಂತೋಷಿ ಓದುಗರು ಪತ್ತೇದಾರಿ ಕಾದಂಬರಿಯ ಕೊನೆಯ ಪುಟಗಳನ್ನು ಹರಿದು ಬಿಟ್ಟಿರುತ್ತಿದ್ದರು. ಹಾಗಾಗಿ ಕೊಲೆಗಾರ ಯಾರು ಎನ್ನುವುದೇ ಪತ್ತೆಯಾಗದೆ ಹೊಸ ಓದುಗನಿಗೆ ಬಾಳುವೆಯೇ ವ್ಯರ್ಥ ಅನಿಸಿಬಿಡುತ್ತಿತ್ತು ಅಥವಾ ಮೊದಲ ಪುಟದಲ್ಲೇ "ವಿಜಯನು ಕೊಲೆಗಾರ" ಇತ್ಯಾದಿ ಬರೆದು ಬಿಟ್ಟಿರುತ್ತಿದ್ದರು. ಇತರ ಕಾದಂಬರಿಗಳಲ್ಲೂ ತಪಾಸಣೆಯ ಅಗತ್ಯ ಬೀಳುತ್ತಿತ್ತು. ಏಕೆಂದರೆ ಕೆಲವು ಓದುಗರು ಸ್ವಯಂ ಪ್ರೇರಣೆಯಿಂದ "ನನಗೇನನಿಸುತ್ತದೆ ಅಂದರೆ ಅ.ನ.ಕೃ ಅವರು ಸೀತಾರಾಮನಿಗೆ ಅನ್ಯಾಯ ಮಾಡಿದ್ದಾರೆ." ಹೀಗೆಲ್ಲ ಟೀಕು ಟಿಪ್ಪಣಿಗಳನ್ನು ಇಂಕುಪೆನ್ನಿನಿಂದ ಬರೆದಿರುತ್ತಿದ್ದರು.

ವರುಷಕ್ಕೊಮ್ಮೆ ವೇದೇಶ್ವರರು ಪುಸ್ತಕ ಪ್ರವಾಸ ಅಥವಾ ಚಾರಣಗೈಯುವುದಿತ್ತು. ಹುಬ್ಬಳ್ಳಿ, ಉಡುಪಿ, ಬೆಂಗಳೂರು, ಮೈಸೂರು, ಶಿವಮೊಗ್ಗ ಇಂಥ ಯಾವುದಾದರೂ ಒಂದು ಊರಿಗೆ ಮುಂಚಿತವಾಗಿ ಅಲ್ಲಿನ ಸಾಹಿತಿಗಳಿಗೆ ಕಾರ್ಡು ಬರೆದು ತಿಳಿಸಿ, ಹೋಗಿ ಅವರನ್ನೆಲ್ಲ ಕಂಡು, ಅವರು ಅಂಕಿತ ಹಾಕಿಕೊಟ್ಟ ಅವರ ಪುಸ್ತಕಗಳನ್ನು, ಜೊತೆಗೆ ಅವರು ಪ್ರೀತಿಯಿಂದ ಕೊಟ್ಟ ಅವರ ಸಂಗ್ರಹದಲ್ಲಿಯ (ಒಳ್ಳೆಯ) ಪುಸ್ತಕಗಳನ್ನು ಸಂಗ್ರಹಿಸಿಕೊಂಡು ಮರಳುತ್ತಿದ್ದರು. ಹುಬ್ಬಳ್ಳಿ ಬಸ್ಸಿನ ಟಾಪಿನಿಂದ ಪುಸ್ತಕ ತುಂಬಿದ ಚೀಲಗಳನ್ನು 'ಸಾವ್‌ಕಾಶಾ ಸಾವ್‌ಕಾಶಾ' ಎಂದು ಉತ್ಕಂಠಿತರಾಗಿ ಇಳಿಸುತ್ತಿದ್ದರು. ಬೀಚಿ, ತರಾಸು, ಕೃಷ್ಣಮೂರ್ತಿ ಪುರಾಣಿಕ, ನಿರಂಜನ, ಕಟ್ಟೀಮನಿ, ಆನಂದಕಂದ, ಕೆ.ವಿ.ಸುಬ್ಬಣ್ಣ, ಶಿವರಾಮ ಕಾರಂತ ಇಂಥ ಅನೇಕ ಸಾಹಿತಿಗಳ ಸಂಗ್ರಹದ ಪುಸ್ತಕಗಳು ಅವರು ಮಾಡಿರುವ ಅಡಿಗೆರೆಗಳೊಂದಿಗೆ ವೇದೇಶ್ವರರ ಪುಸ್ತಕಾಲಯದಲ್ಲಿವೆ. ಗೋಕರ್ಣದಲ್ಲಿ ೧೯೫೦ರ ದಶಕದಲ್ಲಿಯೇ ವಸಂತ ಸಾಹಿತ್ಯೋತ್ಸವ ಅಂತ ವರ್ಷಕ್ಕೊಮ್ಮೆ ನಡೆಸುತ್ತಿದ್ದರು. ಜಿಲ್ಲೆಯ ಬೇರೆ ಬೇರೆ ಭಾಗಗಳಿಂದ ಬೇರೆ ಬೇರೆ ವಿಷಯಗಳ ವಿದ್ವಾಂಸರು ಬರುತ್ತಿದ್ದರು. ಶಿರಸಿಯ ವಾಲಗಳ್ಳಿ, ಕುಮಟೆಯ ಹೆಗಡೆ ಬಂಧುಗಳು, ಗೋಕರ್ಣದ ಬೈಲಕೇರಿ, ಪನ್ನಿ, ಬರವಣಿ, ಗೌರೀಶರು ಎಲ್ಲ ವೇದೇಶ್ವರರ ಜೊತೆಗಿದ್ದರು. ಇಂಥದೊಂದು ವಸಂತ ಸಾಹಿತ್ಯೋತ್ಸವಕ್ಕೆ ಬಂದಿದ್ದಾಗ, ತನಗೆ, ತಾನೂ ಇಂಥದೊಂದು ಕಲಾಪವನ್ನು ಹೆಗ್ಗೋಡಿನಲ್ಲಿ ನಡೆಸಬೇಕು ಎಂಬ ಸ್ಫೂರ್ತಿ ಬಂತು ಎಂದು ಕೆ.ವಿ.ಸುಬ್ಬಣ್ಣ ತುಂಬ ಆಪ್ತವಾಗಿ ಆ ದಿನಗಳನ್ನು ನೆನೆದಿದ್ದಾರೆ. ಈ ಕಾರ್ಯಕ್ರಮಗಳಲ್ಲಿ ಸಕ್ರಿಯ ಪಾಲ್ಗೊಳ್ಳುವವರೆಲ್ಲರೂ ಆ ಕಾಲದ ಪ್ರಾಥಮಿಕ ಮಾಧ್ಯಮಿಕ ಶಿಕ್ಷಕ ವೃಂದವೇ ಆಗಿತ್ತು ಎನ್ನುವುದೊಂದು ಹೃದ್ಯ, ಮಹತ್ವದ ವಿಷಯ. ಅಂದರೆ ಇವೆಲ್ಲ ಸಮಾಜ ಶಿಕ್ಷಣದ ಸಹಜ ವಿಸ್ತರಣೆಯಾಗಿಯೇ ಇತ್ತು. ಅದರ ಜೊತೆ 'ಪರ್ಣಕುಟಿ' ಗ್ರಂಥಮಾಲೆಯೂ ಗೋಕರ್ಣದಲ್ಲಿ ಶುರುವಾಯ್ತು. ತೀರ್ಥಕ್ಷೇತ್ರವಾಗಿದ್ದ ಗೋಕರ್ಣಕ್ಕೆ ಸಾಂಸ್ಕೃತಿಕವಾದ ಸಾಹಿತ್ಯಿಕವಾದ ವ್ಯಕ್ತಿತ್ವವೊಂದನ್ನು ರೂಪಿಸಿದ ಮಹನೀಯರು ಇವರೆಲ್ಲ. ಜಿಜ್ಞಾಸೆಯೆ ಅದರ ಲಕ್ಷಣವಾಗಿತ್ತು.

ವರ್ಗಣಿಯೆನ್ನೇ ಕೊಡದ ಗ್ರಂಥಾಲಯದ ಓದುಗರ ಬಗ್ಗೆ ಅವರಿಗೆ ಸಹಜವಾಗೇ ಸಿಡಿಮಿಡಿ ಬೇಸರ ಇತ್ತು. "ಉದ್ರಿ ಖಾತೆಲಿ ಓದಿದರೆ ಜೀವಕ್ಕೆ ಹತ್ತುದಿಲ್ಲೊ"– ಅಂತಿದ್ದರು. ರಥಬೀದಿಯಲ್ಲಿ ಎದುರು ಬದಿಗೆ ಇದ್ದ ನಂಬಿಯಾರ್ ಅವರ ಶಂಬಿದ ಅಂಗಡಿಯಲ್ಲಿ ಆಗಾಗ ಬಂದು ಕೂತು ಹರಟೆ ಹೊಡೆಯುತ್ತಿದ್ದರು. ಆಗ ಅವರನ್ನು ನೋಡಲು ತುಂಬ ಖುಶಿಯಾಗುತ್ತಿತ್ತು. ಯಾಕೆಂದರೆ ಉಳಿದಂತೆ ಅವರು ಯಾವಾಗಲೂ ಪುಸ್ತಕದ ದೂಳು ಜಾಡಿಸುತ್ತ, ಕೆಲವನ್ನು ಬಿಸಿಲಿಗೆ ಹಾಕುತ್ತ, ಅಥವಾ ಏನೋ ಕುಡಿಕೆ ಕಲಾಕೃತಿ ಕೆತ್ತುತ್ತ ಇರುತ್ತಿದ್ದರು. ಶಿವರಾತ್ರಿಯ ತೇರಿನ ದಿನ ಅವರ ಕರ್ನಾಟಕ ಸಂಘದ ಅಟ್ಟದಿಂದ ತೇರನ್ನು ನೋಡಲು ಅವರ ಬಳಗದ ಕುಟುಂಬಗಳು, ಆಪ್ತರು ನೆರೆದಿರುವಾಗ ಇವರು ಮಾತ್ರ ಯಾವುದೋ ಕಪಾಟಿನ ಸಂದಿಯಲ್ಲಿ ಇಂಥ ಕೆಲಸದಲ್ಲಿ ಮಗ್ನರಾಗಿರುತ್ತಿದ್ದರು. ಅವರನ್ನು ಕಂಡವರೆಲ್ಲರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿಯುವುದು ಆ ನಿರತ ಕೆಲಸಗಾರನ ನಿಲುವು.

೨೦೦೦ ನಂತರ ಗೋಕರ್ಣಕ್ಕೆ ವಿದೇಶಿ ಪ್ರವಾಸಿಗರು ಬಂದುಳಿಯುವುದು ಜಾಸ್ತಿ ಆಯಿತು. ಬಂದವರೆಲ್ಲ ಮೂರ್‍ನಾಲ್ಕು ತಿಂಗಳು ಗೋಕರ್ಣದ ಸಮುದ್ರ ತೀರಗಳ ಗುಂಟ ಲಭ್ಯ ವಸತಿ ಗೂಡುಗಳಲ್ಲಿ ವಾಸಿಸುತ್ತಿದ್ದರು. ಇಂಥವರಿಗೆ ಕೋಣೆ ಅಣ್ಣನ ಸಂಗ್ರಹದ ಪುಸ್ತಕಗಳು ಆಪ್ತವಾಗತೊಡಗಿದವು. ಅವರು ನಂತರ ಅವರ ಬಾಷೆಯ ಪುಸ್ತಕಗಳನ್ನು ಕಳಿಸತೊಡಗಿದರು ಅಥವಾ ಮುಂದಿನ ಪ್ರವಾಸದಲ್ಲಿ ತರತೊಡಗಿದರು. ಇಂಥವರ ಪೈಕಿ ಫ್ರಾನ್ಸ್‌ನಿಂದ ಬಂದಿದ್ದ ರಂಗಕಲಾವಿದ, ಸಾಹಿತ್ಯಪ್ರೇಮಿ ಎಲಿಯಸ್ ಟ್ಯಾಬೆಟ್ ಎಂಬ ವ್ಯಕ್ತಿ ವೇದೇಶ್ವರರ ಪುಸ್ತಕಲೋಕದ ಭಕ್ತನಾಗಿ, ತನ್ನ ದೇಶದ ಒಂದಿಷ್ಟು ಸಂಸ್ಥೆಗಳಿಂದ, ಸರ್ಕಾರದಿಂದ ಸಾಕಷ್ಟು ಮೊತ್ತದ ಧನಸಹಾಯವನ್ನು ನೀಡಿ 'ಸ್ವಡೀ ಸರ್ಕಲ್'ಗೊಂದು ಹೊಸ ಸ್ಥಿರತೆ ಬರಲು ಕಾರಣನಾದ. ಅವರ ಮನೆಯಿಂದ ಮತ್ತು ರಥಬೀದಿಯ ಕಲಶದ ಮನೆಯ ಕಟ್ಟಡದಿಂದ ರಾಮತೀರ್ಥ ಗುಡ್ಡದ ಮೇಲಿನ ಭರತಗುಡಿಯ ಪಕ್ಕದ ಅವರ ಹೊಸ ಸರಳ ಮನೆಗೆ ಪುಸ್ತಕಗಳು ಸ್ಥಳಾಂತರಗೊಂಡವು. ಜನರ ವಾಚನಾಭಿರುಚಿಯನ್ನು ಶಿಕ್ಷಣ ಮಾಧ್ಯಮ, ಟಿವಿ ಮತ್ತು ಮೊಬೈಲುಗಳು ಕುಗ್ಗಿಸಿದ್ದರಿಂದ ಊರಿನಲ್ಲಿದ್ದಾಗಲೇ ಓದುಗರು ಬರುವುದು ಕಡಿಮೆ ಆಗಿತ್ತು. ಈಗ ಗುಡ್ಡದ ಮೇಲೆ ಸ್ಥಳಾಂತರಗೊಂಡ ಮೇಲೆ ಜನ ಬರುವುದೇ ನಿಂತುಹೋಯಿತು. ಮಾಧ್ಯಮಗಳಲ್ಲಿ, ಜಾಲತಾಣಗಳಲ್ಲಿ, ಪತ್ರಿಕೆಗಳಲ್ಲಿ, ವೇದೇಶ್ವರರ ಗ್ರಂಥ ಸಂಗ್ರಹದ ಬಗ್ಗೆ ಓದಿದ್ದ ಕೆಲವು ಪ್ರವಾಸಿಗರು ಮಾತ್ರ ಹುಡುಕಿಕೊಂಡು ಗುಡ್ಡೆ ಹತ್ತಿ ಬರುತ್ತಿದ್ದರು. ಅರ್ಧ ಕಟ್ಟಿದ ಒಂದೇ ಹಾಲಿನಂತಿದ್ದ ಮನೆಯಲ್ಲಿ ಲಕ್ಷಾಂತರ ಪುಸ್ತಕಗಳ ನಡುವೆ ವೇದೇಶ್ವರರು ಅವುಗಳ ಮರುವಿಂಗಡಣೆ ಜೋಡಣೆಯಲ್ಲಿ ಮತ್ತೆ ನಿರತರಾದರು.

ಪ್ರವಾಸಿ ಎಲಿಯಸ್, ಫ್ರಾನ್ಸಿನ ಸರ್ಕಾರದ ಸಹಾಯ ಹಸ್ತವನ್ನು ಒದಗಿಸಿ ರಾಮತೀರ್ಥದ ಗುಡ್ಡದ ಮೇಲೆ 'ಸ್ವಡೀ ಸರ್ಕಲ್' ನಾಲ್ಕು ಭದ್ರಗೋಡೆ ಮತ್ತು ಒಂದು ಸೂರು ಪಡೆಯುವಂತೆ ಮಾಡಿದ. ಊರಿನವರಿಗೆ ಈ ಜಾಗ ದೂರಾದರೂ ಕುಡ್ಲೆ ಬೀಚಿಗೆ ಹೋಗುವ ಪ್ರವಾಸಿಗರಿಗೆ ಅದು ನಿತ್ಯದ ದಾರಿಯ ತಂಗುದಾಣವಾಯಿತು. ಹೋದ ವರುಷ ನಾನು ಹೋದಾಗ ಎಲ್ಲಿಂದಲೋ ಬಂದಿದ್ದ ಸಂಶೋಧನಾ ವಿದ್ಯಾರ್ಥಿಗಳು ಅಲ್ಲಿ ಪುಸ್ತಕಗಳನ್ನು ರೆಫರ್ ಮಾಡುತ್ತಲೇ ಪುಸ್ತಕಗಳನ್ನು ಹೊಂದಿಸಿಡುವಲ್ಲಿ ವೇದೇಶ್ವರರಿಗೆ ನೆರವಾಗುತ್ತಿದ್ದರು. ಹಪ್ಪಳ ಮಾಡುವವರು ಹಪ್ಪಳ ಹರಡಿಕೊಂಡು ಕೂತಂತೆ ವೇದೇಶ್ವರರು ಕುಕ್ಕರುಗಾಲಲ್ಲಿ ಕೂತು ಚಡಪಡಿಸುತ್ತ 'ಹೂಂ'ಕಾರಗಳಲ್ಲೇ ನಿರ್ದೇಶನ ಕೊಡುತ್ತಿದ್ದರು. ಮುಸ್ಸಂಜೆಯ ಸಮುದ್ರ ಗಾಳಿಗೆ ಪುಸ್ತಕಗಳು ಪುಟ ಪುಟ ಹೊಡೆದುಕೊಂಡರೆ ಅವರಿಗೆ ಜೀವ ಹೋದ ಹಾಗೆ ಆಗುತ್ತಿತ್ತು. ದೊಡ್ಡ ದೊಡ್ಡ ಕಿಟಕಿಗಳ ದೊಡ್ಡ ಹಜಾರದಂತಿದ್ದ ಆ ವಿಶಾಲ ಕೋಣೆಯ ಮನೆಯಲ್ಲಿ ಪುಸ್ತಕದ ಕಪಾಟು, ರ್‍ಯಾಕುಗಳ ಜೊತೆಗೇ ಆನುಷಂಗಿಕವಾಗಿ ಒಂದೆರಡು ಆರಾಮ ಕುರ್ಚಿ, ಅಡಿಗೆ ಗ್ಯಾಸು. ಹಾಸಿಗೆ, ಚಾಪೆ, ಪಾತ್ರೆ ಪಡಗದೊಂದಿಗೆ ಶಚಿದೇವಮ್ಮ, ವೇದೇಶ್ವರರ ಸರಳ ಸಂಸಾರ ಇತ್ತು. ಪುಸ್ತಕ ಬಿಟ್ಟು ಅಲ್ಲಿ ಬೇರೇನೂ ಇರಲಿಲ್ಲ. ಸಮುದ್ರದ ಉಪ್ಪುಗಾಳಿಗೆ ಕಿಟಕಿ ಮತ್ತು ಕಪಾಟಿನ ಬಿಜಾಗರಗಳು, ಹಿಡಿಕೆಗಳು ಬೇಗ ಜಂಗು ಹಿಡಿದರೆ ಎಂದು ಆತಂಕಪಡುತ್ತಿದ್ದರು.

ವ್ಯಾಸಂಗವನ್ನೇ ಸತ್ಸಂಗವೆಂದು ಬಗೆದು ಅದಕ್ಕೊಂದು ಆವರಣವನ್ನು ಕಲ್ಪಿಸುವುದರಲ್ಲೇ ತಮ್ಮ ಬಾಳ್ವೆಯನ್ನು ಸವೆಸಿದ ವೇದೇಶ್ವರರು ತಮ್ಮ ೮೫ನೇ ವಯಸ್ಸಿನಲ್ಲಿ ೨೦೧೯ ಆಗಸ್ಟಿನಲ್ಲಿ ತೀರಿಕೊಂಡರು. ಕಳೆದ ಶತಮಾನದ ಗೋಕರ್ಣದ ಚಲನಶೀಲ ಬಹುಮುಖೀ ಸಂವೇದನೆಯ ಆತ್ಮಸಾಕ್ಷಿಯಂತಿದ್ದ ಕೋಣೆ ಅಣ್ಣ ಪುಸ್ತಕಗಳ ನಡುವೆ ಸಪೂರ, ನಿರ್ಲಿಪ್ತ 'ಬುಕ್ ಮಾರ್ಕ್'ನಂತೆಯೇ ಸದ್ದಿಲ್ಲದೆ ಇದ್ದರು. ಅವರ ಜೀವದ ಭಾಗವೇ ಆಗಿದ್ದ ಅಗಣಿತ ಪುಸ್ತಕಗಳು ಈಗ ರಾಮತೀರ್ಥ ಗುಡ್ಡೆಯ ಮೇಲಿನ ಕೋಣೆಯ ಕಪಾಟುಗಳಲ್ಲಿ ಸಾಲಾಗಿ ಕೈಕಟ್ಟಿಕೊಂಡು ಶಿಸ್ತಿನಿಂದ ನಿಂತಿವೆ. ಒಬ್ಬ ಅಯಾಚಿತ ಅನಾಮಿಕ ಓದುಗ ಬಳಿ ಬಂದರೂ ಸಾಕು, ಅವು ಪ್ರಸನ್ನತೆಯಿಂದ ನಸುನಗುತ್ತ ಕೈಚಾಚುತ್ತವೆ. ಶಚಿದೇವಮ್ಮ ಮತ್ತು ಮಗ, ಸೊಸೆ "ಕಷಾಯ ಮಾಡ್ಲಾ"– ಎಂದು ಕೇಳುತ್ತಾರೆ. ಕಿನಾರೆ ಎಲ್ಲರ ಮುಂಗುರಳನ್ನು ನೇವರಿಸುತ್ತದೆ.



**(ಕನ್ನಡ ಹಿರಿಯ ಕವಿ–ಕಥೆಗಾರ–ಅಂಕಣಕಾರರಾದ ಜಯಂತ ಕಾಯ್ಕಿಣಿ ಚಲನಚಿತ್ರ ಗೀತರಚನಾಕಾರರೂ ಕೂಡ.)**


## ವಿಶೇಷ ಸಂಚಿಕೆಗಾಗಿ ಪೋಷಕ ಧನ

ಪ್ರತಿ ವರ್ಷದಂತೆ ಈ ವರ್ಷವೂ 'ಹೊಸ ಮನುಷ್ಯ'ದ ಆಗಸ್ಟ್ ಸಂಚಿಕೆ ವಾರ್ಷಿಕ ವಿಶೇಷ ಸಂಚಿಕೆಯಾಗಿ ಹೊರಬರಲಿದ್ದು, ಓದುಗರು ಇದಕ್ಕೆ ತಮ್ಮ ಪೋಷಕ ಧನವಾಗಿ ಒಂದು ಸಾವಿರ ರೂ. ಅಥವಾ ಅದಕ್ಕಿಂತ ಹೆಚ್ಚಿನ ಹಣವನ್ನು ಈ ಕೆಳಗೆ ನೀಡಿರುವ ಬ್ಯಾಂಕ್ ಖಾತೆಗೆ ಜಮಾ ಮಾಡಬಹುದು. ಹೀಗೆ ಪ್ರೋತ್ಸಾಹ ಧನ ನೀಡುವವರ ಹೆಸರುಗಳನ್ನು ವಿಶೇಷ ಸಂಚಿಕೆಯಲ್ಲಿ;ಮತ್ತು ಮುಂದಿನ ಸಂಚಿಕೆಗಳಲ್ಲಿ ಅವರ ಕುಟುಂಬದ ಪರವಾದ ಶುಭಾಶಯ ಪ್ರಕಟಿಸಲಾಗುವುದು.

ಚೆಕ್/ಡಿಡಿ ಮೂಲಕವೂ ಪತ್ರಿಕೆಯ ವಿಳಾಸಕ್ಕೆ ಹಣ ಕಳಿಸಬಹುದು. ಬ್ಯಾಂಕ್‌ಗೆ ಹಣ ಜಮಾ ಮಾಡುವವರು (ಬ್ಯಾಂಕಿಗೆ ನಗದು ಜಮಾ ಮಾತ್ರ ಬೇಡ) ಹಣ ಜಮಾ ಮಾಡಿದ ಕೂಡಲೇ ಅದರ ವಿವರಗಳನ್ನು 9449242284 ಈ ಸಂಖ್ಯೆಗೆ ಕರೆ ಮಾಡಿ ಅಥವಾ ಸಂದೇಶ ಕಳಿಸಿ ತಿಳಿಸಬೇಕು.

ಬ್ಯಾಂಕ್ ಖಾತೆ ವಿವರ: ಶಿವಮೊಗ್ಗದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಗೀತಾ ಕೃಪಾ ಶಾಖೆಯಲ್ಲಿ ಸಂಪಾದಕರು : ಹೊಸ ಮನುಷ್ಯ ಎಂಬ ಹೆಸರಿನಲ್ಲಿರುವ ಚಾಲ್ತಿ (ಕರೆಂಟ್) ಖಾತೆಯ ಸಂಖ್ಯೆ: **64110358330. IFSC Code: ISBN 0040444**

# ನವಿಲುಗರಿ

## ಕಥೆಯಾದಳು ವ್ಯಥೆಯಾದಳು..



"
ಕಥೆಯಾದಳು ವ್ಯಥೆಯಾದಳು
ಸಸಿಯಿದ್ದಾ ಹುಡುಗಿ
ಹುಸಿಯರಿಯದ ಹುಡುಗಿ
ಪುಟ್ಟು ಪುಟಾಣಿ ಜಮಲಮ್ಮ
ಮಾರಿ ಕೊರೊನಾ ಕೊಂದುದಲ್ಲ
ಪೊಲೀಸರ ಲಾಠಿಗೆ ಬಿಡುವಿರಲಿಲ್ಲ
ಯಾವ ನಮಕ ಹರಾಮನು
ಟ್ವೀಟಲಿಲ್ಲ
ಇಂಚು ಕೂಡ ಮರುಗಲಿಲ್ಲ
ರೈಲು ದಾರಿ ನೆಟ್ಟಗಲ್ಲ
ಅದನು ಅವಳು ಹತ್ತಲಿಲ್ಲ
ಅದು ಹರಿಯಲಿಲ್ಲ
ಎತ್ತಣ ಛತ್ತೀಸಗಢ
ಎತ್ತಣ ತೆಲಂಗಾಣ
ಎತ್ತಣಿಂದೆತ್ತ ಸಂಬಂಜವಮ್ಮ
ಹನ್ನೆರಡರ ಜಮಲಮ್ಮ ಮೈನೆರೆಯದ
ಮಡಕಮ್ಮ
ಗಾಣಕೊಡ್ಡಿದ ಗೋಣು
ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ
ಹುಡುಗಿ ಮೆಣಸ ಹೊಲದಲಿ
ಹುಡುಕಿ ಕಣಸ
ಬುಡಕಟ್ಟು ಮುರಿಯ
ಬಿಟ್ಟು ಮೈಮುರಿಯ
ದುಡಿಮೆ ಕೈಕೊಟ್ಟು
ಕಾಲ ನಂಬಿ ನಡೆದಳೆ
ಅನ್ನ ನೀರಿರದಲೆ
ಒಬ್ಬಳೇ
ಮೈಲಿ ನೂರಾನಲವತ್ತು
ನಿಲ್ಲದೇ
ಯಾರನೂ ಬೈಯ್ಯದೇ
ಇನ್ನು ಬರಿ ಅರುವತ್ತು
ಎಂಬ ಲೆಕ್ಕ ನಮಗೆ ಬಿಟ್ಟು
ಕುಸಿದು ಬಿದ್ದು ಸತ್ತಳೆ
ಊರು ದೇಶ ಸುಡುಗಾಡು
ಬಾಲ್ಕನಿ ಮೊಂಬತ್ತಿ



ಚಿತ್ರ: ವಿಜಯಶ್ರೀ ಹಾಲಾಡಿ



ನೆರೆಹೊರೆ ಗಂಟೆ ಜಾಗಟೆ
ಬಡಿಯುತಿರುವಾಗಲೆ.

**-ಎಚ್ ಪಟ್ಟಾಭಿರಾಮ ಸೋಮಯಾಜಿ**

## ಹುಳು ಬಡಿದಿದೆ "

ದಣಿವರಿಯದ
ನನ್ನಪ್ಪನ ಮೀನಖಂಡಗಳಿಗೆ
ಸೋಲದ
ನನ್ನವ್ವನ ಮೊಣಕೈಗಳಿಗೆ
ಎಂದೋ ದೂರ ಸರಿದುಹೋಯ್ತು
ಹೊಲ- ಬದುವಿನ ನಂಟು
ಮೈಕಸುವ
ಬೆವರು ಮಾತ್ರ ಬಾಕಿಇತ್ತು
ಶಹರಗಳ ಗಲ್ಲಿಗಳಲಿ ಮಾರಲಿಕ್ಕೆ .

ಜಗಮಗಿಸುವ
ಇಮಾರತ್ತುಗಳಲಿ
ಮಿಣುಕುವ
ಕಲ್ನಾರು ರಸ್ತೆ
ಪುಟಿಯುವ ನಗರದ
ಪ್ರಾಯದುಸಿರುಗಳಲಿ
ಕಣ್ಣಿಬಿಟ್ಟು ಹೋದ
ವಲಸಿಗರ ರಕ್ತವಿದೆ .

ಭೂಮಿಗೆ ಕಾಣದ
ಹುಳು ಮೆಟ್ಟಿದೆ
ನಗರಗಳು
ತುರ್ತು ಘಟಕಗಳಲಿ
ಹಳ್ಳಿಗಳು ಕೊಂಪೆಗಳಾಗಿ



ಬೆವರ ದೊನ್ನೆಗಳಿವೆ
ದೇಹದೊಳಗೆ
ಕೊಳ್ಳುವರ್ಯಾರು?
ಹುಳು ಸಾಯಿಸುತ್ತಿದೆ
ಹುಳುವಿನ ಭಯವೂ.

**-ಸೈಫ್ ಜಾನ್ಸೆ , ಕೊಟ್ಟೂರು.**


## ಹೊಸ ಮನುಷ್ಯ : ವಾರ್ಷಿಕ ವಿಶೇಷಾಂಕ-೨೦೨೦ (ಆಗಸ್ಟ್)

ಯುವಾಲ್ ನೊವ ಹರಾರಿಯವರ ಮಾನವ ಇತಿಹಾಸಕ್ಕೊಂದು ಇಣುಕು ನೋಟ: *ಎಂ. ರಾಜು ಅವರ ಅನುವಾದ ಲೇಖನ*–ಅಲೌಕಿಕ ವಿದ್ಯಮಾನಗಳೆಂದು ವರ್ಣಿಸಲಾಗುವ ವಿದ್ಯಮಾನಗಳ ಗ್ರಹಿಕೆಯ ನೆಲೆಗಳು: *ಲಕ್ಷ್ಮೀಶ ತೋಳ್ಪಾಡಿಯವರ ವಿಶೇಷ ಲೇಖನ*– ವಿಜ್ಞಾನ ಮತ್ತು ಬಂಡವಾಳಶಾಹಿ ನಡುವಣ ಸಂಬಂಧ: *ನಾಗೇಶ್ ಹೆಗ್ಡೆಯವರಿಂದ ಒಂದ ವಿಶ್ಲೇಷಣೆ*–ನಮ್ಮ ಕಾಲದ ಮುವ್ವರು ಮುಖ್ಯ ಮಹಿಳಾ ಹೋರಾಟಗಾರ್ತಿಯರು: ಮೇಧಾ ಪಾಟ್ಕರ್, ವಂದನಾ ಶಿವ ಮತ್ತು ಮಮತಾ ಬ್ಯಾನರ್ಜಿ: *ಇವರನ್ನು ಕುರಿತು ತಾರಿಣಿ ಶುಭದಾಯಿನಿ, ರಾಜೇಂದ್ರ ಚೆನ್ನಿ ಮತ್ತು ದಿನೇಶ್ ಅಮೀನ್‌ಮಟ್ಟು ಕಟ್ಟಿಕೊಟ್ಟಿರುವ ವ್ಯಕ್ತಿ ಚಿತ್ರಗಳು*–ಕಮಲಾದೇವಿ ಚಟ್ಟೋಪಾಧ್ಯಾಯ ಕೆಲವು ಅಪರೂಪದ ನೆನಪುಗಳು: *ವೈದೇಹಿ ಅವರಿಂದ*–ಕರೋನೋತ್ತರ ಭಾರತಕ್ಕೊಂದು ಪರ್ಯಾಯ ಆರ್ಥಶಾಸ್ತ್ರ: *ಸಂತೋಷ ಕೌಲಗಿಯವರ ವಿಚಾರ ಮಂಡನೆ*–ಕನ್ನಡದ ಭಾಷಾ ಕುಟುಂಬದ ಸಾಮರಸ್ಯ: ವಿವೇಕ ರೈ ಅವರ ವಿಶ್ಲೇಷಣೆ–ಸಾಹಿತ್ಯ ಬೋಧನೆ ಮತ್ತು ಅಧ್ಯಯನಗಳ ಅವನತಿಗೆ ಕಾರಣಗಳೇನು?: *ಓ. ಎಲ್ ನಾಗಭೂಷಣ ಸ್ವಾಮಿಯವರ ಒಂದು ವಿವೇಚನೆ*–ಹೆಣ್ಣು ನೋಟ; ಹಾಗೆಂದರೇನು?: *ವಿನಯ ವಕ್ಕುಂದ ಮತ್ತು ಸಬಿತಾ ಬನ್ನಾಡಿಯವರ ನಡುವೆ ಒಂದು ಸಂವಾದ*–ಸತ್ಯಜಿತ್ ರೇ: ಒಂದು ಶತಮಾನದ ನೆನಪು: *ಪಿ. ಶೇಷಾದ್ರಿಯವರಿಂದ*–ಅಮರೇಶ ನುಗಡೋಣಿಯವರ ಹೊಸ ಕಥೆ–*ಗೀತಾ ವಸಂತ* ಅವರ ಲಲಿತ ಪ್ರಬಂಧ–*ಹನೂರು ಕೃಷ್ಣಮೂರ್ತಿಯವರ* ಹೊಸ ಕಾದಂಬರಿಯಿಂದ ಆಯ್ದ ಭಾಗ–*ಸುಬ್ರಾಯ ಚೊಕ್ಕಾಡಿ, ಎಚ್.ಎಸ್. ಶಿವಪ್ರಕಾಶ, ಜಿ.ಪಿ. ಬಸವರಾಜು, ಸತೀಶ್ ಕುಲಕರ್ಣಿ, ಸವಿತಾ ನಾಗಭೂಷಣ, ಜ.ನಾ ತೇಜಶ್ರೀ, ಎಚ್.ಆರ್. ಸುಜಾತಾ* ಅವರ ಕವಿತೆಗಳು–*ಅವಿನಾಶ್ ಟಿ ಅವರಿಂದ* ವರ್ಷದ ಸಂಚಿಕೆಗಳ ಒಂದು ಸಮೀಕ್ಷೆ–ಧರ್ಮವಿಚಾರ ಪುಟ–ಯುವಲಹರಿ–ಪುಸ್ತಕಾವಲೋಕನ–ವಿಶೇಷ ಪತ್ರಗಳು ಇತ್ಯಾದಿ

ನಿಮ್ಮ ಪ್ರತಿಯನ್ನು ಕಾಯ್ದಿರಿಸಿ ಮತ್ತು ನಿಮ್ಮ ಅಥವಾ ನಿಮ್ಮ ಮಿತ್ರರ ವಾಣಿಜ್ಯ ಸಂಸ್ಥೆಗಳಿಂದ ಶುಭಾಶಯ ಜಾಹೀರಾತುಗಳನ್ನು ಒದಗಿಸಿ ನೆರವಾಗಿರಿ. ಸಂಪರ್ಕ ಸಂಖ್ಯೆ :: 9481351079

# ಸಾಹಿತ್ಯ-ಸಂಸ್ಕೃತಿ-ಕಲೆ ಇತ್ಯಾದಿ: ಒಂದು ಪ್ರತಿಕ್ರಿಯೆ, ಒಂದು ಟಿಪ್ಪಣಿ

## ಯಕ್ಷಗಾನ ಭಾಗವತಿಕೆಯಲ್ಲಿ ಹೆಣ್ಣು ಧ್ವನಿ: ಒಂದು ಪ್ರತಿಕ್ರಿಯೆ

'**ಹೊ**ಸ ಮನುಷ್ಯ'ದ ಜೂನ್ ಸಂಚಿಕೆಯಲ್ಲಿನ ಆರ್, ಕೃತಿ ಅವರ *ಯಕ್ಷಗಾನ ಭಾಗವತಿಕೆಯ 'ಮೂಲವಸ್ತು;'ಮತ್ತು ಹೆಣ್ಣು ಧ್ವನಿ* ಎಂಬ ಲೇಖನದ ಬಗೆಗೆ ( ನನ್ನ ಕೆಲವು ಅನಿಸಿಕೆಗಳು ಹೀಗಿವೆ:

ಯಕ್ಷಗಾನವೆಂಬ ಕಲೆಯು– ದೀರ್ಘಕಾಲದಿಂದ ಗಂಡಸರು ಅಭಿವ್ಯಕ್ತಿಸುತ್ತ ಬಂದುದರಿಂದ 'ಪುರುಷ ಸ್ವರೂಪ'ವನ್ನು ಪಡೆದಿದೆ, ಭರತನಾಟ್ಯ ಪ್ರಕಾರವು ಸ್ತ್ರೀಸ್ವಭಾವಿ ಆಗಿರುವಂತೆ, ಅದರಲ್ಲಿ ಈಗ ಪ್ರವೇಶಿಸುತ್ತಿರುವ (ಅಂದರೆ ಸುಮಾರು ೧೯೭೫ರಿಂದ) ಮಹಿಳಾ ಕಲಾವಿದರಿಗೆ– ಪ್ರತಿಕೂಲಗಳಿವೆ ಎಂಬ ವಿಚಾರವು ಸಮ್ಮತವೇ. ಅದರೊಂದಿಗೆ ಗ್ರಹಿಸಬೇಕಾದದ್ದು ಮಹಿಳೆ ಎಂಬುದು ಯಕ್ಷಗಾನದಲ್ಲಿ ಪ್ರೋತ್ಸಾಹಕ್ಕೂ, ಕುತೂಹಲಕ್ಕೂ ವಿಷಯವಾಗಿ–ಅದೊಂದು ಅರ್ಹತೆಯೂ ಆಗಿದೆ ಎಂಬುದು.

ಅದಕ್ಕಿಂತ ಹೆಚ್ಚಾಗಿ, ಯಕ್ಷಗಾನದ ಹಾಡುಗಾರಿಕೆಗೆ ಸಂಬಂಧಿಸಿದ ಸ್ವಾರಸ್ಯಕರವಾದ ಒಂದು ವೈಶಿಷ್ಟ್ಯ ಏನೆಂದರೆ– ಯಕ್ಷಗಾನದ ಭಾಗವತಿಕೆಯಲ್ಲಿ 'ನಿರೀಕ್ಷಿತ' ಮತ್ತು ಸಹಜವೆನಿಸುವ ಗುಣವು, ಮಹಿಳೆಯಲ್ಲಿ ಸಹಜವಾಗಿಯೆ ಇದೆ ಎಂಬುದು! ಏನು ಹಾಗೆಂದರೆ? ನೋಡೋಣ.

ಹೆಚ್ಚಾಗಿ–ಯಕ್ಷಗಾನವು ಬೆಳೆದು ಬಂದ ರೂಪದಲ್ಲಿ, ಅದು ಬಯಲಲ್ಲೆ ಪ್ರದರ್ಶಿಸಲ್ಪಡುವ, ಧ್ವನಿವರ್ಧಕದ ಕಲ್ಪನೆಯೂ ಇಲ್ಲದ ಕಾಲದ ಪ್ರಯೋಗ. ಹೊರಾಂಗಣದ ಬಯಲು ಕಲೆ. ಹಾಗಾಗಿ ದೇಶದ ಇತರ ಎಲ್ಲ ಬಯಲು ಕಲೆಗಳಂತೆಯೇ ಇದರಲ್ಲಿ ಏರು ಧ್ವನಿಯ, ಏರುಶ್ರುತಿಯ ಹಾಡು, ಮಾತು ಸಹಜವಾಗಿ ಬೆಳೆದು ಬಂದಿದೆ. ಈ ಕಲೆಗಳಿಗೆ, ಈಗಲೂ ಅದರಿಂದ ಹೊರಬರಲಾಗಲಿಲ್ಲ. ಗಂಡಸರಿಗೆ, ಇದು ಬಲಾತ್ಕಾರದ ಸ್ವರವೇ. ಮುಂಬಯಿಯಲ್ಲಿ ಒಂದು ಆಟದಲ್ಲಿ– ಪ್ರಸಿದ್ಧ ಚಿತ್ರಸಂಗೀತ ನಿರ್ದೇಶಕ–ದಿ। ರವೀಂದ್ರ ಜೈನ್ ಅವರ್ರು ನನ್ನಲ್ಲಿ ಕೇಳಿದ ಪ್ರಶ್ನೆ ಪ್ರಾತಿನಿಧಿಕವಾದುದು: *"ಅಚ್ಛಾ ಗಾತಾ ಹೈ. ಬಹುತ್ ಭಾವರಸ ಪರಿಪುಷ್ಟ ಹೈ.. ಲೇಕಿನ್ ವೋ ಇತ್ನಾ ಕ್ಯೋಂ ಚಿಲ್ಲಾತಾ ಹೈ?* ಇರಲಿ.

ಯಕ್ಷಗಾನದ ಸಂಪ್ರದಾಯಿಕ– ಗಾನಚರಿತ್ರೆಯಲ್ಲಿ 'ಏರು ಶ್ರುತಿ' ಎಂಬುದು ಸಹಜವೆಂದು ಸ್ವೀಕೃತವಾದುದು–ಸರಳವಾಗಿ ಹೇಳುವುದಿದ್ದರೆ–ಹಾರ್ಮೋನಿಯಂ ಅಳತೆಯಲ್ಲಿ ಬಿಳಿನಾಲ್ಕು, ಕಪ್ಪು ಮೂರು, ಬಿಳಿ ಐದು ಈ ಶ್ರುತಿಗಳು.(ಇದಕ್ಕೆ ಅಪವಾದಗಳೂ ಇವೆಯೆನ್ನೋಣ) ಗಂಡಸರ ಸಹಜ ಸ್ವರ ಸ್ವರೂಪಕ್ಕೆ ಇದ 'ು 'ಬೊಬ್ಬೆಯೇ'.

ಸ್ತ್ರೀ ಧ್ವನಿ (ಸ್ವರ) ಸ್ವಾಭಾವಿಕವಾಗಿಯೇ ಏರು! (ರಂಗದಲ್ಲೂ, ಮನೆಯಲ್ಲೂ!) ತಾಂತ್ರಿಕ ವಿವರಗಳಿಗೆ ಹೋಗದೆ– ಸಾಮಾನ್ಯ ಸರಾಸರಿ ಗಂಡು, ಹೆಣ್ಣು ಸ್ವರಸ್ವಭಾವದ ಹೋಲಿಕೆಯಿಂದ ಹೇಳುವುದಾದರೆ– ಸಾಮಾನ್ಯ average ಗಂಡಸರ ಧ್ವನಿ ೮೫ ರಿಂದ ೧೫೫ Hz ಎಂದೂ, ಸಾಧಾರಣ ಹೆಣ್ಣು ಸ್ವರವು ೧೬೫–೨೫೫ Hz ಎಂದೂ ತಜ್ಞರ ಮತವಿದೆ. (Hz ಎಂದರೆ ಹರ್ಡ್ಜ್ ಎಂಬ ಧ್ವನಿ ಮಾನದ ಅಳತೆ.) ಅಂದರೆ ಸಹಜವಾಗಿಯೇ ಹೆಣ್ಣುಸ್ವರಕ್ಕೆ ಗಂಡು ಸ್ವರಕ್ಕಿಂತ ದ್ವಿಗುಣ ಕಂಪನ ಶಕ್ತಿ (ಏರು) ಇದೆ. ಇದು ಪ್ರಾಕೃತಿಕ. ಅರ್ಥಾತ್ ಯಕ್ಷಗಾನದ ಬಿಳಿ ಮೂರು, ನಾಲ್ಕು, ಕಪ್ಪು ಮೂರು, ಬಿಳಿ ಐದು –ಮೊದಲಾದ ನಿರೀಕ್ಷಿತ ಏರು ಶ್ರುತಿಗಳು, ಹೆಂಗಸರಿಗೆ ಸಹಜ. ಗಂಡಸರಿಗೆ ಯತ್ನಪೂರ್ವಕ ಎಂದರ್ಥ.ಆದುದರಿಂದಲೆ, 'ಸ್ತ್ರೀಕಂಠ' 'ಹೆಣ್ಣು ಸ್ವರ'ದ ಎಂದೆ ಪ್ರಸಿದ್ಧರಾಗಿದ್ದ ದಿ। ಹಿರಿಯ ಬಲಿಪ ಭಾಗವತರೂ, ದಿ। ಕಡತೋಕ ಮಂಜುನಾಥ ಭಾಗವತರೂ, ಸಹಜವಾಗಿ, ಕಪ್ಪುಮೂರು, ಬಿಳಿನಾಲ್ಕು ಶ್ರುತಿಗಳಲ್ಲಿ ನಿರಾಯಾಸವಾಗಿ ಹಾಡಿ ಮೆರೆಸುತ್ತಿದ್ದರು. ಯಕ್ಷಗಾನದ 'ಸ್ವೀಕೃತ ಸ್ವಭಾವ'ಕ್ಕೆ – ಬೇಕಾಗಿರುವ, ಏರುಸ್ವರವು ಸ್ತ್ರೀಕಂಠಕ್ಕೆ ಸಹಜ! ಅವರ ಭಾಗವತಿಕೆಯೆಂಬುದು– (ಉಳಿದಂತೆ ಸಾಂಗೋಪಾಂಗ ಸಮರ್ಥವಾಗಿದ್ದಲ್ಲಿ) ಯಕ್ಷಗಾನಕ್ಕೆ ಸಹಜವಾಗಿ ಹೊಂದಿಕೆ ಆಗುವುದು! ಹಾಗಾಗಿ– ಇಲ್ಲಿ ಒತ್ತಡವೇನಿಲ್ಲ.

ಇಲ್ಲಿ ಹೇಳುವುದಿಷ್ಟೆ–ಸ್ತ್ರೀಪುರುಷ ಆಧರಿತ (ಜೆಂಡರ್) ಹಾಗೂ ಸಮಾಜಶಾಸ್ತ್ರೀಯ ರೂಪದ, ಕಲಾ–ಅಧ್ಯಯನಗಳು, ಇಂತಹ ವಿಚಿತ್ರ ಮತ್ತು ವಿರೋಧಾಭಾಸ ರೂಪದ ವಿದ್ಯಮಾನಗಳು, ಸಂಭವಗಳನ್ನು ಪರಿಗಣಿಸಬೇಕು ಎಂಬುದು. ಯಕ್ಷಗಾನದಲ್ಲಿ ಮಹಿಳೆಯರ ಕಲಾಪ್ರವೃತ್ತಿಗೆ ಅನುಕೂಲವಾಗಿರುವ ವಿಚಾರವಿದು. ಏಕೆಂದರೆ–ಸಹಜವಾಗಿ ಎರಡು, ಎರಡೂವರೆ ಸಪ್ತಕಗಳಲ್ಲಿ ಸಂಚರಿಸಿದರೆಯೆ, ಅದು ಸುಖವಾದ ಗಾಯನವಷ್ಟೆ?

ಇಲ್ಲಿಯೆ ಹೇಳಬೇಕಾದ ಒಂದು ಮಾತು: ಆಧುನಿಕ ತಂತ್ರಜ್ಞಾನ, ಸಭಾಭವನಗಳ ವ್ಯವಸ್ಥೆಗಳ ನೆಲೆಯಲ್ಲಿ ಒಂದು ಯಕ್ಷಗಾನದ ಹಾಡು, ಮಾತು, ವಾದ್ಯಗಳ ಸ್ವರವು– ಸೌಮ್ಯ, ತಗ್ಗು ಆಗಬೇಕಾದ ಅಗತ್ಯವಿದೆ. ತನ್ನ 'ಯಕ್ಷರಂಗ'ಕ್ಕೆ ಡಾ. ಶಿವರಾಮ ಕಾರಂತರು ಆರಿಸಿಕೊಂಡದ್ದು, 'ಏರು ಶ್ರುತಿ'ಯ ಭಾಗವತರನ್ನಲ್ಲ. ಇಳಿಶ್ರುತಿಯಲ್ಲಿ ಸುಖವಾಗಿ ಹಾಡಬಲ್ಲ ದಿ। ನೀಲಾವರ ರಾಮಕೃಷ್ಣಯ್ಯನವರನ್ನು!

–ಎಂ. ಪ್ರಭಾಕರ ಜೋಷಿ, ಮಂಗಳೂರು

(ಹಿರಿಯ ಯಕ್ಷಗಾನ ವಿದ್ವಾಂಸರು ಮತ್ತು ತಾಳಮದ್ದಲೆ ಕಲಾವಿದರು)

## ಸುಬ್ರಾಯ ಚೊಕ್ಕಾಡಿ–೮೦



**ನ**ಮ್ಮ ಸುಬ್ರಾಯ ಚೊಕ್ಕಾಡಿಯವರಿಗೆ ಈಗ ಎಂಬತ್ತು ತುಂಬಿದೆ. ಮೊನ್ನೆ ಜೂನ್ ೨೯ರಂದು ಅವರು ಎಂಬತ್ತು ಮುಗಿಸಿ ಎಂಬತ್ತೊಂದಕ್ಕೆ ಕಾಲಿಟ್ಟಿದ್ದಾರೆ. ವಾರದ ಹಿಂದೆ ಅವರಿಗೆ ಕರೆ ಮಾಡಿದಾಗ, ಹೀಗೇ ಮಾತನಾಡುತ್ತಾ ಅವರ ತುಂಬು ಜೀವನ ಸಂಭ್ರಮದ ಮಾತುಗಳನ್ನು ಕಿವಿ ತುಂಬಿಕೊಳ್ಳುತ್ತಾ ಬೆರಗಿನೊಂದಿಗೆ ನಿಮಗೆಷ್ಟು ವಯಸ್ಸು ಎಂದು ಕೇಳಿದಾಗ ಅವರು ಈ ಸಂತಸದ ಸುದ್ದಿ ತಿಳಿಸಿದರು. ಖುಷಿಯಿಂದ ಪತ್ರಿಕೆ ಅವರಿಗೆ ಶುಭಾಶಯ ಹೇಳಿದಾಗ ಅವರು ಎಂದಿನ ಸಲಿಗೆಯಿಂದ 'ಅವಸರ ಬೇಡ ತಾಳಿ! ನೂರಾಗಲಿ. ಆಗ ನಿಜವಾದ ಶುಭಾಶಯ ಕೋರುವಿರಂತೆ ಎಂದಾಗ ಅವರ ಜೀವನೋತ್ಸಾಹ–ಸಂಭ್ರಮಗಳು ಅವರ ಆ ಧ್ವನಿಯಲ್ಲೇ ಅನುರಣಿಸುತ್ತಿದ್ದವು. ನಾನು ಅದೇ ಸಲಿಗೆಯಿಂದ ಅಯ್ಯೋ, ಆವರೆಗೆ ನಾವಿರಬೇಕಲ್ಲ? ಆದ್ದರಿಂದ ಈಗಲೇ ಸ್ವೀಕರಿಸಿಬಿಡಿ ಎಂದಾಗ ಅವರು 'ಹೋ!' ಎಂದು ನಕ್ಕು, 'ಯಾಕೆ ಇರಬಾರದು, ಇದೋ ನನ್ನ ಆಶೀರ್ವಾದ ಎಂದು ನನಗೆ ನೂರು ವರ್ಷ ಬಾಳುವ ಆಶೀರ್ವಾದ–ಶಿಕ್ಷೆಯನ್ನು ದಯಪಾಲಿಸಿಬಿಟ್ಟರು!

ಚೊಕ್ಕಾಡಿ ನನ್ನ ಪುರಾತನ ಗೆಳೆಯರು. ಅವರನ್ನು ನಾನು ೭೦ರ ದಶಕದಲ್ಲಿ ಅವರು *ಸಾಕ್ಷಿ–ಸಂಕ್ರಮಣ*ಗಳಲ್ಲಿ ಕವನಗಳನ್ನು ಪ್ರಕಟಿಸುತ್ತಿದ್ದ ಕಾಲದಿಂದಲೂ ಗಮನಿಸುತ್ತಿದ್ದೇನೆ. ಅವರ ಮೊದಲ ಕವನ ಸಂಕಲನ 'ತೆರೆ' ಬಿಡುಗಡೆಯಾದಾಗ ಕೊಂಡು ಕುತೂಹಲದಿಂದ ಓದಿದ್ದೆ.. ಅದರಲ್ಲಿನ ಕವನವೊಂದರ ಸಾಲೊಂದನ್ನು ಈ ಮಾತುಕತೆಯ ಮಧ್ಯೆ ಉಲ್ಲೇಖಿಸಿದಾಗ ಆ ಸಾಲಿನಲ್ಲಿನ ಅಪ್ಪಟ ಪೋಲಿತನದಿಂದಾಗಿ ಉಂಟಾದ ನಾಚಿಕೆಯಿಂದಲೋ ಅಥವಾ ತಮ್ಮ ಕವನದ ಸಾಲೊಂದನ್ನು ಕಟು(ಕ) ವಿಮರ್ಶಕನೆಂದೇ (ಕುಕವಿಗಳ ಮಧ್ಯೆ) ಕುಪ್ರಸಿದ್ಧನಾದ ವಿಮರ್ಶಕನೊಬ್ಬ ಇಷ್ಟು ವರ್ಷಗಳ ನಂತರವೂ ನೆನಪಿಟ್ಟುಕೊಂಡಿದ್ದರ ಬಗೆಗಿನ ಖುಷಿಯಿಂದಲೋ ಅವರಿಗೇ ವಿಶಿಷ್ಟವಾದ 'ಹೋ ಹೋ!' ನಗೆ ಮತ್ತೆ ಅವರಿಂದ ಸ್ಫೋಟಿಸಿತು.

ಚೊಕ್ಕಾಡಿಯವರು ನಂತರ ಎಷ್ಟೋ ಕವನ ಸಂಕಲನಗಳನ್ನು ಪ್ರಕಟಿಸಿದರು. ಅವೆಲ್ಲವೂ ದಟ್ಟ ನವ್ಯದ ವಾಸನೆಯಿಂದಲೇ ತುಂಬಿದ್ದವು. ಅಷ್ಟು ನಿಷ್ಠೆ ಅವರಿಗೆ ತಮಗೆ ಕಾವ್ಯ ದೀಕ್ಷೆ ನೀಡಿದ ಕಾವ್ಯ ಪಂಥಕ್ಕೆ! ಆ ಸಂದರ್ಭದಲ್ಲೊಮ್ಮೆ ನಾನು ಸಮಕಾಲೀನ ಸಾಹಿತ್ಯ ಕುರಿತ ವಿಚಾರ ಸಂಕಿರಣವೊಂದರಲ್ಲಿ ಅವರನ್ನು 'ಈಗಲೂ ನವ್ಯದ ಹಾಳುಬಾವಿಯಲ್ಲಿ ಈಜುತ್ತಿರುವ ಸುಂದರ ಆಮೆ' ಎಂದು ವರ್ಣಿಸಿದ್ದೆ. ಆ ವರ್ಣನೆಯನ್ನು ಇಷ್ಟಪಟ್ಟಿದ್ದ ಅವರು ಈಗಲೂ ಆಕಸ್ಮಿಕವಾಗಿ ಸಿಕ್ಕಾಗ, 'ನಾನು ಸ್ವಾಮೀ, ನವ್ಯ ಕಾವ್ಯದ ಹಾಳು ಬಾವಿಯ ಸುಂದರ ಆಮೆ!' ಎಂದು ತಬ್ಬಿಕೊಳ್ಳುತ್ತಾರೆ. ಇದಕ್ಕೆ ಪ್ರತಿಯಾಗಿ ನಾನೂ 'ಹೌದಲ್ಲಾ! ಆಮೆಗೆ ಬಹಳ ಆಯಸ್ಸು ಎಂಬುದೀಗ ಸಾಬೀತಾಯಿತು! ಆದರೆ ಸುಂದರವಾಗೇನೂ ಉಳಿದಂತೆ ಕಾಣುವುದಿಲ್ಲವಲ್ಲ?' ಎಂದು ಕಿಚಾಯಿಸುವೆ. ಆದರೆ ವಾಸ್ತವವಾಗಿ ಅವರು ಇತ್ತೀಚಿನ ವರ್ಷಗಳಲ್ಲಿ ಆ ಹಾಳು ಬಾವಿಯಿಂದ ಈಚೆ ಬಂದು ಮುಕ್ತ ಗಾಳಿಯಲ್ಲಿ ಕವನಗಳನ್ನಷ್ಟೇ ಅಲ್ಲ, ಕಾದಂಬರಿ– ವಿಮರ್ಶೆಗಳನ್ನು ಬರೆದಿದ್ದಾರೆ.

ನಾನು ಮಡಿಕೇರಿಯಲ್ಲಿದ್ದಾಗ ಸುಳ್ಯದ ಬಳಿಯ ಅವರೂರಿನಲ್ಲಿ ಅವರ ಸಣ್ಣ ಗೆಳೆಯರ ಬಳಗ ಕಟ್ಟಿಕೊಂಡಿದ್ದ 'ಸುಮನಸಾ' ವೇದಿಕೆಯ ಸಹಯೋಗದಲ್ಲಿ ನಡೆದ ಹೋಬಳಿ ಮಟ್ಟದ ಸಾಹಿತ್ಯ ಸಮ್ಮೇಳನಕ್ಕೆ ಗೆಳೆಯರೊಂದಿಗೆ ಹೋಗಿದ್ದೆ. ಆ ಸಣ್ಣ ಊರಿನಲ್ಲೂ ಆ ಜನರದ್ದು ಎಂತಹ ಸಾಹಿತ್ಯ ಸಂಭ್ರಮ! ಕಾಡಿನ ಮಧ್ಯದ ಅಡಿಕೆ ತೋಟಗಳ ಈ ಸುಂದರ ಪರಿಸರ ಬಿಟ್ಟು, ಬಹುತೇಕ ನವ್ಯ ಸಾಹಿತಿಗಳಂತೆ ಸಾಹಿತ್ಯ ರಾಜಕಾರಣದ ಹೊರ ಅಂಗಳದ ತರಲೆಗಳಿಗೆ ಇಳಿಯದೆ ಶಾಲಾ ಮಾಸ್ತರರ ವೃತ್ತಿಯಲ್ಲೇ ತೃಪ್ತಿಪಟ್ಟುಕೊಂಡು ತಮ್ಮ ಪಾಡಿಗೆ ತಾವು ಬರೆಯುತ್ತಿರುವ ಸುಬ್ರಾಯ ಚೊಕ್ಕಾಡಿ ಅವರನ್ನು ಈ ಸಣ್ಣ ಹಳ್ಳಿ ಜಗತ್ತೇ ಕಾಪಾಡಿ ಎಂಬತ್ತರ ಹರೆಯವನ್ನು ಮುಟ್ಟಿಸಿದೆ. ಸುಬ್ರಾಯರಿಗೆ ಮತ್ತೊಮ್ಮೆ ೮೦ರ ಶುಭಾಶಯಗಳು!

–ಡಿಎಸ್ಸೆನ್

ಧರ್ಮವಿಚಾರ ಪುಟ

# ಶೃಂಗೇರಿ ಮಠದ ಓರ್ವ ವಿಭಿನ್ನ ಪೀಠಾಧಿಪತಿ

–ಡಿ.ಎಸ್. ನಾಗಭೂಷಣ



ಏಳನೇ ಶತಮಾನದಲ್ಲಿ ಆದಿ ಶಂಕರಾಚಾರ್ಯರಿಂದ ಸ್ಥಾಪಿತವಾದದ್ದೆಂಬ ಪ್ರತೀತಿ ಇರುವ ಶೃಂಗೇರಿ ಶಾರದಾ ಪೀಠಕ್ಕೆ ಈವರೆಗೆ ನೂರಾರು ಪೀಠಾಧಿಪತಿಗಳು ಆಗಿ ಹೋಗಿದ್ದರೂ, ಶ್ರೀ ಚಂದ್ರಶೇಖರಭಾರತಿ ಸ್ವಾಮೀಜಿಯವರಷ್ಟು(೧೮೯೨–೧೯೫೪) ಆಧುನಿಕ ಕಾಲಮಾನದ ಜನಮನದಲ್ಲಿ ಅವರ ಅಧ್ಯಾತ್ಮಿಕ ಸಂಪನ್ನತೆಗಾಗಿ ನೆಲೆಗೊಂಡವರು ಬಹಳ ಕಡಿಮೆ. ಬದುಕಿದ್ದಾಗಲೇ ಜೀವನ್ಮುಕ್ತರೆಂದು ಅವರ ಭಕ್ತರಿಂದ ಗುರುತಿಸಲ್ಪಟ್ಟಿದ್ದ ಸ್ವಾಮೀಜಿ ಪೀಠದ ಅಧಿಪತಿಗಳಾಗಿ(೧೯೧೨) ಇದ್ದುದು ಔಪಚಾರಿಕವಾಗಿ ಮಾತ್ರ. ಎಲ್ಲ ಅಧಿಕಾರವನ್ನೂ ಮಠದ ಸರ್ವಾಧಿಕಾರಿಗಳಿಗೆ ಬಿಟ್ಟುಕೊಟ್ಟಿದ್ದ ಅವರು ಪೀಠಾರೋಹಣ ಮಾಡಿದ ಹದಿನೆಂಟು ವರ್ಷಗಳಲ್ಲೇ ಶಿಷ್ಯಪರಿಗ್ರಹ ಮಾಡಿಕೊಂಡು ಆ ಶಿಷ್ಯನಿಗೆ ಪೀಠಾಧಿಪತ್ಯದ ಎಲ್ಲ ಜವಾಬ್ದಾರಿಗಳನ್ನೂ ವಹಿಸಿ(೧೯೩೬) ತಾವು ಇಚ್ಛಾಮರಣಿಯಾಗುವ ಕಾಲದವರೆಗೆ ಪೂರ್ಣ ಅಧ್ಯಾತ್ಮಿಕ ಸಾಧನೆಯಲ್ಲಿ ತೊಡಗಿಕೊಂಡಿದ್ದವರು. ಪೀಠಾಧಿಪತಿಯಾಗಿದ್ದಾಗಲೂ ಮಠದ ಔಪಚಾರಿಕತೆಗಳಾದ ಪೂಜೆ–ಅಭಿಷೇಕ–ಪಟ್ಟಾಧಿಕಾರ–ಪೀಠಾರೋಹಣ–ಉತ್ಸವ–ರಾಜಮೆರವಣಿಗೆ ಇತ್ಯಾದಿಗಳಲ್ಲಾಗಲೀ, ಮಠದ ಸಂಪದಭಿವೃದ್ಧಿಯ ಚಟುವಟಿಕೆಗಳ ಬಗ್ಗೆ ಔದಾಸೀನ್ಯವನ್ನೇ ತಾಳಿದ್ದ ಅವರನ್ನು ಮಠಾಧಿಕಾರಿಗಳು ಮಾನಸಿಕ ಅಸ್ವಸ್ಥರಂತೇ ಕಂಡದ್ದು ಆಶ್ಚರ್ಯವಲ್ಲ. ಅವಧೂತ ಪ್ರವೃತ್ತಿ ಈ ಪೀಠ ಪರಂಪರೆಗೆ ಹೊಸದೇ ಆಗಿದ್ದಿರಬಹುದು.

ಚಂದ್ರಶೇಖರ ಭಾರತಿಯವರು ಅದ್ವೈತ ಸಿದ್ಧಾಂತ ಮತ್ತು ಅದರ ಅನುಷ್ಠಾನದಲ್ಲಿ ಪರಿಶ್ರಮ ಹೊಂದಿದವರಾಗಿದ್ದರೂ, ಅವರಿಗೆ ಅದೊಂದು ಬಂಧನವಾಗಿರಲಿಲ್ಲ.. ತಮಗೆ ವೇದ ವಿದ್ಯಾಭ್ಯಾಸದ ಗುರುಗಳಾಗಿದ್ದ ಹಾನಗಲ್ಲು ವಿರೂಪಾಕ್ಷಶಾಸ್ತ್ರಿಗಳ ಗರಡಿಯಲ್ಲಿ ಬೆಳೆದವರಾಗಿ ಅದ್ವೈತವನ್ನು ಒಂದು ಮತೀಯ ಪಂಥವಾಗಿ ಸಂಕುಚಿತವಾಗಿ ನೋಡಿದವರಲ್ಲವೆಂಬುದು ಅವರ ಬದುಕಿನ ಹಲವು ಸಂಗತಿಗಳು ಸಾಬೀತುಪಡಿಸುತ್ತವೆ. ಮುಖ್ಯವಾಗಿ, ತಮ್ಮನ್ನು ವೈದಿಕ ಪಾಠಶಾಲೆಗೆ ಸೇರುವಂತೆ ಮಾಡಿ ಮುಂದೆ ಪೀಠಾಧಿಪತಿಯನ್ನಾಗಿ ಆಯ್ದ ನೃಸಿಂಹ ಭಾರತಿಯವರು ತಮ್ಮನ್ನು ಬೆಂಗಳೂರಿನ ಶಂಕರಮಠದ ವೇದ ಪಾಠಶಾಲೆಗೆ ಕಳಿಸುವಾಗ ಆಶೀರ್ವಾದ ರೂಪದಲ್ಲಿ ರಚಿಸಿ ಉಪದೇಶಿಸಿದ್ದ ಈ ಅರ್ಥದ ಸಂಸ್ಕೃತ ಶ್ಲೋಕವೇ ಅವರ ಬದುಕಿನ ಮಾರ್ಗದರ್ಶಿಯಾಗಿತ್ತು: 'ಸಂಸಾರವೆಂಬ ನದಿಯನ್ನು ದಾಟುವ ಬಯಕೆ ನಿನಗಿದ್ದರೆ, ಹಿತವನ್ನುಂಟು ಮಾಡುವ, ಉಪನಿಷತ್ತಿನ ಉಪದೇಶಗಳಿಗೆ ಹೊಂದಿಕೊಳ್ಳುವ ನನ್ನ ಈ ಮಾತನ್ನು ಕೇಳು. ತಲೆ ಬೋಳಿಸಿಕೊಂಡು, ಜನಿವಾರವನ್ನು ಕಿತ್ತೆಸೆದ ಸಂನ್ಯಾಸಿಯಾಗಿ ಶ್ರದ್ಧಾಭಕ್ತಿನಿರತನಾಗಿ ಸಾಧನ ಚತುಷ್ಟಯಗಳ ಮೂಲಕ ಗುರುವಿನ ಮಾತಿನಂತೆ ಆತ್ಮನನ್ನು ಅರಸು'. ಅವರು ತಮ್ಮ ಬಳಿಗೆ ಬಂದವರಿಗೆ ಬೋಧಿಸಿದ್ದೂ ಇದನ್ನೆ

. ಅವರು ಈ ಸಾಧನೆಯ ಚಿಹ್ನೆಯಾಗಿ ಕಾಣುತ್ತಿದ್ದುದು ಯಾರದೇ ಪಾಠ ಪಾಂಡಿತ್ಯವನ್ನಲ್ಲ. ಬದಲಿಗೆ ಅನುಷ್ಠಾನ ಚಿಹ್ನೆಗಳನ್ನು, ಸ್ವಾಮೀಜಿ ಏಕಾಂತ ಬಯಸಿ ಮಠ ಬಿಟ್ಟು ಎಲ್ಲಿ ಹೋದರೂ ತಮ್ಮನ್ನು ಮುತ್ತುತ್ತಿದ್ದ ಭಕ್ತಸಮೂಹದ ದರ್ಶನಕಾಂಕ್ಷೆಯಿಂದ ವಿಚಲಿತರಾಗುತ್ತಿದ್ದರು. ಇದನ್ನು ಅವರು ವಿವರಿಸುತ್ತಿದ್ದುದು ಹೀಗೆ: ಜನ ಬರುವುದು ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ಆಶೀರ್ವಾದ ಪಡೆಯಲು. ಆ ಶಕ್ತಿ ನನಗಿಲ್ಲ. ನನ್ನ ದರ್ಶನ ಬಯಸಿ ಬರುವವರು ಹೆಚ್ಚಾಗಿ ನಾನು ಕೂತಿರುವ ಪೀಠದ ಮೇಲಿನ ಗೌರವದಿಂದ. ಈ ಪೀಠದ ಮೇಲೆ ಯಾರು ಕೂತರೂ ಅವರು ಬರುತ್ತಾರೆ,. ನಿಜಬಾಗಿ ನನ್ನನ್ನೇ ಕಾಣಲು ಬಯಸುವವರು ಹೇಗಾದರೂ ನನ್ನನ್ನು ಕಂಡೇ ಕಾಣುವ, ಮಾತಾಡುವ ಸಂದರ್ಭ ಒದಗುತ್ತದೆ. ಹಿರಿಯ ಭಕ್ತರೊಬ್ಬರು. ಲೋಕೋದ್ಧಾರಕ್ಕಾಗಿ ತಮ್ಮನ್ನು ಸಮರ್ಪಿಸಿಕೊಳ್ಳಬಯಸುವುದಾಗಿ ಹೇಳಿಕೊಂಡು ಅವರ ಆಶೀರ್ವಾದ ಬೇಡಿ ಬಂದಾಗ ಅವರ ಅಧ್ಯಯನದ ವಿವರ ಕೇಳಿದ ಸ್ವಾಮಿಗಳು ಅವರಿಗೆ 'ಮೊದಲು ನಿಮ್ಮ ಉದ್ಧಾರವಾಗಿದೆಯೇ ನೋಡಿಕೊಳ್ಳಿ, ಆಗ ಹಸಿವೇ ಇಲ್ಲದ ಜನರಿಗೆ ಹಸಿವು ನಿವಾರಿಸಿಕೊಳ್ಳುವುದರ ಬಗ್ಗೆ ಪ್ರವಚನ ನೀಡುವ ಅಸಾಂಗತ್ಯ ನಿಮ್ಮ ಅರಿವಿಗೆ ಬರುತ್ತದೆ' ಎಂದು ಸಲಹೆ ನೀಡಿದರು..

ಟಿಪ್ಪುವನ್ನು ಹಿಂದೂ ವಿರೋಧಿ ಅಥವಾ ಮುಸ್ಲಿಂ ಮತಾಂಧ ಎಂದು ಕರೆಯಲು ನಿರಾಕರಿಸುವ ಸ್ವಾಮಿಗಳು ಹಿಂದೂಗಳಾಗಿದ್ದ ಮರಾಠರು ಶೃಂಗೇರಿ ಮಠವನ್ನು ಲೂಟಿ ಮಾಡಿದಾಗ ಹೈದರಾಬಾದ್‌ನ ನಿಜಾಮ ಮತ್ತು ಮೈಸೂರಿನ ಟಿಪ್ಪು ಮಠಕ್ಕೆ ಅಮೂಲ್ಯ ಕೊಡುಗೆಗಳಿಂದ ನೆರವಾದುದನ್ನು ನೆನಪಿಸುತ್ತಾ, ಟಿಪ್ಪು ತನ್ನ ಒಂದು ರಾಜ್ಯದ ದೊರೆಯಾಗಿ ರಾಜಧರ್ಮ ಪಾಲನೆ ಮಾಡಿದನಷ್ಟೆ ಎಂದು ವಿವರಿಸುತ್ತಾರೆ. ಅದ್ವೈತ ಸಿದ್ಧಾಂತ ಪಂಡಿತರೊಬ್ಬರು ಅನ್ಯಮತ ಖಂಡನೆಯ ವಿದ್ವತ್ಪೂರ್ಣ ಗ್ರಂಥ ರಚಿಸಿ ತಂದೊಪ್ಪಿಸಿ ಆಶೀರ್ವಾದ ಬೇಡಿದಾಗ, 'ಇತರರ ನಂಬಿಕೆಗೆ ಘಾತ ಉಂಟು ಮಾಡುವ ಈ ಪಂಡಿತ ಕಸರತ್ತುಗಳೇಕೆ ಕಾಲ ವ್ಯರ್ಥ ಮಾಡುವಿರಿ? ನೀವು ನಂಬಿದ ವಿಚಾರ ಪಥದಲ್ಲಿ ಸಾಧನೆ ಮಾಡಿ ನಿಮ್ಮನ್ನು ನೀವು ಶುದ್ಧಿ ಮಾಡಿಕೊಳ್ಳಿ' ಎಂದು ಸಲಹೆ ನೀಡಿ ಕಳಿಸಿದರು. . ಇನ್ನು ಅವರ ಅವಧೂತ ಪ್ರವೃತ್ತಿಯನ್ನು ಅಸ್ವಸ್ಥತೆಯೆಂದು ತಿಳಿದು ಅದರ ಚಿಕಿತ್ಸೆಗಾಗಿ ಮಠದ ಸರ್ವಾಧಿಕಾರಿಗಳ ಕರೆಯ ಮೇರೆಗೆ ಬಂದು ತಾವು ಮಾಧ್ವರಾಗಿದ್ದರೂ ಸ್ಮಾರ್ತರಂತೆ ಭಸ್ಮ ವಿಭೂತಿ ಧರಿಸಿ ಭಕ್ತವೃಂದದ ಮಧ್ಯೆ ಮಾರುವೇಷದಲ್ಲಿದ್ದು ಸ್ವಾಮಿಗಳ: ವರ್ತನೆಯನ್ನು ಅಭ್ಯಸಿಸುತ್ತಿದ್ದ ಮಾನಸಿಕ ರೋಗತಜ್ಞ ಡಾ.ಗೋಂವಿದಸ್ವಾಮಿಯವರು ತಮ್ಮ 'ಅಭ್ಯಾಸ' ಮುಗಿಸಿ ಹೋಗುವ ಮುನ್ನ ತೀರ್ಥಕ್ಕೆ ಕೈವೊಡ್ಡಿದಾಗ ಸ್ವಾಮಿಗಳು ಅವರನ್ನು ಬೆಚ್ಚಿ ಬೀಳಿಸಿದ್ದು ಈ ಮಾತುಗಳಿಂದ: 'ಬಂದ ಕೆಲಸ ಪೂರ್ಣವಾಯಿತೇ ಗೋವಿಂದಸ್ವಾಮಿಯವರೇ? ಇದೇನು ಭಸ್ಮ ವಿಭೂತಿ ಧಾರಣೆ? ನೀವು ಮಾಧ್ವರಾಗಿ ಇಂತಹುದಕ್ಕೆಲ್ಲ ನಿಮ್ಮ ಆಚಾರ–ವಿಚಾರಗಳನ್ನು ಬಿಡಬಾರದು!'

ಚಂದ್ರಶೇಖರ ಭಾರತಿಯವರ ನುಡಿಗಳಂತೆ ಅವರ ನಡೆಯಲ್ಲಿಯೂ ಅವಧೂತತನವಿತ್ತು. ಒಮ್ಮೆ ಬೆಂಗಳೂರಿನ ಶಂಕರಮಠದಲ್ಲಿ ಸ್ವಾಮಿಗಳು ಭಕ್ತ ಸಮೂಹಕ್ಕೆ ತೀರ್ಥ ನೀಡುತ್ತಿದ್ದಾಗ ದೂರದಲ್ಲಿ ಒಬ್ಬ ಮಹಿಳೆ ಕಂಭಕ್ಕೊರಗಿ ಅಳುತ್ತಿರುವುದು ಕಂಡರು. ಇದೇಕೆಂದು ವಿಚಾರಿಸಿದಾಗ ಸಕೇಶಿಯಾದ ಆ ವಿಧವೆ ಮಠದ ನಿಯಮಗಳ ಪ್ರಕಾರ ತೀರ್ಥಕ್ಕೆ ತಾನು ಅನರ್ಹವಾಗಿರುವ ಅಸಹಾಯಕತೆ ಆಕೆಯ ದುಃಖಕ್ಕೆ ಕಾರಣವೆಂದು ಗೊತ್ತಾಯಿತು. ಕೂಡಲೇ ಸ್ವಾಮಿ ಆ ವಿಧವೆಯನ್ನು ತಮ್ಮ ಬಳಿಗೆ ಕರೆಸಿ ತೀರ್ಥ ಪ್ರದಾನ ಮಾಡಿ ಕಳಿಸಿದರು. ಶೃಂಗೇರಿಯಲ್ಲಿ ಒಮ್ಮೆ ಭಕ್ತರು ಸ್ವಾಮಿಗಳಿಂದ ತೀರ್ಥ ಪಡೆದು ಎದುರಿಗಿದ್ದ ಹರಿವಾಣಕ್ಕೆ ಮಠಕ್ಕಾಗಿ ತಮ್ಮ ಕೈಲಾದ ಹಣ ಹಾಕಿ ಹೋಗುವ ಸಂದರ್ಭದಲ್ಲಿ ಓರ್ವ ಹಿರಿಯ ವಯಸ್ಸಿನ ಭಕ್ತರು ತೀರ್ಥ ಪಡೆದು ಮುಖ ಮುಚ್ಚಿ ಸುಮ್ಮನೆ ಅಳತೊಡಗಿದಾಗ ಸ್ವಾಮಿ ಅದೇಕೆಂದು ವಿಚಾರಿಸಿದರು. ಆ ಹಿರಿಯರು ತಮಗೆ ಅವಿವಾಹಿತ ಮಗಳಿದ್ದು ಬಡತನದಿಂದಾಗಿ ಅವಳ ಮದುವೆ ಮಾಡಲಾಗದೆ ಅಸಹಾಯಕನಾಗಿದ್ದು ಮದುವೆ ನೆರವೇರುವಂತೆತೆ ಸ್ವಾಮಿಗಳ ಆಶೀರ್ವಾದ ಬೇಕಾಗಿದೆ ಎಂದಾಗ ಎಲ್ಲ ಅರ್ಥ ಮಾಡಿಕೊಂಡ ಸ್ವಾಮಿಗಳು ಮಠದ ಸಹಾಯಕನನ್ನು ಕರೆದು ಎದುರಿಗಿದ್ದ ಹರಿವಾಣದಲ್ಲಿ ಸಂಗ್ರಹವಾಗಿದ್ದ ಎಲ್ಲ ಹಣವನ್ನೂ ಆ ಹಿರಿಯ ಭಕ್ತರಿಗೆ ನೀಡುವಂತೆ ಸೂಚಿಸಿದರು. ಮಠದ ಆಧಿಕಾರಿಗಳು ತಬ್ಬಿಬ್ಬಾದರೂ ಸ್ವಾಮಿಗಳ ಸೂಚನೆಯನ್ನು ಆಲಿಸಲೇ ಬೇಕಾಯಿತು. ಮಠದ ಉಂಬಳಿಗಳನ್ನು ವಶ ಮಾಡಿಸಿಕೊಳ್ಳುವ ರಾಜ್ಯ ಸರ್ಕಾರದ ಶಾಸನ ಜಾರಿಗೆ ಬಂದಾಗ ಅದೇ ಸಂದರ್ಭದಲ್ಲಿ ಮಠಕ್ಕೆ ಭೇಟಿ ನೀಡಿದ್ದ ರಾಷ್ಟ್ರಪತಿ ರಾಜೇಂದ್ರ ಪ್ರಸಾದರೊಂದಿಗೆ ಮಾತನಾಡಿ ಮಠದ ಆಸ್ತಿ ಉಳಿಸಿಕೊಳ್ಳುವ ಪ್ರಯತ್ನ ಮಾಡಬೇಕೆಂಬ ಮಠಾಧಿಕಾರಿಗಳ ಸಲಹೆಯನ್ನು 'ಮಠ ಸ್ಥಾಪಿಸಿದ ಶಂಕರಾಚಾರ್ಯರೇನು ಉಂಬಳಿ ನಂಬಿ ಮಠ ಸ್ಥಾಪಿಸಿದರೆ?' ಎಂದು ಪ್ರಶ್ನಿಸಿ ಸುಮ್ಮನಿರಿಸಿದರು.. ರಾಷ್ಟ್ರಪತಿಗಳೊಂದಿಗೆ ಆ ಬಗ್ಗೆ ಚಕಾರವೆತ್ತಲಿಲ್ಲ.

ಹೀಗೆ ತಮ್ಮ ನಡೆನುಡಿಗಳೆರಡರಲ್ಲೂ ಮಠ ವ್ಯವಸ್ಥೆಯನ್ನು ತಬ್ಬಿಬ್ಬುಗೊಳಿಸುತ್ತಲೇ ಶೃಂಗೇರಿ ಪೀಠದ ಸಾಂಪ್ರದಾಯಿಕ ಪರಂಪರೆಗೊಂದು ಅವಧೂತ ಸ್ಪರ್ಶ ನೀಡಿದ ಶ್ರೀ ಚಂದ್ರಶೇಖರ ಭಾರತಿಯವರು ತಮ್ಮ ಮರಣದಲ್ಲೂ ಅದನ್ನೇ ಸಾಧಿಸಿದರು. ಯಾರಿಗೂ ಏನೂ ಸೂಚನೆ ನೀಡದೆ ೧೯೫೪ರ ಸೆಪ್ಟಂಬರ್ ೨೬ರ ಬೆಳಗಿನ ಝಾವ ತಮ್ಮ ಸಹಾಯಕನನ್ನೆಬ್ಬಿಸಿಕೊಂಡು ತುಂಗಾನದಿಗೆ ಸ್ನಾನಕ್ಕೆ ಹೋದ ಅವರು ನದಿಯ ಬಂಡೆಯೊಂದರ ಮೇಲೆ ಪದ್ಮಾಸನ ಹಾಕಿ ಧ್ಯಾನಕ್ಕೆ ಕೂತವರು ಆ ಆಸನ ಭಂಗಿಯಲ್ಲೇ ನದಿಗೆ ಬಿದ್ದು ಅದರ ಸೆಳವಿನಲ್ಲಿ ತೇಲುತ್ತಾ ಹೋಗಿದ್ದರು. ಪ್ರಾಣ ಬಂಧನ ಮಾಡಿಕೊಂಡಿದ್ದರಿಂದಾಗಿ ಒಳಕ್ಕೆ ನೀರು ಹೋಗಿರದ ಅವರ ಕಳೇಬರವನ್ನು ನದಿಯ ದಡಕ್ಕೆ ತಂದು ಸಮಾಧಿ ಮಾಡಲಾಯಿತು.

**(ಆಧಾರ: ಸಾ.ಕೃ. ರಾಮಚಂದ್ರ ರಾವ್ ಅವರ *ಶ್ರೀ ಶಾರದಾ ಪೀಠದ ಮಾಣಿಕ್ಯ* ಮತ್ತು ಆರ್. ಕೃಷ್ಣಸ್ವಾಮಿ ಅಯ್ಯರ್ ಸಂಗ್ರಹಿಸಿರುವ *'ಡೈಲಾಗ ವಿತ್ ದ ಗುರು'*)**

## ಪುಸ್ತಕಾವಲೋಕನ

ಪು: **ರಾಮಾಯಣ: ಒಂದು ಹೊಸ ಓದು** ಲೇ: **ಎನ್.ಆರ್. ನಾವಲೇಕರ್** ಇಂಗ್ಲಿಷ್‌ನಿಂದ ಕನ್ನಡಕ್ಕೆ: **ಡಾ. ಟಿ.ಎನ್. ವಾಸುದೇವಮೂರ್ತಿ** ಪ್ರ: **ಗೋಮಿನಿ ಪ್ರಕಾಶನ**, ತುಮಕೂರು. (೯೪೮೬೭೯೨೩೪೨) ಪು: **೨೨೮** ಬೆ: **ರೂ.೨೦೦/–**

### ರಾಮಾಯಣದ ರಾಷ್ಟ್ರವಾದೀಕರಣ



**‘ತಿ**ಣುಕಿದನು ಫಣಿರಾಯ ರಾಮಾಯಣ ಕವಿಗಳ ಭಾರದಲಿ’ ಎಂಬ ಮಾತನ್ನು ಗೊಣಗುತ್ತಲೇ ತಮ್ಮದೇ ಲೋಕದೃಷ್ಟಿಯ ಹೊಸ ರಾಮಾಯಣಗಳನ್ನು ಕವಿಗಳು ಬರೆಯುತ್ತಲೇ ಇದ್ದಾರೆ;ಹೊಸ ವ್ಯಾಖ್ಯಾಗಳನ್ನು ಕೊಡುತ್ತಲೇ ಇದ್ದಾರೆ ರಾಮಾಯಣದ ಆಯ್ದ ಸನ್ನಿವೇಶಗಳನ್ನು ಲೇಖಕರು A new approach to Ramayana ಎನ್ನುತ್ತಾ ತಮ್ಮದೇ ಆದ ಐತಿಹಾಸಿಕ ದೃಷ್ಟಿಕೋನದಿಂದ ವಿಶ್ಲೇಷಿಸಿರುವ ಅಂತಹ ಒಂದು ವಿಮರ್ಶಾ ಕೃತಿಯಿದು.

ನಾವಲೇಕರ್ ಅವರು ಜಗತ್ತಿನ ಬೇರೆ ಬೇರೆ ವಿದ್ವಾಂಸರ ಅಭಿಪ್ರಾಯಗಳನ್ನು ಅಲ್ಲಲ್ಲಿ ಪ್ರಸ್ತಾಪಿಸುತ್ತಾ, ಪ್ರತಿಕ್ರಿಯಿಸುತ್ತಾ ಹೋಗಿರುವುದು ಕೃತಿಗೆ ಒಂದು ವ್ಯಾಪಕ ಆಯಾಮ ದೊರೆಕಿಸಿದೆ. ಆರ್ಯರ ಮೂಲ ನೆಲೆ ಯಾವುದೆಂಬ ಬಗ್ಗೆ ಭಿನ್ನಾಭಿಪ್ರಾಯಗಳುಂಟೇ ವಿನಃ ಆರ್ಯರು ಇಲ್ಲಿನ ಮೂಲನಿವಾಸಿಗಳಲ್ಲ, ಹೊರಗಿನಿಂದ ಬಂದವರು ಎಂಬ ಬಗ್ಗೆ ವಿದ್ವಾಂಸರ ನಡುವೆ ಅಭಿಪ್ರಾಯ ಭೇದವಿಲ್ಲವೆನ್ನುತ್ತಾರೆ. ರಾಕ್ಷಸ, ಅಸುರ, ದೈತ್ಯ, ದಾನವ ಇವೆಲ್ಲಾ ಭಾರತದ ಮೂಲನಿವಾಸಿಗಳಿಗಿದ್ದ ಬೇರೆ ಬೇರೆ ಹೆಸರುಗಳಾಗಿವೆ. ಒಂದೊಂದು ಬುಡಕಟ್ಟೂ ಒಂದೊಂದು ಹೆಸರನ್ನು ಹೊಂದಿದ್ದು ಕಾಲಾಂತರದಲ್ಲಿ ಆರ್ಯರು ಎಲ್ಲ ಬುಡಕಟ್ಟುಗಳನ್ನೂ ಸಮಾನವಾಗಿ ಮೇಲಿನ ಹೆಸರುಗಳಿಂದ ಕರೆದಿರಬಹುದೆಂದೂ ಮತ್ತು ಆರ್ಯರ ಆಕ್ರಮಣ ಹೆಚ್ಚಾದಂತೆ ಸಹಜವಾಗಿ ಬುಡಕಟ್ಟಿನವರು ಆರ್ಯರನ್ನು ದ್ವೇಷಿಸತೊಡಗಿದರೆಂದು ಸರಿಯಾಗಿಯೇ ಗುರುತಿಸುತ್ತಾರೆ. ಆದರೆ ದ್ರಾವಿಡರ ಹೆಸರನ್ನು ಇಲ್ಲಿ ಯಾಕೋ ಪ್ರಸ್ತಾಪಿಸುವುದಿಲ್ಲ. ಲೇಖಕರ ರಾಷ್ಟ್ರೀಯವಾದದ ತುಡಿತವೆ ಈ ಕೃತಿಗೆ ಕಾರಣವಾಗಿರುವ ಸಾಧ್ಯತೆಗಳು ಇಲ್ಲಿ ಸ್ಪಷ್ಟವಾಗಿ ಗೋಚರಿಸುತ್ತವೆ: “ನನ್ನ ಪ್ರಕಾರ ರಾಷ್ಟ್ರೀಯ ನೆಲೆಯಲ್ಲಿ ಶ್ರೀರಾಮನ ಹಿರಿಮೆ ಏನೆಂಬುದು ವಾಲ್ಮೀಕಿಗೆ ಸರಿಯಾಗಿ ಅರ್ಥವಾಗಿತ್ತು. ಅವನಿಗೆ ಶ್ರೀರಾಮ ತನ್ನ ಕುಟುಂಬದವರೊಂದಿಗೆ ಹೇಗೆ ನಡೆದುಕೊಂಡ ಎಂಬುದಕ್ಕಿಂತ ಭಾರತದ ಆರ್ಯ ಸಮುದಾಯಕ್ಕೆ ಏನೆಲ್ಲಾ ಮಾಡಿದ ಎಂಬ ಕಾರಣಕ್ಕೆ ಮುಖ್ಯವಾಗುತ್ತಾನೆ”. ಈ ಮಾತುಗಳು ರಾಮಾಯಣ ಕುರಿತ ಅವರ ದೃಷ್ಟಿಕೋನವನ್ನು ಸೂಚಿಸುತ್ತವೆ.. ಬುದ್ಧನ ಭಿಕ್ಷಾಟನೆಯ ಬದುಕು ಮತ್ತು ವಿರಕ್ತಿಯ ಉಪದೇಶಗಳಿಂದಾಗಿ ಭಾರತದ ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆಯಲ್ಲಿ ಅಲ್ಲೋಲಕಲ್ಲೋಲವಾಯಿತೆಂದೂ ಕನೌಜಿನ ಹರ್ಷವರ್ಧನ ಬೌದ್ಧಧರ್ಮಕ್ಕೆ ಮತಾಂತರವಾದ ಮೇಲೆ ಭಾರತ ಅಸಾಹಾಯಕವಾಗಿ ವಿನಾಶದಹಾದಿ ಹಿಡಿಯಿತೆಂದು ಲೇಖಖರು ಕಳವಳಪಡುತ್ತಾರೆ. ಆದರೆ ಬೌದ್ಧಮತ ಉಚ್ಛ್ರಾಯದಲ್ಲಿರುವಾಗಲೆ ಭಾರತದಲ್ಲಿ ಚಂದ್ರಗುಪ್ತ, ಸಮುದ್ರಗುಪ್ತ, ಅಶೋಕ, ಹರ್ಷವರ್ಧನರಂತಹ ಸಾಮ್ರಾಟರ ಆಳ್ವಿಕೆಯಲ್ಲಿ ಭಾರತ ಸಮೃದ್ಧವಾಗಿದ್ದುದನ್ನು (‘ಚಿನ್ನದ ಯುಗ’) ಗೊತ್ತಿದ್ದೂ ಮರೆಮಾಚುತ್ತಾರೆ. ದೇಶದ ಆಳರಸರು ಯಾವುದನ್ನು ಆಶ್ರಯಿಸಿದರು, ಪ್ರೋತ್ಸಾಹಿಸಿದರು ಎನ್ನುವುದರ ಮೇಲೆ ಆಯಾ ಧರ್ಮಗಳು ಏಳಿಳಿತ ಕಂಡಿರುವುದನ್ನು ಚರಿತ್ರೆ ಬಲ್ಲವರಿಗೆ ಹೇಳಬೇಕಿಲ್ಲ.

‘ಹದಿನಾಲ್ಕು ವರ್ಷಗಳ ವನವಾಸ ರಾಮಾಯಣದ ಬಹುಮುಖ್ಯ ಭಾಗ.... ರಾಮಾಯಣ ಎಂಬ ಪದಕ್ಕೆ ರಾಮನ ಅಲೆದಾಟ ಎಂಬ ಅರ್ಥವಿದೆ.... ರಾಮನ ಕೀರ್ತಿಗೆ ಈ ಅವಧಿಯೆ ಬುನಾದಿಯಾಗಿದೆ.’ ಎಂದು ಸರಿಯಾಗಿಯೆ ಹೇಳುವ ಲೇಖಕರು ವನವಾಸದ ಸಂದರ್ಭವನ್ನು ಅರ್ಥೈಸಿದ್ದು ಮಾತ್ರ ವಿರೋಧಾಭಾಸವಾಗಿದೆ. ರಾಮನು ವನವಾಸಕ್ಕೆ ಹೊರಡುವುದು, ಅಲ್ಲಿ ಋಷಿಮುನಿಗಳನ್ನು ಭೇಟಿಮಾಡುವುದು ಮೊದಲಾದ ಘಟನೆಗಳನ್ನು ರಾವಣನ ವಿರುದ್ಧ ಆರ್ಯರು ರೂಪಿಸಿದ ಸಂಚು ಎಂದಿದ್ದು ಈ ಅಧ್ಯಾಯವನ್ನು ‘ತೆರೆಯ ಹಿಂದೆ’ ಎಂದು ಕರೆಯಲಾಗಿದೆ. “ಮೇಲ್ನೋಟಕ್ಕೆ ಈ ಋಷ್ಯಾಶ್ರಮಗಳು ತಪೋಭೂಮಿಯಂತೆ, ಯಜ್ಞಯಾಗಾದಿಗಳನ್ನು ನೆರವೇರಿಸುವ ದಿವ್ಯಕ್ಷೇತ್ರದಂತೆ ಕಾಣಿಸುತ್ತವೆ. ಆದರೆ ವಾಸ್ತವದಲ್ಲಿ ಇವೆಲ್ಲಾ ಆಯುಧಶಾಲೆಗಳಾಗಿದ್ದವು, ಗುಟ್ಟಾಗಿ ಆಯುಧಗಳನ್ನು ತಯಾರಿಸುವ ಕಾರ್ಖಾನೆಗಳಾಗಿದ್ದವು”! ರಾವಣ ಹತ್ಯೆಯ ಆರ್ಯರ ಪೂರ್ವಯೋಜಿತ ಸಂಚು ಎಂಬ ನಾವಲೇಕರ್ ಅವರ ಉತ್ಪ್ರೇಕ್ಷಿತ ಚಿಂತನೆಯೇ ಈ ವಿರೋಧಾಭಾಸಕ್ಕೆ ಕಾರಣ.

ಇನ್ನು ಶಬರಿಯ ಪ್ರಸಂಗವಂತೂ ಮತ್ತೂ ಹಾಸ್ಯಾಸ್ಪದವಾಗಿದೆ. ರಾಮನಿಗೆ ಸವಿಯಾದ ಹಣ್ಣುಗಳನ್ನು ರುಚಿನೋಡಿ ಕೊಡುವ ಶಬರಿ ಇಲ್ಲಿ ಓರ್ವ ವೃದ್ಧೆಯಾಗಿರದೆ ಯುವತಿಯಾಗಿದ್ದಾಳೆ! ಸೀತೆಯನ್ನು ಅಪಹರಿಸಲು ರಾವಣ ಬರುವನೆಂದು ಮುಂಚೆಯೆ ತಿಳಿದಿದ್ದ ರಾಮನು ಕುಟೀರದಲ್ಲಿ ಸೀತೆಯ ಬದಲು ಶಬರಿಯನ್ನು ಇರಿಸುತ್ತಾನೆ. ಈ ವಿಚಾರವನ್ನು ಲಕ್ಷ್ಮಣನಿಗೂ ತಿಳಿಸದೆ ಮುಚ್ಚಿಡುತ್ತಾನೆ. ಪಾಪ ಅವನು ಸೀತೆಯ ಪಾದವನ್ನು ಮಾತ್ರ ನೋಡುವುದರಿಂದ ಗೊತ್ತೇ ಅಗುವುದಿಲ್ಲ! ಲಂಕೆಯಲ್ಲಿ ಸೀತೆ ಅಗ್ನಿಪ್ರವೇಶ ಮಾಡಬೇಕಾದಾಗ ರಾಮನ ಮೇಲಿನ ಪ್ರೀತಿಯಿಂದಲೇ ಶಬರಿ ಅಗ್ನಿಗೆ ಬಲಿಯಾಗುತ್ತಾಳೆ. ಇತ್ತ ದಂಡಕಾರಣ್ಯದ ಯಾರದೋ ಋಷಿಮುನಿಗಳ ಆಶ್ರಮದಲ್ಲಿ ಅಜ್ಞಾತದಲ್ಲಿದ್ದ ಸೀತೆ ಲಂಕೆಯ ಅಗ್ನಿಕುಂಡದಿಂದ ಹೇಗೆ ಹೊರಬಂದಳೆಂಬುದನ್ನು ಲೇಖಕರು ವಿವರಿಸುವ ಗೋಜಿಗೇ ಹೋಗುವುದಿಲ್ಲ.

ಮತ್ತೂ ಆಶ್ಚರ್ಯದ ಸಂಗತಿಯೆಂದರೆ ಶ್ರೀರಾಮನನ್ನೆ ಕಪಟಿಯನ್ನಾಗಿಸುವ ಈ ಮಾತುಗಳು: “ದಕ್ಷಿಣ ಭಾರತದವರ ಸಹಾನುಭೂತಿ ಗಿಟ್ಟಿಸಲು ಮತ್ತು ರಾವಣನ ವಿರುದ್ಧ ಸಾರ್ವಜನಿಕ ಅಭಿಪ್ರಾಯ ಮೂಡಿಸಲು, ರಾವಣ ತನ್ನ ಹೆಂಡತಿಯನ್ನು ಕದ್ದೊಯ್ದಿರುವನೆಂದು ಅಪಪ್ರಚಾರ ಮಾಡಲಾರಂಭಿಸಿದ. ಪಕ್ಷಿಗಳೊಂದಿಗೆ ಮಾತಾನಾಡುತ್ತ, ಲತೆಗಳನ್ನು ತಬ್ಬಿಕೊಳ್ಳುತ್ತ ನನ್ನ ಸೀತೆ ಎಲ್ಲಿ ಎಂದು ಮರಗಿಡಗಳನ್ನು ವಿಚಾರಿಸುತ್ತ ಹುಚ್ಚುಹಿಡಿದವನಂತೆ ನಾಟಕಾಡಿದ”. ರಾಮಾಯಣವನ್ನು ಅದರ ವಿರೋಧಿಗಳೂ ಈ ಪರಿಯಾಗಿ ಚಿತ್ರಿಸಲಾರರು ಎನಿಸುತ್ತದೆ. ರಾಮನ ಶ್ರೇಷ್ಠತೆಯನ್ನು ಎತ್ತಿ ಹಿಡಿಯುವ ಆತುರದಲ್ಲಿ ಭಕ್ತಾದಿಗಳು ಅವನನ್ನು ಪೂರ್ತಿ ಬೆತ್ತಾಲಾಗಿಸಿದ್ದಾರೆ ಎಂದು ಲೇಖಕರು ಒಂದೆಡೆ ಹೇಳುತ್ತಾರೆ. ಆದರೆ ಈ ಮಾತು ಸ್ವತಃ ಅವರಿಗೇ ಅನ್ವಯಿಸುತ್ತದೆ.

ನಾವಲೇಕರ್ ಅವರ ಈ ಕೃತಿಯಲ್ಲಿ ಒಪ್ಪಲು ಸಾಧ್ಯವಾಗದಿರುವ ಅನೇಕ ವಿಚಾರಗಳಿವೆಯಾದರೂ ಅವರ ಆಳವಾದ ಅಧ್ಯನದ ಪರಿಣಾಮವಾಗಿ ಕೆಲವು ಅಪೂರ್ವ ಒಳನೋಟಗಳು ಓದುಗರಿಗೆ ದೊರೆಯುತ್ತವೆ. ಉದಾ: ಬಿಲ್ಹಣನೆಂಬ ಪ್ರಾಚೀನ ಯುಗದ ಚಿಂತಕ ರಾಮ–ರಾವಣರ ಕುರಿತು “ಇಬ್ಬರೂ ಸಮಾನ ಶಕ್ತರು, ಸಮಾನ ಯೋಗ್ಯರು, ತಮ್ಮ ತಮ್ಮ ಕುಲದ ಏಳಿಗೆಗಾಗಿ ಸಮಾನವಾಗಿ ಶ್ರಮಿಸಿದವರು. ಯೋಗ್ಯತೆಯಲ್ಲಿ ಸರಿಸಮಾನರಾದರೂ ಕೀರ್ತಿಯಲ್ಲಿ ವ್ಯತ್ಯಾಸವಾಯಿತು. ಇದಕ್ಕೆ ಕವಿ ವಾಲ್ಮೀಕಿಯ ಪವಾಡಸದೃಶ ಪ್ರತಿಭೆಯೇ ಕಾರಣ. ಎಲೈ ರಾಜರುಗಳೆ ಕವಿಗಳ ವಿಷಯದಲ್ಲಿ ಎಚ್ಚರದಿಂದಿರಿ. ನೀವು ಏನಾಗಿದ್ದೀರೋ ಅದು ಮುಖ್ಯವಲ್ಲ...... ಅವರ ಕೃತಿಗಳಲ್ಲಿ ನೀವು ಹೇಗೆ ಬಿಂಬಿತರಾಗಿತ್ತೀರೋ ಅದೇ ಪರಮ ಸತ್ಯವಾಗಿ ಕೊನೆತನಕ ಉಳಿದು ಬಿಡುತ್ತದೆ.” ಎಂದಿರುವುದು ಕುತೂಹಲಕರವಾಗಿದೆ. ಇನ್ನು ವಾಸುದೇವಮೂರ್ತಿಯವರ ಅನುವಾದ ಅವರದೇ ಸ್ವತಂತ್ರ ಕೃತಿ ಎನಿಸುವಷ್ಟು ಸೊಗಸಾಗಿದೆ.

**–ಎನ್.ಎಮ್. ಕುಲಕರ್ಣಿ**

ಪು: **ಆಧ್ಯಾತ್ಮಿಕ ಫ್ಯಾಸಿಸ್ಟರು ಬ್ರಾಹ್ಮಣರು, ಇಂಟೆಲೆಕ್ಚುಯಲ್ ಗೂಂಡಾಗಳು,. ಹಿಂದೂ ಧರ್ಮದ ಅಂತರ್ಯುದ್ಧ ಲಕ್ಷಣಗಳು, ಹೊಲೆಯ ತತ್ವ(ಸಾಮಾಜಿಕ, ಆರ್ಥಿಕ ವಿಶ್ಲೇಷಣೆ), ಮಾದಿಗ ತತ್ವ (ಸಾಮಾಜಿಕ, ಆರ್ಥಿಕ ವಿಶ್ಲೇಷಣೆ)**, ಲೇ: **ಪ್ರೊ. ಕಂಚ ಐಲಯ್ಯ** ಕನ್ನಡಕ್ಕೆ: **ಸುಜ್ಞಾನಮೂರ್ತಿ** ಪ್ರ: **ಪರಾಗ ಪುಸ್ತಕ**, ಬೆಂಗಳೂರು (೮೬೬೦೦೪೯೪೨೪) ಪುಟಗಳು: ೩೨ ರಿಂದ ೬೪ ಬೆಲೆ: **ರೂ.** ೬೦/– ರಿಂದ **ರೂ.** ೯೦/–

### ಕುತೂಹಲಕರ ಜಾತಿ ಕಥನಗಳು



**ತ**ನ್ನ ಪ್ರಖರ ವೈಚಾರಿಕ ಚಿಂತನೆ ಮತ್ತು ಸ್ಪಷ್ಟ ನಿಲುವು ಹಾಗೂ ಅದರ ಸರಳ–ನೇರ ನಿರೂಪಣೆಗೆ ಹೆಸರಾದವರು ಚಿಂತಕ ಪ್ರೊ. ಕಂಚ ಐಲಯ್ಯ ಶೆಫರ್ಡ್ ಅವರು. ‘ನಾನೇಕೆ ಹಿಂದೂ ಅಲ್ಲ’ ಕೃತಿಯ ಮೂಲಕ ಗಮನ ಸೆಳೆದ ಕಂಚ ಐಲಯ್ಯ ಅವರು ತೆಲುಗಿನಲ್ಲಿ ರಚಿಸಿದ ಐದು ವೈಚಾರಿಕ ಕಿರು ಪುಸ್ತಿಕೆಗಳನ್ನು ಬಿ. ಸುಜ್ಞಾನಮೂರ್ತಿ ಅವರು ಕನ್ನಡೀಕರಿಸಿದ್ದಾರೆ.ತಮ್ಮ ಟೈಟಲ್‌ಗಳ ಮೂಲಕವೇ ಗಮನ ಸೆಳೆಯುತ ಈ ಐದು ಕೃತಿಗಳು ಒಂದು ಮತ್ತೊಂದಕ್ಕೆ ಪೂರಕವಾಗಿರುವ ಹಾಗೆಯೇ ಸ್ವತಂತ್ರವಾಗಿಯೂ ತನ್ನ ಅಸ್ತಿತ್ವ ಸಾಬೀತು ಪಡಿಸುತ್ತವೆ.

ಹಿಂದೂ ಧರ್ಮದಲ್ಲಿ ಬೌದ್ಧಿಕ ಗುತ್ತಿಗೆ ಪಡೆದಿರುವವರನ್ನು ‘ಬ್ರಾಹ್ಮಣಿಜಂ’ ಎಂಬ ಪದದ ಮೂಲಕ ಕಂಚ ಐಲಯ್ಯ ಅವರು ಗುರುತಿಸುತ್ತಾರೆ. ಕಂಚ ಐಲಯ್ಯ

ಅವರಿಗೆ ಬ್ರಾಹ್ಮಣ್ಯ ಅನ್ನುವುದು ಕೇವಲ ಟೀಕಿಸುವುದಕ್ಕೆ-ತರಾಟೆಗೆ ತೆಗೆದುಕೊಳ್ಳುವುದಕ್ಕಾಗಿ ಮಾತ್ರ ಇರುವ ಸಂಗತಿಯಲ್ಲ. ಅದಕ್ಕೊಂದು ತಾತ್ವಿಕತೆಯಿದೆ. ಆ ತಾತ್ವಿಕತೆಯು ಮೆದುಳಿನಂತೆ ನಿರ್ದೇಶನ ಮಾಡುತ್ತ ಎಲ್ಲವನ್ನೂ ನಿಯಂತ್ರಣದಲ್ಲಿ ಇಟ್ಟುಕೊಳ್ಳಬಯಸುವುದರ ಜೊತೆಗೆ ಶೋಷಕ ವ್ಯವಸ್ಥೆಯನ್ನು ಸೃಷ್ಟಿಸುತ್ತದೆ ಎಂಬ ನಿಲುವು ಈ ಪುಸ್ತಕಗಳಲ್ಲಿದೆ. ಹೀಗಾಗಿ ಮೇಲ್ನೋಟಕ್ಕೆ ಬ್ರಾಹ್ಮಣ ವಿರೋಧಿ ಎಂಬಂತೆ ಭಾಸವಾಗುವ ಈ ಕೃತಿಗಳ ವಿಚಾರಗಳು ಆಳದಲ್ಲಿ ಅಷ್ಟಕ್ಕೇ ಸೀಮಿತವಾಗುವುದಿಲ್ಲ. ಅಥವಾ ಟೀಕೆಗಾಗಿ ಟಿಪ್ಪಣಿ ಮಾಡುವ ಜಾಯಮಾನದ ಬರಹಗಳಲ್ಲ. ಐತಿಹಾಸಿಕ ವಿವರಗಳನ್ನು ವಿಶ್ಲೇಷಣೆಗೆ ಒಳಪಡಿಸುವ ಆಳವಾದ ಚಿಂತನೆಯ ಜೊತೆಗೆ ವಿಶಿಷ್ಟ ತಾತ್ವಿಕತೆ ಕಟ್ಟಿಕೊಡುತ್ತವೆ. ಹಾಗೆಯೇ ತರ್ಕಬದ್ಧ ಹಾಗೂ ವೈಜ್ಞಾನಿಕ ನೋಟಕ್ರಮ ಈ ಪುಸ್ತಕಗಳ ಒಂದು ವಿಶೇಷ ಅಂಶ. ಈ ಪುಸ್ತಕಗಳ ಬರಹಗಳು ಭಾವನಾತ್ಮಕ ಪ್ರತಿಕ್ರಿಯೆಗಳಲ್ಲ. ಹಾಗಾಗದಂತೆ ಲೇಖಕರು ವಹಿಸಿರುವ ಶ್ರಮ-ಪರಿಶ್ರಮ ಸ್ಪಷ್ಟವಾಗಿ ಎದ್ದು ಕಾಣಿಸುತ್ತದೆ.

ಈ ಪುಸ್ತಕದಲ್ಲಿ ಚರ್ಚಿತವಾದ ವಿಷಯ-ವಿಚಾರಗಳು ಶುಷ್ಕ ಅಕಾಡೆಮಿಕ್ ಜ್ಞಾನದ ಬೌದ್ಧಿಕ ಕಸರತ್ತುಗಳಾಗದಂತೆಯೂ ಲೇಖಕರು ಎಚ್ಚರ ವಹಿಸಿದ್ದಾರೆ. ಬ್ರಾಹ್ಮಣ ಕ್ಷತ್ರಿಯ ವೈಶ್ಯ 'ದ್ವಿಜ'ರು ಹಿಂದೂ ಧರ್ಮದ ಆಧ್ಯಾತ್ಮಿಕ ಸಮಾನತೆಯನ್ನು ಶೂದ್ರರಿಗೆ ನಿರಾಕರಿಸುವ ಮೂಲಕ 'ನಿಮಿತ್ತ' ಮಾತ್ರ ಹಾಜರಿಯನ್ನು ದಾಖಲಿಸಲಾಯಿತು. ಅದರಿಂದ ಆತ್ಮಾಶ್ರಯ ವ್ಯಕ್ತಿತ್ವ ಇಲ್ಲದಂತಾದ ಶೂದ್ರ ಸಮುದಾಯವು ತಾತ್ವಿಕ ವ್ಯಕ್ತಿತ್ವ ಬೆಳೆಸಿಕೊಳ್ಳಲಾಗದಂತೆ ನೋಡಿಕೊಳ್ಳಲಾಯಿತು. 'ದೇವಾಲಯ ಎಂಬುದು ಕೇವಲ ಪ್ರಾರ್ಥನಾ ಸ್ಥಳ ಮಾತ್ರವೇ ಅಲ್ಲ. ಅದು ತಾತ್ವಿಕ ಚರ್ಚೆಗಳಿಗೆ ಕೇಂದ್ರ ಕೂಡ. ಸಾಮಾಜಿಕ, ಆರ್ಥಿಕ, ತಾತ್ವಿಕ ಚರ್ಚೆಗಳಲ್ಲಿ ಕೆಲವು ಸಾಮಾಜಿಕ ವರ್ಗಗಳನ್ನು ಪಾಲ್ಗೊಳ್ಳಲು ಬಿಡದಿದ್ದಾಗ ಆ ಸಮಾಜಗಳು ತಾತ್ವಿಕವಾಗಿ ಏಳು ಬೀಳು ಇಲ್ಲದೆ ಹಾಗೆಯೇ ಇದ್ದು ಬಿಡುತ್ತವೆ' ಎನ್ನುವ ಲೇಖಕರು ಇದು 'ಅಸಹಜವಾದ ಜಾತಿ ವ್ಯವಸ್ಥೆಯನ್ನು ಕಾಪಾಡಿಕೊಳ್ಳುವುದಕ್ಕೆ ಅಸಮಾನತೆಯಿಂದ ಕೂಡಿದ ಪ್ರತಿಕೂಲ ತತ್ವ' ಎಂದು ವಿವರಿಸುತ್ತಾರೆ.

'ದೇಸಿ' ತಾತ್ವಿಕತೆಯನ್ನು ಕಟ್ಟಿಕೊಡುವ ದೃಷ್ಟಿಯಿಂದ ಮಹತ್ವದ್ದಾಗಿರುವ ಪುಸ್ತಕಗಳಿವು. ನೆಲಮೂಲದ ಸ್ಥಳೀಯ ಚಟುವಟಿಕೆ- ಆಚರಣೆ-ಪರಂಪರೆಗಳಿಗೆ ತಾತ್ವಿಕ ಚೌಕಟ್ಟು ಒದಗಿಸುವ ಪ್ರಯತ್ನವನ್ನು ಲೇಖಕರು ಮಾಡಿದ್ದಾರೆ.

ಇಲ್ಲಿ ಬಳಕೆಯಾಗುವ ಭಾಷೆಯು ಲೇಖಕರ ಖಚಿತ ನಿಲುವಿನ ಸೂಚನೆಯಾಗಿದೆ. 'ಆಧ್ಯಾತ್ಮಿಕ ಸರ್ವಾಧಿಕಾರಿಗಳು, ಸಾಮಾಜಿಕ ಸ್ಮಗ್ಲರ್‌ಗಳು, ಇಂಟಲೆಕ್ಚುವಲ್ ಗೂಂಡಾಗಳು ಮಾತ್ರ ಶೂದ್ರರ ಸ್ಥಿತಿಯಲ್ಲಿ ಯಾವುದೇ ಬದಲಾವಣೆಯನ್ನು ಅನುಮತಿಸುವುದಿಲ್ಲ' ರೀತಿಯ ವಾಕ್ಯಗಳು ಸ್ಟೇಟ್‌ಮೆಂಟ್‌ಗಳ ತರಹ ಕಾಣಿಸುತ್ತವೆ-ಕೇಳಿಸುತ್ತವೆ. ಹಾಗೆ ಅವು ಕಾಣುವುದು ಕತ್ತರಿಸಿ ಹೊರ ತೆಗೆದಾಗ ಮಾತ್ರ. ವೈಚಾರಿಕ ಸ್ಪಷ್ಟತೆಯು ಇಂತಹ ಪದಗಳನ್ನೂ ಅರಗಿಸಿಕೊಳ್ಳುತ್ತದೆ.

ಕಂಚ ಐಲಯ್ಯ ಅವರ ಈ ಪುಸ್ತಕಗಳು ಸಿದ್ಧಮಾದರಿಯ ಪಾಶ್ಚಾತ್ಯ-ಬ್ರಾಹ್ಮಣ ಚರಿತ್ರೆಯ ಮಾದರಿಯಿಂದ ಬಿಡಿಸಿಕೊಂಡು ಕಟ್ಟಿದ ಜಾತಿಕಥನಗಳು. ಕಂಚ ಐಲಯ್ಯ ಅವರ ಒಳನೋಟಗಳು ಗಮನ ಸೆಳೆಯದೇ ಇರಲಾರವು. 'ಶೂದ್ರರ ತಾತ್ವಿಕತೆ ಕೇವಲ ಸೃಜನಾತ್ಮಕವಾದುದೇ ಅಲ್ಲ; ಮಾನವೀಯವಾದದ್ದು, ಸಮಗ್ರವಾದದ್ದು ಕೂಡ.', 'ಆಧ್ಯಾತ್ಮಿಕ ವ್ಯಕ್ತಿತ್ವವನ್ನು ಗಳಿಸಿಕೊಳ್ಳದೇ ಹೋದದ್ದರಿಂದ ಶೂದ್ರರು ತಾತ್ವಿಕ ವ್ಯಕ್ತಿತ್ವವನ್ನು ಕೂಡ ನಿರ್ಮಿಸಿಕೊಳ್ಳದೇ ಹೋದರು' ಎಂಬ ಖಚಿತತೆ ಕಾಣಬಹುದು. ಈ ಬಗೆಯ ನಿಲುವು ತಳೆಯುವುದಕ್ಕೆ ಲೇಖಕರು ಒಳಗೊಳ್ಳುವ ಚಿಂತನ ಕ್ರಮ ರೂಢಿಸಿಕೊಂಡಿರುವುದು ಕಾರಣ. ಚರಿತ್ರೆ, ಧರ್ಮ, ಆಧ್ಯಾತ್ಮ, ತಾತ್ವಿಕತೆ, ಸಾಮಾಜಿಕ ಸಂಗತಿಗಳನ್ನು ತಮ್ಮ ವಿಚಾರ ಮಂಡಿಸುವುದಕ್ಕೆ ಬಳಸಿಕೊಳ್ಳುವ ಲೇಖಕರ ಕಾಳಜಿ ಸಮ ಸಮಾಜದ ನಿರ್ಮಾಣ ಹಾಗೂ ಶೋಷಕ ವ್ಯವಸ್ಥೆ ನಿರ್ಮೂಲನೆ.

ಹೊಲೆಯ ತತ್ವ ಮತ್ತು ಮಾದಿಗತತ್ವ ಎಂಬ ಎರಡು ಪುಸ್ತಕಗಳು ಸಾಮಾಜಿಕ, ಆರ್ಥಿಕ ವಿಶ್ಲೇಷಣೆಗಳಾಗಿವೆ. ಈ ಎರಡೂ ತತ್ವಗಳಲ್ಲಿದ್ದ ವೈಜ್ಞಾನಿಕ ಜ್ಞಾನದ ಹುಡುಕಾಟ ಮತ್ತು ಅದನ್ನು ಕಟ್ಟಿಕೊಡುವ ವಿಧಾನ ವಿಶಿಷ್ಟವೆನ್ನಿಸುತ್ತದೆ. ಹೊಲೆಯರ ಸಾಗುವಳಿ ನೀರಿನ ಜ್ಞಾನ, ಗೊಬ್ಬರ ತಯಾರಿ ಜ್ಞಾನ ಹಾಗೂ ಚರ್ಮ ಕೈಗಾರಿಕೆ-ಕೃಷಿ ಕ್ರಾಂತಿ, ನೀರಾವರಿ- ಚರ್ಮ ಕೈಗಾರಿಕೆ ಹೀಗೆ ಶ್ರಮ ಸಂಸ್ಕೃತಿಗೆ ತಾತ್ವಿಕತೆಯ ಚೌಕಟ್ಟು ಒದಗಿಸುವ ಲೇಖಕರು ಅವನ್ನು'ಜ್ಞಾನ' ಎಂದು ಗುರುತಿಸುವುದು ವಿಶೇಷ. ಒಂದೇ ಸಿಟ್ಟಿಂಗ್‌ನಲ್ಲಿ ಓದಿ ಮುಗಿಸಬಹುದಾದ ಈ ಪುಸ್ತಕಗಳು ತಮ್ಮ 'ಗಾಢ' ಚಿಂತನೆಯ ಕಾರಣದಿಂದ ಮರುಓದುಗಳನ್ನು ನಿರೀಕ್ಷಿಸುತ್ತವೆ. ಬಿ. ಸುಜ್ಞಾನಮೂರ್ತಿ ಅವರ ಅನುವಾದವು ಸೊಗಸಾಗಿದೆ. ಓದುತ್ತಿರುವುದು ಕನ್ನಡೇತರ ಕೃತಿಯ ಅನುವಾದ ಎನ್ನಿಸದೇ ಇರುವಷ್ಟು ಸಹಜವಾಗಿದೆ. ಇಂತಹ ಅಪರೂಪದ-ಮಹತ್ವದ ವೈಚಾರಿಕ ಕೃತಿಗಳನ್ನು ಕನ್ನಡದಲ್ಲಿಯೇ ಓದುವುದಕ್ಕೆ ಅನುವು ಮಾಡಿಕೊಟ್ಟ ಸುಜ್ಞಾನಮೂರ್ತಿ ಅಭಿನಂದನಾರ್ಹರು.

**-ದೇವು ಪತ್ತಾರ**

ಪು: **ಮಾದಿಗತನ** ಮತ್ತು ಐದು **ಕಿರು ಕಥಾ ಸಂಗ್ರಹಗಳು** ಸಂ: **ಬಿ.ಟಿ. ಬೆಳಗಟ್ಟಿ**
ಪ್ರ: **ಕೆಳಗಳ ಮನೆ ಭೋಸಯ್ಯ ಪುಸ್ತಕ ಮಲೆ** ದಾವಣಗೆರೆ (೯೪೪೯೮೫೨೨೨೮)
ಬೆ: ತಲಾ **ರೂ.೩೦/-**

# ಗಮನಾರ್ಹ ಕಿರು ಪ್ರಕಟಣೆಗಳು




ಇಲ್ಲಿ ಅವಲೋಕನಗೊಳ್ಳುತ್ತಿರುವ ೪೦ರಿಂದ ೬೦ ಪುಟಗಳವರೆಗಿರುವ ಸರಳ ವಿನ್ಯಾಸಗಳ ಆರು ಕಿರುಪುಸ್ತಕಗಳ ಪೈಕಿ ಒಂದು 'ಮಾದಿಗತನ' ಎಂಬ ವೈಚಾರಿಕ ಲೇಖನಗಳ ಪುಸ್ತಕವಾದರೆ ಉಳಿದ ಐದು ಸಂಗ್ರಹಿತ ಕಥೆಗಳ ಸಂಕಲನಗಳು. 'ಮಾದಿಗತನ' ಶೀರ್ಷಿಕೆಯ ಪುಸ್ತಕದಲ್ಲಿ ಮೂರು ಲೇಖನಗಳಿದ್ದು ಅವುಗಳಲ್ಲಿ ಒಂದು ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನ ಮದ್ದಿಹಳ್ಳಿಯ ಊರ ಮಾದಿಗತನದ ಹಕ್ಕಿಗಾಗಿ ೧೯೧೬ರಲ್ಲಿ ನಡೆದ ವ್ಯಾಜ್ಯದಲ್ಲಿ ಸೋತವರು ಬರೆದುಕೊಟ್ಟ ಒಪ್ಪಂದ ಪತ್ರಗಳನ್ನು ಕುರಿತಂತೆ ಹಿರಿಯ ಇತಿಹಾಸ ಲೇಖಕ ಲಕ್ಷ್ಮಣ ತೆಲಗಾವಿಯವರು ಬರೆದ ಒಂದು ಅಧ್ಯಯನ ಲೇಖನ ಮತ್ತು ಲೇಖಕ ಎಸ್. ಆರ್ ಗುರುನಾಥ್ ಅವರು ಮಾದಿಗತನ ಎಂಬ ಪರಿಕಲ್ಪನೆಯ ಸುತ್ತ ವಿಸ್ತಾರವಾಗಿ ಹೆಣೆದ ಲೇಖನವಿದೆ. ಕೊನೆಯಲ್ಲಿ ತಮ್ಮಟೆ ಕಲೆಗಾಗಿ ಹಂಪಿ ವಿಶ್ವವಿದ್ಯಾಲಯದಿಂದ ನಾಡೋಜ ಗೌರವಕ್ಕೆ ಪಾತ್ರರಾದ ಪಿಂಡಿಪಾಪಹಳ್ಳಿ ಮುನಿವೆಂಕಟಪ್ಪನವರನ್ನು ಕುರಿತಂತೆ ಬೆಳಗಟ್ಟ ಅವರು ಬರೆದ ಒಂದು ಕಿರುಪರಿಚಯದ ಲೇಖನವಿದೆ.

ಮಾದಿಗ ಎನ್ನುವುದು ವರ್ಣಾಶ್ರಮ ಧರ್ಮದ ಶ್ರೇಣೀಕರಣದಲ್ಲಿ ಅತಿ ಕೆಳಗಿನ ವಿಂಗಡಣೆಯ ಮನುಷ್ಯರ ವೃತ್ತಿಸೂಚಕ ಪದವಾಗಿದ್ದು. ಒಮ್ಮೊಮ್ಮೆ ಅದನ್ನು ಬೈಗುಳವಾಗಿ ಬಳಸಲಾಗುತ್ತಿದೆಯಾದರೂ, ಗ್ರಾಮ ಬದುಕಿನ ಸ್ವಚ್ಛತೆಯೆಂಬ ಅತಿಮುಖ್ಯ ಸೇವೆಗೆ ನಿಯೋಜಿತವಾಗಿದ್ದ ಅನುವಂಶೀಯ ಸಮೂಹವೊಂದರ ಹೆಸರೂ ಆಗಿತ್ತು. ಇದನ್ನು ಅವಮಾನವೆಂದು ಭಾವಿಸದೆ ಹಕ್ಕು ಎಂದು ಪರಿಗಣಿಸಿದ್ದ ಕಾಲವೂ-ಅದೂ ಇತ್ತೀಚಿನವರೆಗೆ-ಒಂದಿತ್ತು ಎಂಬುದನ್ನು ಸೂಚಿಸುವ ಇಲ್ಲಿನ ಎರಡು ತಾಮ್ರಪತ್ರಗಳ ಅಧ್ಯಯನ ತನ್ನ ಶೈಕ್ಷಣಿಕ ಶಿಸ್ತಿನಿಂದ ಗಮನ ಸೆಳೆಯುವುದಾದರೂ ಅದರ ನಿಜವಾದ ಶೈಕ್ಷಣಿಕತೆ ಇರುವುದು ಅದು ಜಾತಿಪದ್ಧತಿಯನ್ನು ಕುರಿತ ನಮ್ಮ ಈವರೆಗಿನ ಮೀಮಾಂಸೆಯಲ್ಲಿ ಏನೋ ಒಂದು ಮೂಲದೋಷವಿದೆ ಎಂಬುದನ್ನು ಸೂಚಿಸುವುದರಲ್ಲಿದೆ ಎಂದು ನಾನು ಭಾವಿಸುತ್ತೇನೆ. ಇದು ಇಲ್ಲಿನ ಎರಡನೆಯ ಲೇಖನದಲ್ಲಿ, ಮಾದಿಗ ಎಂಬ ಶಬ್ದದ ಅರ್ಥ ವಿಶ್ಲೇಷಣೆಗಾಗಿ ಲೇಖಕರು ಈ ಸೃಷ್ಟಿಯ ಆರಂಭ ,'ಕಾಲದಿಂದ ಹಿಡಿದು ಬೌದ್ಧಮತ ಸ್ಥಾಪನೆಯವರೆಗಿನ ಆಕರಗಳನ್ನು ಪರಿಶೀಲಿಸಿ ಈ ಕುಲ ಒಂದು ಕಾಲದಲ್ಲಿ ಬ್ರಾಹ್ಮಣನೆನಿಸಿಕೊಂಡಿತ್ತು ಎಂದು ಸೂಚಿಸುವ ಅಸ್ಮಿತೆಯ ಶೋಧನೆಯ ರೀತಿ-ನೀತಿಗಳಲ್ಲಿ ವ್ಯಕ್ತವಾಗುತ್ತದೆ. ಆದರೆ ಈ ಹಿನ್ನೆಲೆಯಲ್ಲಿ ಈ ಲೇಖನ ಈ ಸಮುದಾಯದ ಸಾಂಸ್ಕೃತಿಕ ಸಂಪತ್ತಿಗಿಂತ ಹೆಚ್ಚಾಗಿ ಬಹು ಚರ್ಚಿತ ಅಂಬೇಡ್ಕರ್-ಜಗಜೀವನರಾಂ-ಬಿ,ಕೃಷ್ಣಪ್ಪಗಳ ಉಲ್ಲೇಖದ ಸಾಮಾಜಿಕ ಸ್ಥಿತಿಗತಿಗಳ ಸುತ್ತಲೇ ಗಿರಕಿ ಹೊಡೆಯುವುದು ನಿರಾಶೆ ಹುಟ್ಟಿಸುತ್ತದೆ. ಕುಲವೊಂದರ ಅಸ್ಮಿತೆಯ ಶೋಧನೆ ನಿಜವಾದ ಸಾರ್ಥಕತೆ ಇರುವುದು ಅದರ ಸಾಂಸ್ಕೃತಿಕ ಎಲ್ಲೆಗಳನ್ನು ಮುಟ್ಟುವಲ್ಲಿ ಎಂಬ ಅರಿವು ಇಲ್ಲಿ ಕಾಣೆಯಾಗಿದೆ. ತಮ್ಮಟೆ ಮುನಿವೆಂಕಟಪ್ಪನವರನ್ನು ಕುರಿತ ಕೊನೆಯ ಕಿರು ಲೇಖನ ತಮ್ಮಟೆ ವಾದನವೆಂಬ ವಿದ್ಯೆಯ ಒಂದು ಸಣ್ಣ ಝಲಕ್ ನೀಡಿ ಈ ಕೊರತೆಯನ್ನು ಚೂರಾದರೂ ನೀಗುತ್ತದೆ.

ಉಳಿದ ಐದು ಪುಸ್ತಕಗಳು ಬೆಳಗಟ್ಟ ಅವರೇ ನಡೆಸುವ 'ಬೆಳಗಟ್ಟ' ಎಂಬ ವಾರಪತ್ರಿಕೆಯಲ್ಲಿ ಪ್ರಕಟವಾದ ಕಥೆಗಳನ್ನು ತಲಾ ಹತ್ತು ಕಥೆಗಳಂತೆ ಸಂಗ್ರಹಿಸಿರುವ ಸಂಕಲನಗಳು. ಇವುಗಳಲ್ಲಿ ರಾಮಾಯಣ-ಮಹಾಭಾರತದ ಕಥೆಗಳಲ್ಲದೆ ವಡ್ಡಾರಾಧನೆಯ ಕಥೆಗಳು, ಮಾಸ್ತಿಯವರಿಂದ ಹಿಡಿದು ಪ್ರೇಮಾ ಭಟ್‌ರವರೆಗೆ, ಟ್ಯಾಗೂರರಿಂದ ಹಿಡಿದು ಪ್ರೇಂಚಂದ್‌ರವರೆಗೆ ಟಾಲ್‌ಸ್ಟಾಯ್‌ರಿಂದ ಹಿಡಿದು ಗಾರ್ಕಿಯವರೆಗಿನ ಕಥೆಗಳನ್ನು ಮೂರು-ನಾಲ್ಕು ಪುಟಗಳಲ್ಲಿ ಸಂಕ್ಷಿಪ್ತಗೊಳಿಸಿ ಕೊಡಲಾಗಿದೆ. ಕೆಲವು ಸ್ಥಳೀಯ ಲೇಖಕರ ಸ್ವಂತ ಕಥೆಗಳೂ ಅಲ್ಲಲ್ಲಿ ಕಾಣುತ್ತವೆ. ಕಥೆಗಳು ಸಂಕ್ಷಿಪ್ತಗೊಂಡ ಕಾರಣ ಕಥೆಗಾರಿಕೆಯ ಸೊಗಸು ಮಾಯವಾಗಿರುವುದು ನಿಜವಾದರೂ, ಈ ಪ್ರಯತ್ನದ ಹಿಂದಿರುವ ಸಾಮಾಜಿಕ ನೀತಿ ವಿಮರ್ಶೆಯ ದೃಷ್ಟಿಯಿಂದ ಈ ಪ್ರಯತ್ನ ಮೆಚ್ಚುಗೆ ಗಳಿಸುತ್ತವೆ. ಇವೆಲ್ಲವೂ 'ಬೆಳಗಟ್ಟ' ಪತ್ರಿಕೆಯ ಓದುಗರು ಮಾಡಿರುವ ಆಯ್ಕೆ ಮತ್ತು ಸಂಗ್ರಹ ಎಂಬ ದೃಷ್ಟಿಯಿಂದ ದಾವಣಗೆರೆ ಸುತ್ತಮುತ್ತಲ ಒಂದು ಸೀಮಿತ ಓದುಗ ವಲಯದ ಈ ಪತ್ರಿಕೆಯ ಈ ಪ್ರಯೋಗ ಅನನ್ಯವೂ, ದಾಖಲಾರ್ಹವೂ ಅಗಿದೆ.

**-ಡಿ.ಎಸ್. ನಾಗಭೂಷಣ**

**'ಹೊಸ ಮನುಷ್ಯ' ಓದುಗರಿಗೆಲ್ಲ**
**ನಮ್ಮ ಹಾರ್ದಿಕ ಶುಭಾಶಯಗಳು**



**–ಡಾ. ಸಿದ್ದಲಿಂಗಯ್ಯ**
ಮತ್ತು **ಕುಟುಂಬ**
**ಬೆಂಗಳೂರು**

**'ಹೊಸ ಮನುಷ್ಯ' ಓದುಗರಿಗೆಲ್ಲ**
**ನಮ್ಮ ಹಾರ್ದಿಕ ಶುಭಾಶಯಗಳು**



**ದೋ. ತಿಪ್ಪೇಶ್**
ಮತ್ತು **ಕುಟುಂಬ**
**ಹೊಸದುರ್ಗ(ಚಿತ್ರದುರ್ಗ ಜಿ.)**

**'ಹೊಸ ಮನುಷ್ಯ' ಓದುಗರಿಗೆಲ್ಲ**
**ನಮ್ಮ ಹಾರ್ದಿಕ ಶುಭಾಶಯಗಳು**



**ಕುವೆಂಪು ವಿಚಾರ ವೇದಿಕೆ**

**'ಸರ್ವೋದಯ', # ೭೨, ಪ್ರೊ. ಎ.ಆರ್. ಕೃಷ್ಣಶಾಸ್ತ್ರಿ ರಸ್ತೆ,**
**ಬಸವನಗುಡಿ, ಬೆಂಗಳೂರು-೫೬೦೦೦೪**

## ತಿಂಗಳ ಕೊನೆಯ ಸಾಲುಗಳು



ಕೆರೆಯ ನೀರನು ಕೆರೆಗೆ ಚೆಲ್ಲಿ
ವರವ ಪಡೆದವರಂತೆ ಕಾಣಿರೋ!

-ಶ್ರೀ ಪುರಂದರ ದಾಸರು

**ಶುಭಾಶಯಗಳೊಂದಿಗೆ,**

**ಕೆ.ಎನ್. ಮಂಜುನಾಥ್**
**ಕಾಫಿ ಬೆಳೆಗಾರರು**
**ಸಕಲೇಶಪುರ**

HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrial Town, Rajaji Nagara, Bengaluru-560 044 Ph: 08023357963

**Regd. News Paper RNI No. KARKAN/2012/47568**
**Rgd No. KA/SK/SMG-1209/2019-21**

ಇವರಿಗೆ \ To

If undelivered, please return to D.S. Nagabhushana, Editor,
'Hosa Manushya', 'HIG-5, 'Nudi', Kallahalli Extension,
Vinoba Nagara, Shivamogga -577204( Karnataka)